ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 17 ಗುರುವಾರ 2025

46

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 91 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಹಿಂದುಳಿದ ವರ್ಗಗಳಿಗೆ ಸೂಕ್ತ ಮೀಸಲಾತಿ ಕಲ್ಪಿಸಿ

- ಎಐಸಿಸಿ ಹಿಂದುಳಿದ ವರ್ಗಗಳ ರಾಷ್ಟ್ರೀಯ ಸಲಹಾ ಮಂಡಳಿ ಕೇಂದ್ರಕ್ಕೆ ಆಗ್ರಹ
- ಹಿಂದುಳಿದ ವರ್ಗಕ್ಕೆ ಶಿಕ್ಷಣ, ಉದ್ಯೋಗ, ರಾಜಕೀಯ ಅವಕಾಶ ಸಿಗಬೇಕು
- ಮಂಡಳಿ ನೇತೃತ್ವ ವಹಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯರಿಂದ ಮಾಹಿತಿ

ಬೆಂಗಳೂರು, ಜು. 16(ಕೆಎಂಶಿ)– ಹಿಂದುಳಿದ ವರ್ಗಗಳಿಗೆ ಶೈಕ್ಷಣಿಕ, ಉದ್ಯೋಗ ಹಾಗೂ ರಾಜಕೀಯವಾಗಿ ಅವಕಾಶ ಕಲ್ಪಿಸಲು ಮೀಸಲಾತಿ ಪ್ರಮಾಣವನ್ನು ಸೂಕ್ತ ರೀತಿ ರೂಪಿಸುವಂತೆ ಎಐಸಿಸಿ ಹಿಂದುಳಿದ ವರ್ಗಗಳ ರಾಷ್ಟ್ರೀಯ ಸಲಹಾ ಮಂಡಳಿ ಇಂದಿಲ್ಲಿ ನಿರ್ಣಯ ಕೈಗೊಂಡು ಕೇಂದ್ರ ಸರ್ಕಾರವನ್ನು ಆಗ್ರಹಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಕಳೆದ ಎರಡು ದಿನಗಳಿಂದ ಸಭೆ ನಡೆಸಿದ ಮಂಡಳಿ, ಮೂರು ಮಹತ್ವದ ನಿರ್ಣಯಗಳನ್ನು ಕೈಗೊಂಡಿದೆ. ಸಭೆ ನಂತರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಸಿದ್ದರಾಮಯ್ಯ, ಜಾತಿ ವ್ಯವಸ್ಥೆ ನಿರ್ಮೂಲನೆಗೆ ತುಳಿತಕ್ಕೊಳಗಾದ ಸಮಾಜದವರಿಗೆ ಆರ್ಥಿಕ, ಶೈಕ್ಷಣಿಕ ಮತ್ತು ರಾಜಕೀಯ ಮೀಸಲಾತಿ ಅಗತ್ಯವಿದೆ ಎಂದರು.

ಸಂವಿಧಾನ ವಿಧಿ 15(5)ರನ್ವಯ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಮೀಸಲಾತಿ ಕಲ್ಪಿಸಬೇಕು, ಇದರಿಂದ ಹಿಂದುಳಿದ ವರ್ಗದವರ ಅಭಿವೃದ್ಧಿಗೆ ಸಹಕಾರಿಯಾಗಲಿದೆ.

ತೆಲಂಗಾಣ ಮಾದರಿಯಲ್ಲಿ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸ್ಥಿತಿಗತಿ ಒಳಗೊಂಡಂತೆ ಕೇಂದ್ರ ಸರ್ಕಾರ ಜಾತಿಗಣತಿ ನಡೆಸಿ, ಎಲ್ಲಾ ವರ್ಗಕ್ಕೂ ಅವಕಾಶಗಳು ದೊರೆಯುವಂತೆ ಮಾಡಬೇಕು. ನಮ್ಮ ನಾಯಕ ರಾಹುಲ್ ಗಾಂಧಿ ದೃಢಸಂಕಲ್ಪವು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಮನುವಾದಿ ಸರ್ಕಾರವನ್ನು ಭಾರತದಲ್ಲಿ ಜಾತಿ ಜನಗಣತಿಯ ನ್ಯಾಯಯುತ ಮತ್ತು ಸಂವಿಧಾನಾತ್ಮಕ ಬೇಡಿಕೆಗೆ ಶರಣಾಗುವಂತೆ ಮಾಡಿದೆ. ಈ ಐತಿಹಾಸಿಕ ಸಾಧನೆಗೆ ರಾಹುಲ್ ಗಾಂಧಿ ಅವರಿಗೆ ರಾಷ್ಟ್ರದ ಎಲ್ಲಾ ಹಿಂದುಳಿದ ವರ್ಗಗಳ ಪರವಾಗಿ ಮಂಡಳಿಯು ಕೃತಜ್ಞತೆ ವ್ಯಕ್ತಪಡಿಸುತ್ತದೆ. ಸಂವಿಧಾನದಲ್ಲಿ ಕಲ್ಪಿಸಿರುವಂತೆ ಸಾಮಾಜಿಕ ನ್ಯಾಯ ಖಚಿತಪಡಿಸಿಕೊಳ್ಳುವಲ್ಲಿ ಜಾತಿಗಣತಿ ಒಂದು ಸಣ್ಣ ಹೆಜ್ಜೆ. ನಾವು ರಾಹುಲ್ ಗಾಂಧಿ ನಾಯಕತ್ವದಲ್ಲಿ ಸಮಾನತೆ ಮತ್ತು ಸಮಸಮಾಜ ನಿರ್ಮಾಣಕ್ಕೆ ಕಾರಣವಾಗುವ ಸಾಮಾಜಿಕ ಪರಿವರ್ತನೆಯ ಸಂವಿಧಾನಿಕ ಉದ್ದೇಶಗಳನ್ನು ಈಡೇರಿಸಿಕೊಳ್ಳಲು ಸಭೆ ನಿರ್ಣಯ ಕೈಗೊಂಡಿದೆ. ಜಾತಿಗಣತಿ ನಡೆಸಲು ಕೇಂದ್ರ ತೀರ್ಮಾನಿಸಿದ್ದು, ಭಾರತೀಯ ಜನಗಣತಿ ಆಯೋಗ ತೆಲಂಗಾಣ ಮಾದರಿಯನ್ನು ಅನುಸರಿಸಬೇಕು ಎಂದು ನಿರ್ಣಯ ಒತ್ತಾಯಿಸಿದೆ. ಸಂವಿಧಾನದ ಉದ್ದೇಶದಂತೆ ಸಮಾನತೆಯ ಸಮಾಜ ನಿರ್ಮಾಣ ಮಾಡಬೇಕು, ನ್ಯಾಯ ಯೋಧನಂತೆ ಕಾಂಗ್ರೆಸ್ ಮುನ್ನಡೆಯಲಿದೆ ಎಂದಿದೆ ಎಂದರು.



> ಪ್ರತಿಯೊಬ್ಬ ವ್ಯಕ್ತಿಯ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಉದ್ಯೋಗ, ರಾಜಕೀಯ ಅಂಶಗಳನ್ನು ಜಾತಿಗಣತಿ ಒಳಗೊಂಡಿರಬೇಕು. ಜೊತೆಗೆ ಜಾತಿಗಳನ್ನು ಪ್ರಮುಖವಾಗಿ ಪರಿಗಣಿಸಬೇಕು.
> –ಸಿದ್ದರಾಮಯ್ಯ

ನಾಯಕತ್ವ ಸಂಬಂಧ ವರಿಷ್ಠರ ತೀರ್ಮಾನಕ್ಕೆ ನಾವೆಲ್ಲಾ ಬದ್ಧ

ಬೆಂಗಳೂರು, ಜು. 16(ಕೆಎಂಶಿ)–ನಾಯಕತ್ವ ವಿಚಾರಕ್ಕೆ ಪಕ್ಷದ ವರಿಷ್ಠರು ತೆಗೆದುಕೊಳ್ಳುವ ತೀರ್ಮಾನಕ್ಕೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ನಾನು ಬದ್ಧರಾಗಿರುತ್ತೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಸ್ಪಷ್ಟಪಡಿಸಿದ್ದಾರೆ.

ಕಳೆದ ಕೆಲವು ದಿನಗಳ ಹಿಂದೆ ದೆಹಲಿಯಲ್ಲಿ, ಐದು ವರ್ಷ ನಾನೇ ಮುಖ್ಯಮಂತ್ರಿ ಎಂಬುದಾಗಿ ಹೇಳಿಕೊಂಡಿದ್ದ ಸಿದ್ದರಾಮಯ್ಯ, ಇಂದು ತಮ್ಮ ನಿಲುವಿನಲ್ಲಿ ಬದಲಾವಣೆ ಮಾಡಿಕೊಂಡಿದ್ದಾರೆ. ಎಐಸಿಸಿ ಹಿಂದುಳಿದ ವರ್ಗಗಳ ಸಲಹಾ ಮಂಡಳಿಯ ಮೊದಲ ಸಭೆ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾಯಕತ್ವ ಸೇರಿದಂತೆ ವರಿಷ್ಠರು ತೆಗೆದುಕೊಳ್ಳುವ ಯಾವುದೇ ತೀರ್ಮಾನಗಳಿಗೆ ಬದ್ಧವಾಗಿರುತ್ತೇವೆ. ಸಭೆ ನಿರ್ಣಯಗಳನ್ನು ಪ್ರಕಟಿಸಿದ ನಂತರ ಮಂಡಳಿ ಸಂಚಾಲಕ ಅನಿಲ್ ಜೈಹಿಂದ್, ಹಿಂದುಳಿದ ವರ್ಗದ ನಾಯಕ ಸಿದ್ದರಾಮಯ್ಯ ವರ್ಚಸ್ಸನ್ನು ಕಾಂಗ್ರೆಸ್ ಇಡೀ ರಾಷ್ಟ್ರದಲ್ಲಿ ಬಳಕೆ ಮಾಡಕೊಳ್ಳಲಿದೆ. ಜೈಹಿಂದ್ ತಮ್ಮ ಹೇಳಿಕೆ ಮುಗಿಸುತ್ತಿದ್ದಂತೆ ಮಾಧ್ಯಮದವರು, ಸಿದ್ದರಾಮಯ್ಯ ಅವರನ್ನು ಕಾಂಗ್ರೆಸ್ ಹಿಂದುಳಿದ ವರ್ಗಗಳ ನಾಯಕ ಎಂಬುದಾಗಿ ಬಿಂಬಿಸುತ್ತಿದೆ. ಆದರೆ, ಕರ್ನಾಟಕದಲ್ಲಿ ನಾಯಕತ್ವ ಬದಲಾವಣೆ ಜೋರಾಗಿದೆಯಲ್ಲ ಎಂದಾಗ, ಸುದ್ದಿಗೋಷ್ಠಿಯಲ್ಲಿದ್ದ ನಾಯಕರಿಂದ ಸ್ಪಷ್ಟ ಉತ್ತರ ಬರಲಿಲ್ಲ. ಮಧ್ಯಪ್ರವೇಶಿಸಿದ ಸಿದ್ದರಾಮಯ್ಯ, ಈ ಪ್ರಶ್ನೆ ಇಲ್ಲಿ ಅಪ್ರಸ್ತುತ. ಸಭೆಗೆ ಸಂಬಂಧಿಸಿದ್ದಲ್ಲ. ನೀವು ಕೇಳುವ ಪ್ರಶ್ನೆ ವಿಚಾರದಲ್ಲಿ ವರಿಷ್ಠರು ಕೈಗೊಳ್ಳುವ ತೀರ್ಮಾನವೇ ಅಂತಿಮ ಎಂದರು.

ಇಂದು ನಾಡದೇವತೆ ಚಾಮುಂಡೇಶ್ವರಿ ವರ್ಧಂತಿ ಉತ್ಸವ

- ಮೈಸೂರು ರಾಜವಂಶಸ್ಥರು ಭಾಗಿ
- ಭಕ್ತರಿಗೆ ವಿಶೇಷ ಬಸ್ ವ್ಯವಸ್ಥೆ



ಮೈಸೂರು, ಜು.16(ಎಂಕೆ)–ನಾಡ ಅಧಿದೇವತೆ ಶ್ರೀ ಚಾಮುಂಡೇಶ್ವರಿ ತಾಯಿಯ ವರ್ಧಂತಿ ಉತ್ಸವ ನಾಳೆ (ಜು.17) ಚಾಮುಂಡಿಬೆಟ್ಟದಲ್ಲಿ ಸಡಗರ–ಸಂಭ್ರಮದಿಂದ ಜರುಗಲಿದ್ದು, ಚಿನ್ನದ ಪಲ್ಲಕ್ಕಿ ಉತ್ಸವದೊಂದಿಗೆ ನಡೆಯುವ ವಿವಿಧ ಧಾರ್ಮಿಕ ಕಾರ್ಯಕ್ರಮದಲ್ಲಿ ರಾಜವಂಶಸ್ಥರು ಭಾಗವಹಿಸಲಿದ್ದಾರೆ. ಮೈಸೂರು ರಾಜವಂಶಸ್ಥರ ಕುಲದೇವತೆಯೂ ಆದ ತಾಯಿ ಚಾಮುಂಡೇಶ್ವರಿಯ ವರ್ಧಂತಿ ಉತ್ಸವದ ಹಿನ್ನೆಲೆಯಲ್ಲಿ ದೇವಸ್ಥಾನದಲ್ಲಿ ವಿಶೇಷ ಪೂಜಾ ಕೈಂಕರ್ಯಗಳು ನೆರವೇರಲಿದ್ದು, ▶ 6ನೇ ಪುಟಕ್ಕೆ

ಮುಂದಿನ 7 ದಿನ ರಾಜ್ಯಾದ್ಯಂತ ಭಾರಿ ಮಳೆ ಸಾಧ್ಯತೆ

ಬೆಂಗಳೂರು: ಮುಂದಿನ ಏಳು ದಿನಗಳಲ್ಲಿ ಕರ್ನಾಟಕ ರಾಜ್ಯಾದ್ಯಂತ ಭಾರೀ ಮಳೆಯಾಗುವ ನಿರೀಕ್ಷೆಯಿದೆ ಎಂದು ಹವಾಮಾನ ಇಲಾಖೆ ಎಚ್ಚರಿಕೆ ನೀಡಿದೆ. ಪ್ರಮುಖವಾಗಿ ಕರಾವಳಿ ಕರ್ನಾಟಕದಲ್ಲಿ ಭಾರಿ ಮಳೆಯಾಗಲಿದೆ. ಕರಾವಳಿ ಕರ್ನಾಟಕದ ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಭಾರೀ ಮಳೆಯಾಗುವ ಸಾಧ್ಯತೆ ಇದೆ. ಮಳೆಯೊಂದಿಗೆ ಬಲವಾದ ಮೇಲ್ಮೈ ಗಾಳಿಯೂ ನಿರೀಕ್ಷಿಸಲಾಗಿದ್ದು, ಗಂಟೆಗೆ 30–40 ಕಿ.ಮೀ. ವೇಗದಲ್ಲಿ ಬೀಸುವ ಸಾಧ್ಯತೆಯಿದೆ. ಜು.16ರಂದು ಕರಾವಳಿ ಕರ್ನಾಟಕದಲ್ಲಿ ಭಾರೀ ಮಳೆಯಾಗುವ ಸಾಧ್ಯತೆ ಇದೆ. ಜು.15ರಿಂದ 19ರ ನಡುವೆ ಗಾಳಿಯ ವೇಗ ▶ 6ನೇ ಪುಟಕ್ಕೆ

ಆ.5ರಿಂದ ಸಾರಿಗೆ ನಿಗಮಗಳ ನೌಕರರ ಅನಿರ್ದಿಷ್ಟಾವಧಿ ಮುಷ್ಕರ

ಬೆಂಗಳೂರು: ಸಾರಿಗೆ ನೌಕರರಿಗೆ ಭತ್ಯೆ ಮತ್ತು ವೇತನ ಹೆಚ್ಚಳ ಸೇರಿದಂತೆ ವಿವಿಧ ಬೇಡಿಕೆಗಳಿಗೆ ಆಗ್ರಹಿಸಿ ರಾಜ್ಯ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ಆ.5ರಂದು ಬೆಳಗ್ಗೆ 6 ಗಂಟೆಯಿಂದ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಕರೆ ನೀಡಿದೆ. ರಾಜ್ಯದ ಕೆಎಸ್‌ಆರ್‌ಟಿಸಿ, ಬಿಎಂಟಿಸಿ ಸೇರಿದಂತೆ ನಾಲ್ಕು ನಿಗಮಗಳ ನೌಕರರು ಮುಷ್ಕರಕ್ಕೆ ಮುಂದಾಗಿದ್ದಾರೆ. ಜನವರಿಯಲ್ಲೇ 4 ನಿಗಮಗಳ ಸಾರಿಗೆ ನೌಕರರಿಗೆ 38 ತಿಂಗಳ ಭತ್ಯೆ ಹೆಚ್ಚಳ ಮಾಡಬೇಕಿತ್ತು. ಆದರೆ ಈವರೆಗೆ ಮಾಡಿಲ್ಲ. ಹೀಗಾಗಿ ಸರ್ಕಾರದ ನಡೆ ಖಂಡಿಸಿ ಮುಷ್ಕರಕ್ಕೆ ಕರೆ ನೀಡಲಾಗಿದೆ. ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ಮುಖಂಡ ಅನಂತ ಸುಬ್ಬರಾವ್ ನೇತೃತ್ವದಲ್ಲಿ ಮುಷ್ಕರ ನಡೆಯಲಿದೆ. ಈ ಬಗ್ಗೆ ಪ್ರತಿಕ್ರಿಯಿಸಿರುವ ಅವರು, ಸಾರಿಗೆ ಮುಷ್ಕರದ ಬಗ್ಗೆ ಸಿಎಂಗೆ ಇ–ಮೇಲ್ ಮೂಲಕ ಮುಷ್ಕರದ ನೋಟಿಸ್ ಕಳಿಸಿದ್ದೇವೆ ಎಂದು ತಿಳಿಸಿದ್ದಾರೆ.

ಗೋಲ್ಡ್ ಸ್ಮಗ್ಲಿಂಗ್ ಕೇಸ್: ರನ್ಯಾರಾವ್‌ಗೆ ಒಂದು ವರ್ಷ ಜೈಲೇ ಗತಿ



ಬೆಂಗಳೂರು: ಚಿನ್ನ ಕಳ್ಳಸಾಗಾಣಿಕೆ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿರುವ ಸ್ಯಾಂಡಲ್‌ವುಡ್ ನಟಿ ರನ್ಯಾರಾವ್ ಒಂದು ವರ್ಷ ಜೈಲಿನಲ್ಲೇ ಇರಬೇಕಾದ ಅನಿವಾರ್ಯ ಸ್ಥಿತಿ ಎದುರಾಗಿದೆ. ರನ್ಯಾರಾವ್ ವಿರುದ್ಧ ಕಾಫಿ ಪೋಸಾ ಕಾಯ್ದೆಯನ್ನು ಜಾರಿ ಮಾಡಲಾಗಿದೆ. ಹೀಗಾಗಿ ರನ್ಯಾರಾವ್ ಒಂದು ವರ್ಷ ಕಾಲ ಜೈಲಿನಲ್ಲೇ ಇರಬೇಕಾದ ಅನಿವಾರ್ಯತೆ ▶ 6ನೇ ಪುಟಕ್ಕೆ

ಸುಗಮ ಸಂಗೀತ ಪರಿಷತ್ತಿನ ಪ್ರಶಸ್ತಿ ಪ್ರಕಟ
ಬಿ.ಆರ್.ಲಕ್ಷ್ಮಣರಾವ್‌ಗೆ ಕಾವ್ಯ ಶ್ರೀ

ಬೆಂಗಳೂರು: ಕರ್ನಾಟಕ ಸುಗಮ ಸಂಗೀತ ಪರಿಷತ್ತಿನ 2023 ಹಾಗೂ 2024ನೇ ಸಾಲಿನ 'ಕಾವ್ಯ ಶ್ರೀ' ಮತ್ತು 'ಭಾವ ಶ್ರೀ' ಪ್ರಶಸ್ತಿಗಳನ್ನು ಪ್ರಕಟಿಸಲಾಗಿದೆ.



ಬಿ.ಆರ್.ಲಕ್ಷ್ಮಣರಾವ್

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪರಿಷತ್ತಿನ ಅಧ್ಯಕ್ಷ ವೈ.ಕೆ.ಮುದ್ದುಕೃಷ್ಣ, '2023ನೇ ಸಾಲಿನ 'ಕಾವ್ಯ ಶ್ರೀ' ಪ್ರಶಸ್ತಿಗೆ ಕವಿ ಬಿ.ಆರ್.ಲಕ್ಷ್ಮಣರಾವ್ ಮತ್ತು 'ಭಾವ ಶ್ರೀ' ಪ್ರಶಸ್ತಿಗೆ ಗಾಯಕಿ ರತ್ನಮಾಲಾ ಪ್ರಕಾಶ್ ಆಯ್ಕೆಯಾಗಿದ್ದಾರೆ. 2024ನೇ ಸಾಲಿನ 'ಕಾವ್ಯ ಶ್ರೀ' ಪ್ರಶಸ್ತಿಗೆ ಸಾಹಿತಿ ನಾ.ದಾಮೋದರ ಶೆಟ್ಟಿ ಮತ್ತು 'ಭಾವ ಶ್ರೀ' ಪ್ರಶಸ್ತಿಗೆ ಗಾಯಕಿ ಕೆ.ಎಸ್.ಸುರೇಖಾ ಆಯ್ಕೆಯಾಗಿದ್ದಾರೆ. ಪ್ರಶಸ್ತಿಯು ತಲಾ 10 ಸಾವಿರ ನಗದು, ಪ್ರಶಸ್ತಿ ಪತ್ರ ಹಾಗೂ ಫಲಕವನ್ನು ಒಳಗೊಂಡಿದೆ ಎಂದರು. ಆಗಸ್ಟ್ 2 ಮತ್ತು 3ರಂದು ಮೈಸೂರಿನಲ್ಲಿ ನಡೆಯಲಿರುವ ರಾಜ್ಯಮಟ್ಟದ 19ನೇ ಸುಗಮ ಸಂಗೀತ ಸಮ್ಮೇಳನದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದರು.

ನಿತ್ಯ 1.05 ಕೋಟಿ ಲೀಟರ್ ಹಾಲು: ದಾಖಲೆ ಬರೆದ ಕೆಎಂಎಫ್

ಬೆಂಗಳೂರು: ರಾಜ್ಯದಲ್ಲಿ ಕಳೆದೊಂದು ತಿಂಗಳಿಂದ ಹೆಚ್ಚು ಹಾಲು ಉತ್ಪಾದನೆಯಾಗುತ್ತಿದ್ದು, ಈ ಮೂಲಕ ಕೆಎಂಎಫ್ ಇತಿಹಾಸದಲ್ಲೇ ಮೊದಲ ಬಾರಿಗೆ ಅತೀ ಹೆಚ್ಚು ಹಾಲು ಸಂಗ್ರಹವಾಗುತ್ತಿದೆ. ಕಳೆದ ವರ್ಷ ಜೂನ್ ಹಾಗೂ ಜುಲೈ ತಿಂಗಳಲ್ಲಿ 90 ಲಕ್ಷ ಲೀಟರ್ ಹಾಲು ಉತ್ಪಾದನೆಯಾಗುತ್ತಿತ್ತು. ಆದರೆ ಈ ವರ್ಷದ ಮೇ ತಿಂಗಳಾಂತ್ಯದಿಂದ ನಿತ್ಯ ಕೋಟಿಗಿಂತಲೂ ಹೆಚ್ಚು ಹಾಲು ಉತ್ಪಾದನೆಯಾಗುತ್ತಿದ್ದು, ಪ್ರಸ್ತುತ ರಾಜ್ಯದಲ್ಲಿ ಕೆಎಂಎಫ್‌ನಲ್ಲಿ ದಿನನಿತ್ಯ 1.05 ಕೋಟಿ ಲೀಟರ್ ಹಾಲು ಸಂಗ್ರಹವಾಗುತ್ತಿದೆ. ಕಳೆದ ಒಂದು ತಿಂಗಳಿಂದ ರಾಜ್ಯದಲ್ಲಿ ಮಳೆಯಾಗುತ್ತಿದ್ದು, ವಾತಾವರಣ ತಂಪಾದ ಕಾರಣ ಹಸಿರು ಮೇವು ಸಿಗುತ್ತಿದೆ. ಹೀಗಾಗಿ ಹಾಲು ಸಂಗ್ರಹದಲ್ಲಿ ಹೆಚ್ಚಳವಾಗಿದೆ. ನಿತ್ಯ ಸಂಗ್ರಹವಾದ ಒಂದು ಕೋಟಿ ಹಾಲಿನಲ್ಲಿ 80 ಲಕ್ಷ ಲೀಟರ್ ಗ್ರಾಹಕರಿಗೆ ಮಾರಾಟ ಮಾಡಲಾಗುತ್ತಿದೆ. ಸಂಗ್ರಹವಾದ ಹೆಚ್ಚುವರಿ ಹಾಲಿನಿಂದ ಹಾಲಿನ ಪುಡಿ, ಮೊಸರು, ವಿವಿಧ ಮೌಲ್ಯವರ್ಧಿತ ಉತ್ಪನ್ನ ತಯಾರಿಸಲಾಗುತ್ತಿದೆ ಎಂದು ಕೆಎಂಎಫ್ ತಿಳಿಸಿದೆ. ಈ ಬಾರಿ ಮಳೆಗಾಲದಲ್ಲೇ 1.25 ಕೋಟಿ ಲೀಟರ್ ಹಾಲು ಸಂಗ್ರಹ ಗುರಿಯನ್ನು ಹೊಂದಿದ್ದು, ಒಂದು ತಿಂಗಳಿಂದ ನಿರಂತರವಾಗಿ 1.05 ಕೋಟಿ ಹಾಲು ಸಂಗ್ರಹವಾಗುತ್ತಿದೆ.



ರೌಡಿಶೀಟರ್ ಹತ್ಯೆ ಕೇಸ್
ಬಿಜೆಪಿ ಶಾಸಕ ಭೈರತಿ ಬಸವರಾಜ್ ಸೇರಿ ಐವರ ವಿರುದ್ಧ ಎಫ್‌ಐಆರ್

ಬೆಂಗಳೂರು: ಬಿಜೆಪಿ ಶಾಸಕ ಹಾಗೂ ಮಾಜಿ ಸಚಿವ ಭೈರತಿ ಬಸವರಾಜ್ ವಿರುದ್ಧ ರೌಡಿಶೀಟರ್ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಎಫ್‌ಐಆರ್ ದಾಖಲಾಗಿದೆ. ನಿನ್ನೆ (ಮಂಗಳವಾರ) ರಾತ್ರಿ ಬೆಂಗಳೂರಿನ ಭಾರತಿನಗರದಲ್ಲಿ ಕಾರಿನಲ್ಲಿ ಬಂದ ಹಂತಕರು ರೌಡಿಶೀಟರ್ ಶಿವಪ್ರಕಾಶ್ ಅಲಿಯಾಸ್ ಬಿಕ್ಲು ಶಿವು ಎಂಬಾತನನ್ನು ಕೊಲೆ ಮಾಡಿದ್ದಾರೆ. ಮೃತನ ತಾಯಿ ನೀಡಿದ ದೂರಿನ ಆಧಾರದ ಮೇಲೆ ಭೈರತಿ ಬಸವರಾಜ್ ಜೊತೆಗೆ ಇತರರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.



ಭೈರತಿ ಬಸವರಾಜ್

ಶಿವಪ್ರಕಾಶ್ ತಾಯಿ ವಿಜಯಲಕ್ಷ್ಮಿ ನೀಡಿದ ದೂರಿನಲ್ಲಿ ಎಂಟರಿಂದ ಒಂಬತ್ತು ಜನರು ತಮ್ಮ ಮಗನ ಮೇಲೆ ಕಬ್ಬಿಣದ ರಾಡ್ ಮತ್ತು ▶ 6ನೇ ಪುಟಕ್ಕೆ

ಚೆಲುವಾಂಬ ಆಸ್ಪತ್ರೆಯಲ್ಲಿ ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳಿಗೆ ಕಳಪೆ ಆಹಾರ ಪೂರೈಕೆ

ಇಬ್ಬರು ಸಿಬ್ಬಂದಿ ಅಮಾನತಿಗೆ ಸೂಚನೆ


- ಕರ್ನಾಟಕ ರಾಜ್ಯ ಆಹಾರ ಆಯೋಗದ ಅಧ್ಯಕ್ಷ ಡಾ. ಹೆಚ್. ಕೃಷ್ಣ ಕಣ್ಣಿಗೆ ಬಿದ್ದ ಕರ್ಮಕಾಂಡ
- ಹುಳುಗಳಿರುವ ಅವಲಕ್ಕಿ, ಅವಧಿ ಮುಗಿದ ರವೆ, ಕಳಪೆ ಗುಣಮಟ್ಟದ ಕಡಲೆ ಬೀಜ
- ಹೊಸ ಹಾಸಿಗೆಗಳ ಇಟ್ಟುಕೊಂಡು ಹಾಳಾದ ಹಾಸಿಗೆಗಳ ಮೇಲೆ ಮಕ್ಕಳು ಮಲಗಿವೆ
- ಆಹಾರ ಪೂರೈಕೆದಾರರಿಗೂ ನೋಟಿಸ್ ನೀಡಲು ತಾಕೀತು

ಮೈಸೂರು,ಜು.16(ಎಂಕೆ)–ತೀವ್ರ ಅಪೌಷ್ಟಿಕತೆಯಿಂದ ಚೆಲುವಾಂಬ ಆಸ್ಪತ್ರೆಗೆ ದಾಖಲಾದ ಮಕ್ಕಳಿಗೆ ಹುಳು ಇರುವ ಅವಲಕ್ಕಿ, ಬಳಕೆಯ ಅವಧಿ ಪೂರ್ಣಗೊಂಡ ರವೆ, ಕಳಪೆ ಗುಣಮಟ್ಟದ ಕಡಲೆ ಬೀಜ ಬಳಕೆ ಮಾಡುತ್ತಿರುವ ಹಿನ್ನೆಲೆಯಲ್ಲಿ ಆಸ್ಪತ್ರೆಯ ಇಬ್ಬರು ಸಿಬ್ಬಂದಿಯನ್ನು ಅಮಾನತುಗೊಳಿಸುವಂತೆ ಕರ್ನಾಟಕ ರಾಜ್ಯ ಆಹಾರ ಆಯೋಗದ ಅಧ್ಯಕ್ಷ ಡಾ.ಹೆಚ್.ಕೃಷ್ಣ ಸೂಚಿಸಿದರು.

ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಡೀನ್ ಕಚೇರಿಯಲ್ಲಿ ಬುಧವಾರ ಸುದ್ದಿಗೋಷ್ಠಿ ನಡೆಸಿದ ಅವರು, ಚೆಲುವಾಂಬ ಆಸ್ಪತ್ರೆಯಲ್ಲಿ ಅಪೌಷ್ಟಿಕತೆ ಯಿಂದ ಬಳಲುವ ಮಕ್ಕಳ ವಾರ್ಡ್‌ಗೆ ಭೇಟಿ ನೀಡಿ ಮೂಲಸೌಕರ್ಯಗಳನ್ನು ಪರಿಶೀಲಿಸಿದ್ದು, ತೀವ್ರ ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳಿಗೆ ಕಳಪೆ ಗುಣಮಟ್ಟದ ಆಹಾರ ನೀಡಲಾಗುತ್ತಿದೆ ಎಂದು ತೀವ್ರ ಅಸಮಾದಾನ ಹೊರಹಾಕಿದರು.

ಮಕ್ಕಳಿಗೆ ಆಹಾರ ತಯಾರಿಸಲು ಬಳಕೆ ಮಾಡುತ್ತಿದ್ದ ಹುಳು ಇರುವ ಅವಲಕ್ಕಿ(ಯಾವುದೇ ಬ್ರಾಂಡ್‌ನ ಹೆಸರು ಇರಲಿಲ್ಲ), ಬಳಕೆಯ ಅವಧಿ ಪೂರ್ಣಗೊಂಡ ರವೆ ಹಾಗೂ ಫುಡ್ ಲೈಸೆನ್ಸ್ ಮುದ್ರೆ ಇಲ್ಲದ ಕಳಪೆ ಗುಣಮಟ್ಟದ ಕಡಲೆ ಬೀಜ ಬಳಕೆ ಮಾಡುತ್ತಿರುವುದು ಕಂಡು ಬಂದಿದ್ದಲ್ಲದೆ, ಮಕ್ಕಳಲ್ಲಿ ಪೌಷ್ಠಿಕಾಂಶ ಹೆಚ್ಚು ಮಾಡುವ ಕೆಲಸ ಮಾಡಬೇಕಾದ ನೀವುಗಳೇ ಹುಳು ಬಿದ್ದ ಆಹಾರವನ್ನು ನೀಡಿ ಮಕ್ಕಳ ಆರೋಗ್ಯ ಮತ್ತಷ್ಟು ಹದಗೆಡುವಂತೆ ಮಾಡುತ್ತಿರುವುದು ಸರಿಯೇ ಎಂದು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ಅಲ್ಲದೇ ಇದಕ್ಕೆ ಕಾರಣರಾದ ಪ್ರಭಾರ ನರ್ಸಿಂಗ್ ಮೇಲ್ವಿಚಾರಕಿ ಲೀಲಾವತಿ ಹಾಗೂ ಡಯಟ್ ನಿರ್ವಹಣೆ ಜವಾಬ್ದಾರಿ ಹೊತ್ತಿರುವ ಹೊರಗುತ್ತಿಗೆ ನೌಕರ ಲಾರೆನ್ಸ್ ಎಂಬುವರನ್ನು ಕೂಡಲೇ ಅಮಾನತುಗೊಳಿಸುವಂತೆ ಎಂಎಂಸಿ ಅಂಡ್ ಆರ್‌ಐ ನಿರ್ದೇಶಕಿ ಕೆ.ಆರ್.ದಾಕ್ಷಾಯಣಿ ಅವರಿಗೆ ಸೂಚಿಸಿದರು. ▶ 6ನೇ ಪುಟಕ್ಕೆ



ಮೈಸೂರು ಮೆಡಿಕಲ್ ಕಾಲೇಜು–ಸಂಶೋಧನಾ ಸಂಸ್ಥೆಯ ಡೀನ್ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ಆಹಾರ ಆಯೋಗದ ಅಧ್ಯಕ್ಷ ಡಾ.ಹೆಚ್.ಕೃಷ್ಣ ಕಳಪೆ ಗುಣಮಟ್ಟದ ಆಹಾರ ಪದಾರ್ಥಗಳ ಬಳಕೆ ಕುರಿತು ಮಾಹಿತಿ ನೀಡಿದರು.

ಕುಡಿಯುವ ನೀರಿನ ವ್ಯವಸ್ಥೆ ಸರಿ ಇಲ್ಲ...!

> ಕೆ.ಆರ್.ಆಸ್ಪತ್ರೆ, ಚೆಲುವಾಂಬ ಆಸ್ಪತ್ರೆಯಲ್ಲಿ ಶುದ್ಧ ಕುಡಿಯುವ ನೀರಿನ ವ್ಯವಸ್ಥೆಯೇ ಇಲ್ಲ. ಸ್ಯಾನಿಟೇಷನ್ ಇಲ್ಲ. ಇಲ್ಲಿರುವ ಒಳರೋಗಿಗಳಿಗೆ ಅಗತ್ಯವಿರುವಷ್ಟು ನೀರಿನ ಪೂರೈಕೆ ಆಗುತ್ತಿಲ್ಲ. ಇಡೀ ಆಸ್ಪತ್ರೆಯಲ್ಲಿ ಕುಡಿಯುವ ನೀರಿನ ಯಂತ್ರಗಳು ಕೆಟ್ಟು ನಿಂತಿವೆ. ಎಲ್ಲಾ ಕಡೆ ವಾಟರ್ ಕ್ಯಾನ್‌ಗಳನ್ನು ಇಟ್ಟಿದ್ದು, ಆ ನೀರನ್ನು ಎಲ್ಲಿ ಶುದ್ಧೀಕರಣ ಮಾಡಿದ್ದಾರೆ ಎಂಬುದೇ ಅನುಮಾನ. ಹಾಗಾಗಿ ಶುದ್ಧ ಕುಡಿಯುವ ನೀರಿನ ಘಟಕಗಳಾಗಬೇಕು. ಐದು ಆಸ್ಪತ್ರೆಗಳಲ್ಲಿಯೂ ಶುದ್ಧ ನೀರಿನ ಘಟಕಗಳ ಸ್ಥಾಪಿಸಬೇಕು. ಈ ನಿಟ್ಟಿನಲ್ಲಿ ಕ್ರಮಕೈಗೊಳ್ಳುವಂತೆ ಸೂಚಿಸಲಾಗಿದೆ.
> –ಡಾ.ಹೆಚ್.ಕೃಷ್ಣ, ಅಧ್ಯಕ್ಷರು, ಕರ್ನಾಟಕ ರಾಜ್ಯ ಆಹಾರ ಆಯೋಗ

ಮೈಸೂರು ಮಿತ್ರ
ಗುರುವಾರ 17 ಜುಲೈ 2025

ಜು.19ಕ್ಕೆ ರಾಜ್‌ಕುಮಾರ್, ಎಸ್‌ಪಿಬಿ ಸ್ಮರಣಾರ್ಥ ಸಂಗೀತ ಕಾರ್ಯಕ್ರಮ


ಜಿ.ಕವಿತಾ


ಡಾ.ಭರತ್


ನಿತ್ಯಾನಂದ


ಡಾ.ಸುರೇಂದ್ರನ್


ಚಂದ್ರಶೇಖರ್


ವಿನಾಯಕ ಭಟ್


ಅನ್ನಪೂರ್ಣ


ಡಾ.ಭಾರತಿ


ಜಯಲಕ್ಷ್ಮಿ


ರವೀಂದ್ರಕುಮಾರ್

ಮೈಸೂರು,ಜು.16–ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ಜು.19ರಂದು ಸಂಜೆ 5.30ಕ್ಕೆ ಡಾ.ರಾಜಕುಮಾರ್ ಹಾಗೂ ಎಸ್.ಪಿ.ಬಾಲಸುಬ್ರಮಣ್ಯಂ ಸ್ಮರಣಾರ್ಥ, ಜಿ.ಕವಿತಾ ಕಾಮತ್ ಸಾರಥ್ಯದಲ್ಲಿ ಗೀತ್ ಸಂಗಮ ತಂಡದವರಿಂದ ಎಂದು ಮರೆಯಲಾರದ ಆಯ್ದ ಕನ್ನಡ ಚಿತ್ರಗೀತೆಗಳ ಪ್ರಣಯ ಗೀತೆಗಳ ಮಧುರ ಸಂಗಮವನ್ನು ಆಯೋಜಿಸಲಾಗಿದೆ.

ಕಾರ್ಯಕ್ರಮದಲ್ಲಿ ಗಾಯಕರಾದ ಕವಿತಾ ಕಾಮತ್, ನಿತ್ಯಾನಂದ ಕಾಮತ್, ಡಾ.ಸುರೇಂದ್ರನ್, ಡಾ.ರವೀಂದ್ರ ಕುಮಾರ್, ಡಾ.ಭರತ್‌ರಾಜ್, ಚಂದ್ರಶೇಖರ್, ಡಾ.ಭಾರತಿ, ಜಯಲಕ್ಷ್ಮಿ ನಾಯ್ಡು, ಅನ್ನು ಮೂರ್ನಾಡು ಹಾಗೂ ವಿನಾಯಕ ಭಟ್ ಸಂಗೀತ ರಸದೌತಣ ನೀಡಲಿದ್ದಾರೆ. ಕಾರ್ಯಕ್ರಮಕ್ಕೆ ಪ್ರವೇಶ ಉಚಿತ. ಇದೇ ಸಂದರ್ಭದಲ್ಲಿ ಇತ್ತೀಚೆಗೆ ನಮ್ಮನ್ನೆಲ್ಲ ಅಗಲಿದ ಹಿರಿಯ ಪತ್ರಕರ್ತರು, ಸ್ನೇಹಜೀವಿ ಮತ್ತು 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ದಿನ ಪತ್ರಿಕೆಗಳ ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ ಮತ್ತು ಕನ್ನಡದ ಮೇರು ನಟಿ ಬಿ.ಸರೋಜಾ ದೇವಿ ಅವರಿಗೆ ಕಾರ್ಯಕ್ರಮದಲ್ಲಿ ಶ್ರದ್ಧಾಂಜಲಿ ಸಲ್ಲಿಸಲಾಗುವುದು.

ಸಚಿವ ಸತೀಶ್ ಜಾರಕಿಹೊಳಿಗೆ ಆಹ್ವಾನ...



ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರನ್ನು ಅವರ ಸ್ವಗೃಹದಲ್ಲಿ ಮೈಸೂರಿನ ಯುವ ಕಾಂಗ್ರೆಸ್ ಪದಾಧಿಕಾರಿಗಳು, ನಗರ ಯುವ ಅಧ್ಯಕ್ಷ ಅಬ್ರಾರ್ ಕಾಂಗ್ರೆಸ್ ಭವನದಲ್ಲಿ ನಡೆಯಲಿರುವ ಯುವ ಶಕ್ತಿ ಪ್ರತಿಜ್ಞೆ ಕಾರ್ಯಕ್ರಮಕ್ಕೆ ಆಹ್ವಾನಿಸಿದರು. ಈ ವೇಳೆ ನಂಜನಗೂಡು ಶಾಸಕ ದರ್ಶನ್ ಧ್ರುವನಾರಾಯಣ, ಮಾಜಿ ಶಾಸಕ ಕೇಶವಮೂರ್ತಿ, ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ರಾಜ್ಯ ಪ್ರಧಾನ ಕಾರ್ಯದರ್ಶಿ ಬಸವರಾಜು, ಮುಖಂಡರಾದ ಎಸ್.ಆರ್.ರವಿಕುಮಾರ್, ವಿನೋದ, ನಜ್ಮಾ ನಸೀರ್, ಲಾವಣ್ಯ ಯಾದವ್ ಉಪಸ್ಥಿತರಿದ್ದರು.

ಮಾಜಿ ಮೇಯರ್ ನಾರಾಯಣರನ್ನು ಎಂಎಲ್‌ಸಿ ಮಾಡಲು ಮನವಿ

ಮೈಸೂರು, ಜು.16(ಜಿಎ)–ಪುರಸಭೆ, ಪಾಲಿಕೆ ಪೌರಕಾರ್ಮಿಕರು, ಶೋಷಿತರು, ದಮನಿತರಿಗೆ ಸಾಕಷ್ಟು ಸೇವೆ ಸಲ್ಲಿಸಿರುವ ಮಾಜಿ ಮೇಯರ್ ನಾರಾಯಣ ಅವರನ್ನು ವಿಧಾನ ಪರಿಷತ್ ಸದಸ್ಯರನ್ನಾಗಿ ಮಾಡಬೇಕೆಂದು ಸಿಎಂ ಸಿದ್ದರಾಮಯ್ಯ ಹಾಗೂ ಇನ್ನಿತರ ಕಾಂಗ್ರೆಸ್ ಮುಖಂಡರಿಗೆ ವಿವಿಧ ಸಂಘಟನೆಗಳ ಮುಖಂಡರು ಮನವಿ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಜಂಟಿ ಸುದ್ದಿಗೋಷ್ಠಿಯಲ್ಲಿ ಮೈಸೂರು ಕೊಳಚೆ ನಿವಾಸಿಗಳ ಒಕ್ಕೂಟದ ಅಧ್ಯಕ್ಷ ಆರ್.ದಾಸು ಮಾತನಾಡಿ, ನಾರಾಯಣ ಅವರು ಸಮಾಜದ ಕಟ್ಟಕಡೆಯ ಸಮುದಾಯಕ್ಕೆ ಸೇರಿದವರಾಗಿದ್ದು, ಸಮಾಜದ ಅಭಿವೃದ್ಧಿಗೆ ಸಾಕಷ್ಟು ಶ್ರಮಿಸಿದ್ದಾರೆ. ಈ ಸಮುದಾಯಕ್ಕೆ ವಿಧಾನ ಪರಿಷತ್‌ನಲ್ಲಿ ಯಾವುದೇ ಪ್ರಾತಿನಿಧ್ಯ ನೀಡಿಲ್ಲ. ಹೀಗಾಗಿ ಸಿಎಂ ಈ ಬಗ್ಗೆ ಗಮನ ಹರಿಸಬೇಕೆಂದು ಕೋರಿದರು.

ಪೌರಕಾರ್ಮಿಕರ ಗುತ್ತಿಗೆ ಪದ್ಧತಿ ರದ್ದುಪಡಿಸಲು ಹಾಗೂ ಅವರ ಖಾಯಂಗಾಗಿ ನಾರಾಯಣ ಸಾಕಷ್ಟು ಶ್ರಮಿಸಿದ್ದಾರೆ. ಇವರ ಈ ಹೋರಾಟ ಯಶಸ್ವಿಯೂ ಆಗಿದೆ. ರಾಜ್ಯ ಸಫಾಯಿ ಕರ್ಮಚಾರಿಗಳ ಅಭಿವೃದ್ಧಿ ನಿಗಮ ಸ್ಥಾಪನೆಗೆ ಸಾಕಷ್ಟು ಶ್ರಮಿಸಿದ್ದಾರೆ. ಇದೇ ರೀತಿಯ ಹಲವಾರು ಸೇವೆ ಮಾಡಿದ್ದು, ಪರಿಷತ್‌ಗೆ ನೇಮಕ ಮಾಡಬೇಕೆಂದು ಕೋರಿದರು. ಗೋಷ್ಠಿಯಲ್ಲಿ ಮುಖಂಡರಾದ ಆರ್ಟಿಸ್ಟ್ ಎಸ್.ನಾಗರಾಜು, ಆರುಮುಗಂ, ಶಂಕರ್ ಬಾಬು, ಆರ್.ಹರೀಶ್, ಕೆ.ನಾಗರತ್ನ ಮಂಜುನಾಥ್ ಉಪಸ್ಥಿತರಿದ್ದರು.

ನಾಳೆ ಕಾಂಗ್ರೆಸ್ ಭವನದಲ್ಲಿ ಯುವ ಕಾಂಗ್ರೆಸ್ ಪದಾಧಿಕಾರಿಗಳ ಪದಗ್ರಹಣ

ಮೈಸೂರು, ಜು.16(ಜಿಎ)–ಮೈಸೂರು ನಗರ ಜಿಲ್ಲಾ ಯುವ ಕಾಂಗ್ರೆಸ್ ಸಮಿತಿಯ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭವನ್ನು ಜು.18ರಂದು ಬೆಳಗ್ಗೆ 11ಗಂಟೆಗೆ ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ನೂತನ ಅಧ್ಯಕ್ಷ ಸೈಯ್ಯದ್ ಅಬ್ರಾರ್ ಈ ವಿಷಯ ತಿಳಿಸಿ, ಯುವ ಶಕ್ತಿ ಪ್ರತಿಜ್ಞೆ ಕಾರ್ಯಕ್ರಮ ಸಹಾ ನಡೆಯಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಶಾಸಕರಾದ ಕೆ.ಹರೀಶ್‌ಗೌಡ, ತನ್ವೀರ್ ಸೇಠ್ ಸೇರಿದಂತೆ ಮುಖಂಡರು ಆಗಮಿಸಲಿದ್ದಾರೆ ಎಂದರು.

ಯುವ ಕಾಂಗ್ರೆಸ್ ಅನ್ನು ಹೆಚ್ಚು ಚಟುವಟಿಕೆಯಿಂದಿರುವಂತೆ ನೋಡಿಕೊಳ್ಳಲು ವಿವಿಧ ಕಾರ್ಯಕ್ರಮ ರೂಪಿಸಲಾಗುತ್ತಿದೆ. ಮೈಸೂರು ನಗರದಾದ್ಯಂತ ಯುವ ಶಕ್ತಿಯನ್ನು ಮತ್ತಷ್ಟು ಸಬಲೀಕರಣಗೊಳಿಸುವ ನಿಟ್ಟಿನಲ್ಲಿ ಇದೊಂದು ದಿಕ್ಸೂಚಿ ಕಾರ್ಯಕ್ರಮವಾಗಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ದೀಪಕ್, ರಾಕೇಶ್, ಮಲ್ಲೇಶ್, ಪವನ್, ಲಖನ್, ನವೀನ್ ಕೆಂಪಿ, ಶಶಿಕಾಂತ್, ಹೇಮಂತ್‌ಕುಮಾರ್ ಉಪಸ್ಥಿತರಿದ್ದರು.


ಸಂಗೀತ–ನೃತ್ಯ ಸಂಭ್ರಮ

ಮೈಸೂರು, ಜು.16– ನೂಪುರ ಕಲಾವಿದರು ಸಾಂಸ್ಕೃತಿಕ ಟ್ರಸ್ಟ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಜು.20, 21 ರಂದು ನೃತ್ಯ ಸಂಭ್ರಮ ಕಾರ್ಯಕ್ರಮವನ್ನು ಕುವೆಂಪುನಗರದ ವೀಣೆ ಶೇಷಣ್ಣ ಭವನ, ಗಾನಭಾರತಿಯಲ್ಲಿ ಏರ್ಪಡಿಸಲಾಗಿದೆ.

ಜು. 20ರ ಸಂಜೆ 6.30ಕ್ಕೆ ನಂದನಾ ಪರ್ಫಾರ್ಮಿಂಗ್ ಆರ್ಟ್ಸ್ ನಿರ್ದೇಶಕಿ ವಿದುಷಿ ಎಂ.ಎಲ್. ವಾರಿಜಾನಳಿಗೆ ಅವರ ಶಿಷ್ಯೆ ವಿದುಷಿ ಶ್ರೀಮತಿ ಕೆ.ಎಸ್. ಸುಪ್ರಿತಾ ಸಚ್ಚಿದಾನಂದ ಅವರಿಂದ ಭರತನಾಟ್ಯ ಪ್ರದರ್ಶನವಿದ್ದು, ಸಂಜೆ 7.30ಕ್ಕೆ ನಾದವಿದ್ಯಾಲಯ ಸಂಸ್ಥೆ ನಿರ್ದೇಶಕಿ ವಿದುಷಿ ಮಿತ್ರಾ ನವೀನ್ ಅವರ ಶಿಷ್ಯೆಯರಾದ ವಿದುಷಿ ಹರ್ಷಿತಾ ಸುಬ್ರಹ್ಮಣ್ಯ ಮತ್ತು ವಿದುಷಿ ಮೌಲ್ಯ ವೆಂಕಟೇಶ್ ಅವರಿಂದ ಭರತನಾಟ್ಯ ಪ್ರದರ್ಶನವಿದೆ.

ಜು.21 ರಂದು ಸಂಜೆ 6.30 ರಿಂದ ಮೈಸೂರಿನ ಸ್ವರಮಾಧುರ್ಯ ಟ್ರಸ್ಟ್‌ನ ನಿರ್ದೇಶಕಿ ವಿದುಷಿ ಶ್ರೀಮತಿ ಸಾವಿತ್ರಿ ಪ್ರಭಾಕರ ಹಾಗೂ ಅವರ ಪುತ್ರ ಹರ್ಷ ಪ್ರಭಾಕರ್ ಹಾಗೂ ಬಿ.ಉಮಾಪತಿ ಅವರಿಂದ ಸುಗಮ ಸಂಗೀತವಿದೆ. ಪಕ್ಕವಾದ್ಯಗಳಲ್ಲಿ ಇಂದುಶೇಖರ್ –ತಬಲಾ, ರಾಘವೇಂದ್ರ–ರಿದಂ ಪ್ಯಾಡ್, ಶರತ್ –ಕೀ ಬೋರ್ಡ್‌ನಲ್ಲಿ ಸಹಕಾರ ನೀಡಲಿದ್ದಾರೆ.

ರಾಘವ ಲಿಂಗೇಗೌಡ ನಿಧನ



ಮೈಸೂರು,ಜು.16– ಮೈಸೂರಿನ ಟಿ.ನರಸೀಪುರ ರಸ್ತೆಯ ಜಿ.ಎಲ್.ಗಾರ್ಡನ್ ನಿವಾಸಿ ರಾಘವ ಲಿಂಗೇಗೌಡ (49) ಬುಧವಾರ ಸಂಜೆ ಹೃದಯಾಘಾತದಿಂದ ನಿಧನರಾದರು.

ಮೃತರು ಪತ್ನಿ, ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯನ್ನು ಮೃತರ ಸಹೋದರ ವಿದೇಶದಿಂದ ಶುಕ್ರವಾರ ಬಂದ ನಂತರ ನಡೆಸಲಾಗುವುದೆಂದು ಅವರ ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಿಂದ ಕೆಬಿಜಿಯವರಿಗೆ ಶ್ರದ್ಧಾಂಜಲಿ; ಕುಟುಂಬಕ್ಕೆ ಸಾಂತ್ವನ





ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ, ಭಾನುವಾರ ನಿಧನರಾದ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ. ಕೆ.ಬಿ.ಗಣಪತಿ (ಕೆಬಿಜಿ) ಅವರ ಕೆಸಿ ಬಡಾವಣೆಯ ನಿವಾಸಕ್ಕೆ ಭೇಟಿ ನೀಡಿ, ಅವರ ಭಾವಚಿತ್ರಕ್ಕೆ ಪುಷ್ಪ ನಮನದೊಂದಿಗೆ ಶ್ರದ್ಧಾಂಜಲಿ ಸಲ್ಲಿಸಿದರು. ಬಳಿಕ ಕೆಬಿಜಿ ಅವರ ಪತ್ನಿ ಶ್ರೀಮತಿ ರ್‍ಯಾಲಿ ಗಣಪತಿ, ಈ ಎರಡೂ ಪತ್ರಿಕೆಗಳ ವ್ಯವಸ್ಥಾಪಕ ಸಂಪಾದಕರೂ ಆದ ಪುತ್ರ ವಿಕ್ರಮ್ ಮುತ್ತಣ್ಣ ಅವರಿಗೆ ಸಾಂತ್ವನ ಹೇಳಿದರು. ಈ ಸಂದರ್ಭದಲ್ಲಿ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್, ಮೈಸೂರು ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಡಿಸಿಪಿ ಸುಂದರ್‌ರಾಜ್, ಹಿರಿಯ ಪತ್ರಕರ್ತ ಕೆ.ಶಿವಕುಮಾರ್ ಇನ್ನಿತರರು ಸಚಿವರೊಂದಿಗೆ ಇದ್ದರು.

ಕೆಬಿಜಿ ಅವರಿಗೆ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನ ನುಡಿ ನಮನ

ಮೈಸೂರು,ಜು.16(ಜಿಎ)–'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್'ನ ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ. ಗಣಪತಿ(ಕೆಬಿಜಿ) ಅವರಿಗೆ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ನುಡಿ ನಮನ ಸಲ್ಲಿಸಲಾಯಿತು.



'ಮೈಸೂರು ಮಿತ್ರ, ಮತ್ತು 'ಸ್ಟಾರ್ ಆಫ್ ಮೈಸೂರ್'ನ ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ (ಕೆಬಿಜಿ) ಅವರಿಗೆ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ನುಡಿ ನಮನ ಸಲ್ಲಿಸಲಾಯಿತು.

ಈ ವೇಳೆ ಸಮಾಜ ಸೇವಕ ಡಾ. ಕೆ. ರಘುರಾಮ್, ವಾಜಪೇಯಿ ಮಾತನಾಡಿ, ಕೆಬಿಜಿ ಅವರು ಮೈಸೂರಿನ ಪತ್ರಕರ್ತರ ಕುಸುಮವಾಗಿದ್ದರು. ಮೈಸೂರಿನಲ್ಲಿ ಪತ್ರಕರ್ತರಿಗೆ ವಿಶೇಷ ಸ್ಥಾನಮಾನವಿದ್ದು, ಇಂತಹ ಪ್ರಮುಖರಲ್ಲಿ ಒಬ್ಬರಾದ ಕೆ.ಬಿ. ಗಣಪತಿ ಅವರು ಮೈಸೂರಿನ ಅಭಿವೃದ್ಧಿಯಲ್ಲೂ ತೊಡಗಿಸಿಕೊಂಡಿದ್ದರು. ಅವರ ಪತ್ರಿಕಾ ನೀತಿ, ಆಶಯಗಳು ಉತ್ತಮವಾಗಿದ್ದವು. ಮೈಸೂರಿನ ಖುಷ್ವಂತ್ ಸಿಂಗ್ ಎಂದೇ ನಾವೆಲ್ಲ ಅವರನ್ನು ಕರೆಯುತ್ತಿದ್ದೆವು. ಪತ್ರಕರ್ತರಾಗಿಯೂ ಸಾಮಾಜಿಕ, ಶೈಕ್ಷಣಿಕ, ಸಾಹಿತ್ಯಕ, ಸಾಂಸ್ಕೃತಿಕ ಸೇವೆ ಹೇಗೆ ಮಾಡಬಹುದು ಎಂಬುದಕ್ಕೆ ಉದಾಹರಣೆಯಾಗಿದ್ದಾರೆಂದು ಸ್ಮರಿಸಿದರು.

ಪತ್ರಕರ್ತ ದೊಡ್ಡನಹುಂಡಿ ರಾಜಣ್ಣ ಮಾತನಾಡಿ, ಕೆಬಿಜಿ ಅವರಿಗೆ ಗುರುತಿಸುವ ವಿಶೇಷ ಕಲೆ ಇತ್ತು. ಯಾರಾದರೂ ಉತ್ತಮವಾದನ್ನು ಮಾಡಿದ್ದಾಗ ಅವರು ಪ್ರಶಂಸಿಸುತ್ತಿದ್ದರು. ನಾಡಿನ ಪತ್ರಕರ್ತರ ಸಾಲಿನಲ್ಲಿ ಕೆಬಿಜಿ ವಿಶೇಷ ಸ್ಥಾನದಲ್ಲಿದ್ದಾರೆ. ಅವರಿಗೆ ಪರಿಸರದ ಬಗ್ಗೆ ಅಪಾರ ಕಾಳಜಿ ಜೊತೆಗೆ ದೇಶದ ಅಭಿವೃದ್ಧಿಯ ಬಗ್ಗೆಯೂ ಅನೇಕ ಆಲೋಚನೆಗಳನ್ನು ಒಳಗೊಂಡಿದರು. ಸಂಸ್ಥೆಯಲ್ಲಿ ಕೆಲಸ ಮಾಡುವ ಎಲ್ಲರನ್ನು ಆತ್ಮೀಯತೆಯಿಂದ ಮಾತನಾಡಿಸುತ್ತಿದ್ದರು ಎಂದು ಕೆಬಿಜಿ ಅವರ ನೆನಪು ಮೆಲಕು ಹಾಕಿದರು.

ಕಾಂಗ್ರೆಸ್ ಮುಖಂಡ ಎನ್.ಎಂ. ನವೀನ್‌ಕುಮಾರ್, ಕೆಬಿಜಿ ಅವರು ಮೈಸೂರು ಮಾತ್ರವಲ್ಲ ಇಡೀ ರಾಜ್ಯಕ್ಕೆ ಪರಿಚಿತರು. ನಮ್ಮ ಕುಟುಂಬ ಮತ್ತು ಅವರ ಕುಟುಂಬದ ನಡುವೇ ಅವಿನಾಭಾವ ಸಂಬಂಧವಿದೆ. ನಮ್ಮ ತಂದೆ ಮುಡಾ ಅಧ್ಯಕ್ಷರಾಗಿದ್ದಾಗ ತಂದೆ ಅವರು ಅವರನ್ನು ಭೇಟಿ ಮಾಡಿ ಸಲಹೆಗಳನ್ನು ತೆಗೆದುಕೊಳ್ಳುತ್ತಿದ್ದರು. ಇತ್ತೀಚೆಗೆ ವಿಧಾನ ಸಭಾ ಚುನಾವಣೆ ವೇಳೆ ನಾನು ಟಿಕೆಟ್ ಆಕಾಂಕ್ಷಿಯಾದಾಗ ಕಚೇರಿ ಹೋಗಿ ಅವರಿಂದ ಸಾಕಷ್ಟು ಸಲಹೆಗಳನ್ನು ಪಡೆದುಕೊಂಡಿದೆ ಎಂದರು.

ಮೈಸೂರಿಗೆ ರಾಜಶೇಖರ್ ಕೋಟಿ ಮತ್ತು ಕೆಬಿಜಿ ಅವರು ಎರಡು ದೀಪಗಳು ಇದ್ದ ಹಾಗೇ ಕೋಟಿ ಅವರು ಶೋಷಿತರು, ದಲಿತರ ಪರ ಧ್ವನಿಯಾಗಿ ನಿಂತರು. ಮತ್ತೊಂದೆಡೆ ಕೆಬಿಜಿ ಅವರು ಸಾಹಿತ್ಯ, ಸಂಸ್ಕೃತಿ ಜೊತೆಗೆ ಪ್ರಕೃತಿ ಸಂರಕ್ಷಣೆಗೆ ಒತ್ತು ನೀಡಿ ಸಮಸ್ಯೆಗಳಿಗೆ ಪರಿಹಾರ ನೀಡುತ್ತಿದ್ದರು ಎಂದು ಸ್ಮರಿಸಿದರು.

ಚುಟುಕು ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಎಂ.ಜಿ.ಆರ್.ಅರಸ್, ಕನ್ನಡಪರ ಹೋರಾಟಗಾರ ಮೂಗೂರು ನಂಜುಂಡಸ್ವಾಮಿ, ಪ್ರತಿಷ್ಠಾನದ ಸಂಸ್ಥಾಪಕ ಅಧ್ಯಕ್ಷ ಬಸವರಾಜೇಂದ್ರಸ್ವಾಮಿ ಉಪಸ್ಥಿತರಿದ್ದರು.

ಮೈಸೂರು ನಗರ ಕಾಂಗ್ರೆಸ್ ಉಪಾಧ್ಯಕ್ಷ



ಮೈಸೂರಿನ ಒಕ್ಕಲಿಗ ಸಮುದಾಯದ ಹಿರಿಯ ಮುಖಂಡ ವಿಕ್ರಾಂತ್ ಪಿ.ದೇವೇಗೌಡ ಅವರನ್ನು ಮೈಸೂರು ನಗರ ಜಿಲ್ಲಾ ಕಾಂಗ್ರೆಸ್ ಸಮಿತಿ ಉಪಾಧ್ಯಕ್ಷರಾಗಿ ನೇಮಕ ಮಾಡಿ ಆದೇಶ ಪ್ರತಿ ವಿತರಿಸಲಾಯಿತು. ಈ ವೇಳೆ ಮೈಸೂರು ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್, ನಗರ ಪ್ರಧಾನ ಕಾರ್ಯದರ್ಶಿ ಎಂ.ಶಿವಣ್ಣ, ಆರ್.ಗಿರೀಶ್, ಉಪಾಧ್ಯಕ್ಷ ತಿವಾರಿ, ಜಿಪಂ ಮಾಜಿ ಅಧ್ಯಕ್ಷ ಬಿ.ಎಂ.ರಾಮು, ಮುಖಂಡರಾದ ವೆಂಕಟಸುಬ್ಬಯ್ಯ, ಮಹೇಶ್ ಇನ್ನಿತರರಿದ್ದರು.

ಮೈಸೂರು ಸುತ್ತೂರು ಮಠದಲ್ಲಿ ನಾಳೆ ವಿಶೇಷ ಪೂಜೆ

ಮೈಸೂರು, ಜು.16– ಆಷಾಢಮಾಸದ ಕೊನೆಯ ಶುಕ್ರವಾರದ ಪ್ರಯುಕ್ತ ಜು.18 ರಂದು ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಗಳ ದಿವ್ಯ ಸಾನ್ನಿಧ್ಯದಲ್ಲಿ ಚಾಮುಂಡಿ ಪಾದದ ದೇವಸ್ಥಾನದಲ್ಲಿ ವಿಶೇಷ ಪೂಜೆ ಹಾಗೂ ಪ್ರಸಾದ (ಅನ್ನದಾಸೋಹ) ವಿನಿಯೋಗ ವ್ಯವಸ್ಥೆ ಮಾಡಲಾಗಿದೆ. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ದೇವರ ದರ್ಶನ ಮಾಡಿ, ಪ್ರಸಾದ ಸ್ವೀಕರಿಸಿ ಭಗವಂತನ ಕೃಪೆಗೆ ಪಾತ್ರರಾಗಲು ಕೋರಲಾಗಿದೆ.

ರಾಜ್ಯದ 59 ತಹಸೀಲ್ದಾರರ ವರ್ಗಾವರ್ಗಿ

ಎಂಡಿಎ ವಿಶೇಷ ತಹಸೀಲ್ದಾರ್ ಆಗಿ ಎಸ್.ಎನ್.ನರಗುಂದ

ಮೈಸೂರು, ಜು.16(ಎಸ್‌ಪಿಎನ್)– 59 ತಹಸೀಲ್ದಾರ್‌ಗಳನ್ನು ಮುಖ್ಯಮಂತ್ರಿಗಳ ಅನುಮೋದನೆ ಮೇರೆಗೆ ವರ್ಗಾವಣೆಗೊಳಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಮೈಸೂರು ಜಿಲ್ಲೆ ಸಾಲಿಗ್ರಾಮ ತಾಲೂಕಿನ ಎಸ್.ಎನ್.ನರಗುಂದ ಅವರನ್ನು ಎಂಡಿಎ ವಿಶೇಷ ತಹಸೀಲ್ದಾರ್ ಹುದ್ದೆಗೆ, ಮೈಸೂರು ಜಿಲ್ಲಾಧಿಕಾರಿ ಕಚೇರಿಯ ಚುನಾವಣಾ ತಹಸೀಲ್ದಾರ್ ರುಕಿಯಾ ಬೇಗಂ ಅವರನ್ನು ಸಾಲಿಗ್ರಾಮ ತಾಲೂಕು ಗ್ರೇಡ್–1 ತಹಶೀಲ್ದಾರ್ ಹುದ್ದೆಗೆ, ಶ್ರೀರಂಗಪಟ್ಟಣ ತಾಲೂಕಿನ ಗ್ರೇಡ್– 2 ತಹಸೀಲ್ದಾರ್ ಕೆ.ಎನ್.ಚೈತ್ರ ಅವರನ್ನು ಹನೂರು ತಾಲೂಕಿಗೆ, ಗುಂಡ್ಲುಪೇಟೆ ತಹಸೀಲ್ದಾರ್ ಗ್ರೇಡ್–1 ಟಿ.ರಮೇಶ್‌ಬಾಬು ಅವರನ್ನು ಮಂಗಳೂರಿಗೆ, ಹೆಚ್.ಡಿ.ಕೋಟೆ ತಹಸೀಲ್ಧಾರ್ ಗ್ರೇಡ್–2 ಆರ್.ಶ್ರೀಧರ್ ಅವರನ್ನು ಮಡಿಕೇರಿ ತಾಲೂಕಿನ ಗ್ರೇಡ್–1 ತಹಸೀಲ್ಧಾರ್ ಹುದ್ದೆಗೆ, ಬೆಂಗಳೂರು ಬುಸಿನೆಸ್ ಕಾರಿಡಾರ್‌ನ ತಹಸೀದ್ದಾರ್ ಎಸ್.ವಿಶ್ವನಾಥ್ ಅವರನ್ನು ಮಂಡ್ಯ ತಾಲೂಕು ಗ್ರೇಡ್–1 ತಹಸೀಲ್ದಾರ್ ಹುದ್ದೆಗೆ, ಶ್ರೀರಂಗಪಟ್ಟಣ ತಾಲೂಕು ಗ್ರೇಡ್ ತಹಸೀಲ್ದಾರ್ ಪರಶುರಾಮ್ ಸತ್ತೇರಿ ಅವರನ್ನು ಮದ್ದೂರು ತಾಲೂಕು ಗ್ರೇಡ್ ತಹಸೀಲ್ದಾರ್ ಹುದ್ದೆಗೆ ವರ್ಗಾಯಿಸಲಾಗಿದೆ.

ಕೊಡಗು ಜಿಲ್ಲೆ ಎಸಿ ಕಚೇರಿಯ ಗ್ರೇಡ್–2 ತಹಸೀಲ್ದಾರ್ ಕೆ.ಎಸ್.ಸುಪ್ರೀತ ಅವರನ್ನು ಸಕಲೇಶ್ವರ ತಾಲೂಕು ಗ್ರೇಡ್ –1 ತಹಸೀಲ್ದಾರ್ ಹುದ್ದೆಗೆ, ದಕ್ಷಿಣ ಕನ್ನಡ ಸುಳ್ಯ ತಾಲೂಕಿನ ಎಸ್.ಮಂಜುನಾಥ್ ಅವರನ್ನು ನಾಗಮಂಗಲ ತಾಲೂಕಿನ ಗ್ರೇಡ್–2 ತಹಸೀಲ್ದಾರ್ ಹುದ್ದೆಗೆ ವರ್ಗಾಯಿಸಲಾಗಿದೆ.

ಅಜ್ಜ, ಅಜ್ಜಿಯರ ದಿನಾಚರಣೆ ಜು.19ರಂದು ಹಿರಿಯರಿಗೆ ಸನ್ಮಾನ

ಮೈಸೂರು, ಜು.16–ಮೈಸೂರಿನ ಶ್ರೀ ಜೈನ್ ಎಜುಕೇಶನ್ ಸೊಸೈಟಿ ವತಿಯಿಂದ ಅಜ್ಜ–ಅಜ್ಜಿಯರ ದಿನಾಚರಣೆ ಅಂಗವಾಗಿ ಶ್ರೀರಾಂಪುರದಲ್ಲಿರುವ ಮಹಾವೀರ್ ವಿದ್ಯಾ ಮಂದಿರದಲ್ಲಿ ಜು.19ರಂದು ಹಿರಿಯ ನಾಗರಿಕರಿಗೆ ಸನ್ಮಾನ ಸಮಾರಂಭವನ್ನು ಏರ್ಪಡಿಸಲಾಗಿದೆ. ಅಂದು 95 ವರ್ಷ ಅಥವಾ 95 ವರ್ಷ ಮೇಲ್ಪಟ್ಟ ಹಿರಿಯರನ್ನು ಸನ್ಮಾನಿಸಿ ಗೌರವಿಸುವ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಮೈಸೂರಿನ ಸುತ್ತಮುತ್ತಲಿನ ಹಿರಿಯ ನಾಗರಿಕರು ತಮ್ಮ ಆಧಾರ್ ಪ್ರತಿಯೊಂದಿಗೆ ತಮ್ಮ ಹೆಸರನ್ನು ದೂರವಾಣಿ ಸಂಖ್ಯೆ 8147471375 ನೋಂದಾಯಿಸಿಕೊಳ್ಳಬೇಕು.

ವಿಶೇಷ ಸೂಚನೆ: ವಯಸ್ಸಿನ ಆಧಾರದ ಮೇಲೆ ಮೂವರು ಹಿರಿಯ ನಾಗರಿಕರನ್ನು ಸನ್ಮಾನಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

17.07.2025 ಗುರುವಾರ, ಮಳೆ ನಕ್ಷತ್ರ: ಪುನರ್ವಸು, 6.07.2025ರಿಂದ 19.07.2025 ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ, ಕೃಷ್ಣ ಪಕ್ಷ, ತಿಥಿ: ಸಪ್ತಮಿ, ನಕ್ಷತ್ರ: ರೇವತಿ, ರಾಹುಕಾಲ: ಮಧ್ಯಾಹ್ನ 1.30ರಿಂದ 3 ಗಂಟೆಯವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆಳಗ್ಗೆ 6.30 ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9ರಿಂದ ವೆರಿಕೋಸ್ ವೇನ್ಸ್ ಮತ್ತು ವೆರಿಕೋಸ್ ಅಲ್ಸರ್‌ಗಳ ಚಿಕಿತ್ಸಾ ಶಿಬಿರ, ಡಯಾಬಿಟಿಕ್ ರೆಟಿನೋಪತಿ ಮತ್ತು ಇಸುಬು ತಪಾಸಣಾ ಶಿಬಿರ, ಸ್ಥಳ: ಜೆಎಸ್‌ಎಸ್ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ.
- **ದುರ್ಗಾ ಫೌಂಡೇಷನ್ ಹಾಗೂ ಕೆವಿಕೆ ಫೌಂಡೇಷನ್ :** ಚಾಮುಂಡೇಶ್ವರಿ ವರ್ಧಂತಿ ಅಂಗವಾಗಿ ಮಹಿಳೆಯರಿಗೆ ಬಾಗಿನ ವಿತರಣೆ, ಮುಖ್ಯ ಅತಿಥಿಗಳು : ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮಿ, ಸ್ಥಳ: ಚಾಮುಂಡಿಬೆಟ್ಟದ ತಪ್ಪಲು, ಬೆಳಗ್ಗೆ 8ಕ್ಕೆ.
- **ಕಾವೇರಿ ಆಯುರ್ವೇದ ಆಸ್ಪತ್ರೆ :** ಪಾರ್ಶ್ವವಾಯು ಮತ್ತು ಅನ್ಯನರ ಸಂಬಂಧಿ ಕಾಯಿಲೆಗೆ ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ರಿಂದ.
- **ಪ್ರೀತಿ ಕ್ಯಾನ್ಸರ್ ಸೆಂಟರ್ :** ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ, ಸ್ಥಳ: ಪ್ರೀತಿ ಕ್ಯಾನ್ಸರ್ ಸೆಂಟರ್, ಲಕ್ಷ್ಮೀಪುರಂ, ಬೆಳಗ್ಗೆ 10 ರಿಂದ.
- **ಮೈಸೂರು ವಿಶ್ವವಿದ್ಯಾನಿಲಯ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಅರಿವು ಸಂಶೋಧನಾ ವಿದ್ಯಾರ್ಥಿಗಳ ವೇದಿಕೆ :** ಸಂಸ್ಮರಣಾ ಕಾರ್ಯಕ್ರಮ, ಹಿತನುಡಿ : ಜಾನಪದ ವಿದ್ವಾಂಸರಾದ ಡಾ. ವಿ. ಜಯರಾಜನ್, ಡಾ. ಕ್ಯಾತನಹಳ್ಳಿ ರಾಮಣ್ಣ, ಮುಖ್ಯ ಅತಿಥಿಗಳು : ಜಾನಪದ ಪ್ರಾಧ್ಯಾಪಕ ಪ್ರೊ. ಎಂ. ನಂಜಯ್ಯ ಹೊಂಗನೂರು, ವಿಶ್ರಾಂತ ಪ್ರಾಧ್ಯಾಪಕ ಪ್ರೊ. ಪಿ.ಕೆ. ಮಿಶ್ರ, ಅಧ್ಯಕ್ಷತೆ : ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕರಾದ ಪ್ರೊ. ಎನ್.ಕೆ. ಲೋಲಾಕ್ಷಿ, ಸ್ಥಳ: ಸಮಿತಿ ಕೊಠಡಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ.
- **ಶ್ರೀ ಚಾಮುಂಡೇಶ್ವರಿ ಅಮ್ಮನವರ ಸೇವಾ ಸಮಿತಿ ಟ್ರಸ್ಟ್ :** ಚಾಮುಂಡೇಶ್ವರಿ ವರ್ಧಂತಿ, ಅಮ್ಮನವರಿಗೆ ಪಂಚಾಮೃತಾಭಿಷೇಕ, ದುರ್ಗಾ ಹೋಮ, ಮಹಾ ಪೂರ್ಣಾಹುತಿ, ಮಹಾಮಂಗಳಾರತಿ, ಮಧ್ಯಾಹ್ನ 1ಕ್ಕೆ ಅನ್ನಸಂತರ್ಪಣೆ, ಸಂಜೆ 7ಕ್ಕೆ ಚಾಮುಂಡೇಶ್ವರಿ ತಾಯಿಯ ಉತ್ಸವ ಮೂರ್ತಿಯನ್ನು ಪಡುವಾರಹಳ್ಳಿ ಪ್ರಮುಖ ಬೀದಿಗಳಲ್ಲಿ ಜಾನಪದ ಕಲಾತಂಡಗಳ ಸಮೇತ ಮೆರವಣಿಗೆ, ಸ್ಥಳ: ದೇವಸ್ಥಾನ, ವಿನಾಯಕನಗರ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಹೆಣ್ಣು ಮನಸು ಮಾಡಿದರೆ ಸಾಧಕ ಮಹಿಳೆಯರ ಪರಿಚಯ ಮಾಲಿಕೆ, ಪ್ರಸ್ತುತಿ: ಪ್ರೊ.ಸಿ.ನಾಗಣ್ಣ, ನಿರ್ಮಾಣ–ಜಿ. ಶಾಂತಕುಮಾರ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ: ಎಂ. ರಾಘವೇಂದ್ರ ಹಾಗೂ ಪಿ.ಸುರಭಿ, ವ್ಯಾಖ್ಯಾನ : ಡಾ. ಲತಾ ಮೈಸೂರು, 6.50 ರೈತರಿಗೆ ಸಲಹೆ, 7.15 ಹಸಿರು ಹೊನ್ನು, 8.30 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ–ಹೆಚ್. ಎನ್. ಭಾಸ್ಕರ್ ಅವರ ನಿರ್ದೇಶನದಲ್ಲಿ ವಾದ್ಯವೃಂದ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಕಾಡಿನಲ್ಲಿನ ಕಥೆಗಳು. ಪ್ರಸ್ತುತಿ : ಶಾಂತಕುಮಾರ್ .ಜಿ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಚಿತ್ರಗೀತೆಗಳು, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಕನ್ನಡ ಚಿತ್ರಗೀತೆಗಳು, 3.00 ಹಿಂದಿ ಚಿತ್ರಗೀತೆಗಳು, 4.00 ಜನಪದ ಸಂಗೀತ–ಮಹದೇವಸ್ವಾಮಿ ಮತ್ತು ಸಂಗಡಿಗರಿಂದ, 4.30 ವಿಜ್ಞಾನ ಭಾರತಿ ಜೀವ ವಿಕಾಸದ ಗುಂಟ ಈ ಬಗ್ಗೆ ಭಾಷಣ ಸಿಂಧೂಜಾ .ಜಿ.ಎಸ್. ಅವರಿಂದ ಹಾಗೂ ಪರ್ಯಾಯ ಇಂಧನ ಮೂಲಗಳು ಈ ಕುರಿತು ಮಾತನಾಡುತ್ತಾರೆ ನಂದಿನಿ ಎಂ. ಎಸ್., 6.50 ಕೃಷಿರಂಗ, ಕಿಸಾನ್ ವಾಣಿ – ಪ್ರಾಯೋಜಕರು : ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ನಂ ಕಂಪನಿ ರೈತ ಉತ್ಪಾದಕ ಸಂಸ್ಥೆಗಳ ಸಬಲೀಕರಣ ಕುರಿತ ಬಾನುಲಿ ಸರಣಿ ನಂ ಕಂಪನಿ ಬಾನುಲಿ ಸರಣಿಯ ಅವಲೋಕನ, ಭಾಗವಹಿಸುತ್ತಾರೆ ಮೈಸೂರು ವಿಶ್ವವಿದ್ಯಾನಿಲಯ ಸಮೂಹ ಸಂವಹನ ಹಾಗೂ ಪತ್ರಿಕೋದ್ಯಮ ವಿಭಾಗದ ಪ್ರಾಧ್ಯಾಪಕರಾದ ಡಾ. ಎಂ.ಎಸ್. ಸಪ್ನ, ಮೈಸೂರಿನ ಕೇಂದ್ರೀಯ ಆಹಾರ ತಂತ್ರಜ್ಞಾನ ಸಂಶೋಧನಾಲಯದ ಹಿರಿಯ ತಾಂತ್ರಿಕ ಅಧಿಕಾರಿ ಎಸ್.ವಿ. ರಾಘವೇಂದ್ರ, ಮಂಡ್ಯದ ವಿಕಸನ ಗ್ರಾಮೀಣ ಹಾಗೂ ನಗರಾಭಿವೃದ್ಧಿ ಸಂಸ್ಥೆಯ ನಿರ್ದೇಶಕರಾದ ಮಹೇಶ್ ಚಂದ್ರಗುರು, ಪ್ರಸ್ತುತಿ : ಎನ್. ಕೇಶವಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಯುವವಾಣಿ– ಸಂಬಂಧಗಳ ನಿರ್ವಹಣೆ, ಆಧುನಿಕ ತಂತ್ರಜ್ಞಾನ ಮತ್ತು ಸಾಮಾಜಿಕ ಮಾಧ್ಯಮಗಳ ಬಳಕೆಯಲ್ಲಿ ಯುವಜನತೆಯ ಪಾತ್ರ ಕುರಿತು ಮಾತುಕತೆ. ಭಾಗವಹಿಸುತ್ತಾರೆ–ಮೈಸೂರು ವಿಶ್ವವಿದ್ಯಾಲಯದ ಮಾನಸಗಂಗೋತ್ರಿಯ ಪತ್ರಿಕೋದ್ಯ ಮತ್ತು ಸಮೂಹ ಸಂವಹನ ಅಧ್ಯಯನ ವಿಭಾಗದ ವಿದ್ಯಾರ್ಥಿನಿಯರಾದ ಸಹನಾ ಡಿ. ಎಂ. ಪ್ರಿಯಾಂಕ .ವೈ.ಕೆ., ಪ್ರಿಯದರ್ಶಿನಿ ಎಂ. ಮತ್ತು ಕೀರ್ತಿ ಎಂ.ಪಿ. ನಡೆಸಿಕೊಡುತ್ತಾರೆ–ಅನುಷಾ ಡಿ.ಎಂ., 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ–ಡಾ. ಬಿ. ದೇವೇಂದ್ರಪ್ಪ–ಜಲ್ ತರಂಗ್, 10.00 ನಾಟಕ ಕಾಶಿಯಾತ್ರೆ, 10.30 ಸವಿನೆನಪು

- **ಯೇಸುವಿನ ಪವಿತ್ರ ಹೃದಯದ ದೇವಾಲಯ :** ವಾರ್ಷಿಕ ಮಹೋತ್ಸವ, ಸಂಜೆ 5.30ಕ್ಕೆ ಧ್ವಜಾರೋಹಣ, ವಂ. ಗುರು ಮರಿರಾಜ್, ವಿಶೇಷ ಪ್ರಬೋಧನೆಯ, ಬಲಿಪೂಜೆ ಆರಾಧನೆ, ಸ್ಥಳ: ಯೇಸುವಿನ ಪವಿತ್ರ ಹೃದಯದ ದೇವಾಲಯ, ಯಾದವಗಿರಿ.
- **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀ ಮದ್ಭಗವದ್ಗೀತಾ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.
- **ಶ್ರೀ ರಾಮಾಭ್ಯುದಯ ಸಭಾ ಚಾರಿಟಬಲ್ ಟ್ರಸ್ಟ್ :** ಲೋಕಕಲ್ಯಾಣಕ್ಕಾಗಿ ಶ್ರೀಮದ್ ಭಾಗವತ್ ಪ್ರವಚನ, ವಿದ್ವಾನ್ ಶ್ರೀ ಗಣೇಶ್ ಶರ್ಮಾ (ಮೈಸೂರು) ಅವರಿಂದ. ಸ್ಥಳ: ರಾಮಮಂದಿರ ಆವರಣ, ಶಿವರಾಂಪೇಟೆ, ಸಂಜೆ 6.30ರಿಂದ.

ರಂಗ ಸಂಗೀತ, ಅಭಿನಯ ಸಮೇತ ರಂಗಗೀತೆಗಳ ಕಲಿಕಾ ಕಾರ್ಯಾಗಾರದ ಸಮಾರೋಪ

ವೃತ್ತಿ ರಂಗಭೂಮಿ ಪರಂಪರೆಯ ಗಾಯನ, ಅಭಿಯನ ಪದ್ಧತಿ ಉಳಿಸುವುದು ಅಗತ್ಯ

ನಾಟಕಕಾರ ಡಾ.ರಾಜಪ್ಪ ದಳವಾಯಿ ಅಭಿಮತ



ಮೈಸೂರಿನ ಸಂಗೀತ ವಿವಿಯಲ್ಲಿ ಬುಧವಾರ ರಂಗ ಸಂಗೀತ ಮತ್ತು ಅಭಿನಯ ಸಮೇತ ರಂಗಗೀತೆಗಳ ಕಲಿಕಾ ಕಾರ್ಯಾಗಾರದ ಸಮಾರೋಪ ನಡೆಯಿತು. ಚಿತ್ರದಲ್ಲಿ ಗಣ್ಯರು ಹಾಗೂ ಅಭಿನಯ ಸಮೇತ ರಂಗಗೀತೆಗಳ ಪ್ರದರ್ಶನ ನೀಡಿದ ಕಾರ್ಯಾಗಾರದ ಶಿಬಿರಾರ್ಥಿಗಳನ್ನು ಕಾಣಬಹುದು.

ಮೈಸೂರು,ಜು.16(ಪಿಎಂ)– ವೃತ್ತಿರಂಗಭೂಮಿಯ ಪರಂಪರೆಯ ಗಾಯನ ಹಾಗೂ ಅಭಿನಯ ಪದ್ಧತಿ ಉಳಿಸಿಕೊಳ್ಳುವ ನಿಟ್ಟಿನಲ್ಲಿ ಮುನ್ನಡೆಯುವ ಅಗತ್ಯವಿದೆ ಎಂದು ನಾಟಕಕಾರ ಡಾ.ರಾಜಪ್ಪ ದಳವಾಯಿ ಹೇಳಿದರು.

ಮೈಸೂರಿನ ಜೆಎಲ್‌ಬಿ ರಸ್ತೆಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯದ (ಸಂಗೀತ ವಿವಿ) ಕೆಎಸ್‌ಜಿಹೆಚ್ ರಂಗಮಂದಿರದಲ್ಲಿ ವೃತ್ತಿರಂಗಭೂಮಿ ರಂಗಾಯಣ ದಾವಣಗೆರೆ ಮತ್ತು ಸಂಗೀತ ವಿವಿ ಜಂಟಿ ಆಶ್ರಯದಲ್ಲಿ ಬುಧವಾರ ಹಮ್ಮಿಕೊಂಡಿದ್ದ 15 ದಿನಗಳ ರಂಗ ಸಂಗೀತ ಮತ್ತು ಅಭಿನಯ ಸಮೇತ ರಂಗಗೀತೆಗಳ ಕಲಿಕಾ ಕಾರ್ಯಾಗಾರದ ಸಮಾರೋಪ ಮತ್ತು ಪ್ರದರ್ಶನ ಸಮಾರಂಭದಲ್ಲಿ ಅವರು ಸಮಾರೋಪ ಭಾಷಣ ಮಾಡಿದರು.

ವೃತ್ತಿರಂಗಭೂಮಿ ಪರಂಪರೆ ಉಳಿಸಿ ಮುನ್ನಡೆಸುವಲ್ಲಿ ಇಂತಹ ಕಾರ್ಯಕ್ರಮ ಮಹತ್ವದ ಪಾತ್ರ ವಹಿಸಲಿದೆ ಇದು ಹೀಗೆಯೇ ಮುಂದುವರೆಯಲಿ. ನಮ್ಮಲ್ಲಿ ಇಂತಹ ಒಳ್ಳೆಯ ಕೆಲಸಗಳಿಗೆ ಸಕಾಲದಲ್ಲಿ ಮೆಚ್ಚುಗೆ ಹಾಗೂ ಉತ್ತೇಜನ ದೊರೆಯುವುದಿಲ್ಲ. ಆದರೆ ಅಸಹನೆ ವ್ಯಕ್ತಪಡಿಸುವಲ್ಲಿ ಬಹಳ ಮುಂದಿರುತ್ತೇವೆ ಎಂದು ಬೇಸರ ವ್ಯಕ್ತಪಡಿಸಿದರು.

ಪ್ರಕ್ಷುಬ್ಧ ಪರಿಸ್ಥಿತಿಯನ್ನು ಸಮಾಧಾನ ಸ್ಥಿತಿಗೆ ತರಲು ನಾಟಕ ಕಲಾವಿದನಿಂದ ಸಾಧ್ಯವಾಗಲಿದೆ. ಅಂತಹ ಅನೇಕ ಪ್ರಸಂಗಗಳನ್ನು ನಾನು ಕಂಡಿದ್ದೇನೆ. ರಂಗಭೂಮಿಗೆ ಆ ಶಕ್ತಿ ಇದೆ. ರಂಗಭೂಮಿ ನಮ್ಮ ಜೀವನದ ಪ್ರತಿಬಿಂಬವೂ ಹೌದು. ಗತಿಬಿಂಬವೂ ಹೌದು. ಕನ್ನಡ ರಂಗಭೂಮಿ ಪರಂಪರೆ ಅದ್ಭುತವಾದುದು. 'ಬೆಳೆಯೇನೂ ಹುಲುಸಾಗಿದೆ, ಆದರೆ ಕೊಯ್ಲು ಮಾಡುವವರಿಲ್ಲ' ಎಂಬ ಬಿಎಂಶ್ರೀ ಮಾತಿನಂತೆ ರಂಗಭೂಮಿ ಬಹಳ ವೈವಿಧ್ಯಮಯವಾದುದು. ಆದರೆ ಅದನ್ನು ತಿಳಿಯುವ, ಮರುಸೃಜಿಸುವ, ಮುನ್ನಡೆ ಸುವ ಕೆಲಸವನ್ನು ನಾವು ಮಾಡಬೇಕಿದೆ ಎಂದು ತಿಳಿಸಿದರು.

ನಾಟಕ ಕಂಪನಿ ಹಾಗೂ ಸರ್ಕಸ್ ನಡೆಸುವುದು ಒಂದು ಸರ್ಕಾರ ನಡೆಸುವುದಕ್ಕಿಂತಲೂ ತಲೆ ನೋವು. ಕಂಪನಿ ರಂಗಭೂಮಿ ಚರಿತ್ರೆಯು ಮಹಾ ಪೈಪೋಟಿಯ ದೊಡ್ಡ ವ್ಯವಹಾರಸ್ಥರ ಬಹಳ ದುಡ್ಡಿನ ಬಾಬ್ತು. ಗುಬ್ಬಿ ಕಂಪನಿ, ಪೃಥ್ವಿ ಕಂಪನಿ ಬಹಳ ದೊಡ್ಡ ವಹಿವಾಟು ನಡೆಸಿವೆ. ಈಗ ವೃತ್ತಿ ನಾಟಕ ಕಂಪನಿಯ ಬಗೆಗೆ ಕಾಯಕಲ್ಪ ಮಾಡಲು ಸಾಧ್ಯವಿಲ್ಲ. ಏಕೆಂದರೆ ಮುಳುಗಿ ಹೋಗುತ್ತಿರುವ ಟೈಟಾನಿಕ್ ರೀತಿಯ ಸನ್ನಿವೇಶವಿದೆ ಎಂದರು.

ಏಣಗಿ ಬಾಳಪ್ಪ ಬಹಳ ಮೇರು ಸದೃಶ ನಟ. ಪಿ.ಕಾಳಿಂಗರಾವ್ ಮಹಿಳಾ ಪಾತ್ರವನ್ನು ಅದ್ಭುತವಾಗಿ ಮಾಡುತ್ತಿದ್ದರು. ವೃತ್ತಿ ರಂಗಭೂಮಿಯವರು ಶುದ್ಧ ಸಂಗೀತ ಹಾಗೂ ಶೃತಿ ಮುಖ್ಯ ಎನ್ನುತ್ತಾರೆ. ಆದರೆ ಬಿ.ವಿ.ಕಾರಂತರ ಪರಂಪರೆಯವರಾದ ನಾವು ಅಪಶೃತಿಯವರು. ರಂಗಭೂಮಿಗೆ ಶೃತಿ ಎಷ್ಟು ಮುಖ್ಯವೋ ಅಪಶೃತಿಯೂ ಅಷ್ಟೇ ಮುಖ್ಯ ಎಂದು ಬಿ.ವಿ.ಕಾರಂತರು ಹೇಳುತ್ತಿದ್ದರು. ಹಾಗೆಂದ ಮಾತ್ರಕ್ಕೆ ಅವರಿಗೆ ಸಂಗೀತ ಬರುತ್ತಿರಲಿಲ್ಲವೆಂದಲ್ಲ. ಅವರು ಸಂಗೀತ ಬಹಳ ದೊಡ್ಡ ದಿಗ್ಗಜರು. ಸುರಭಿ ಕಂಪನಿಗೆ ಬಹಳ ದೊಡ್ಡ ಕಾಯಕಲ್ಪ ಕೊಟ್ಟವರು. ಭಾರತೀಯ ರಂಗಭೂಮಿಗೆ ಬಹಳ ಜನ ಕಲಾವಿದರನ್ನು ಕಲ್ಪಿಸಿಕೊಟ್ಟ ಮಹನೀಯರು ಎಂದು ಸ್ಮರಿಸಿದರು.

ಮೈಸೂರು ಅರಮನೆಯಲ್ಲಿ ಪಾಶ್ಚಿಮಾತ್ಯ, ಹಿಂದೂಸ್ತಾನಿ ಹಾಗೂ ಕರ್ನಾಟಕ ಸಂಗೀತಕ್ಕೂ ಉತ್ತೇಜನ ನೀಡಲಾಗುತ್ತಿತ್ತು. ಸ್ವತಃ ನಾಲ್ವಡಿ ಕೃಷ್ಣರಾಜ ಒಡೆಯರ್ ಸಂಗೀತ ಪ್ರೇಮಿಗಳು. ಅವರು ಸಂಗೀತವನ್ನು ಬಲ್ಲವರಾಗಿದ್ದರು. ಕಲೆ, ಸಂಸ್ಕೃತಿ ಹಾಗೂ ಸಂಗೀತ ಎಲ್ಲದಕ್ಕೂ ದೊಡ್ಡ ಬುನಾದಿಯನ್ನು ಮೈಸೂರು ಸಂಸ್ಥಾನವೂ ಹಾಕಿಕೊಟ್ಟಿದೆ ಎಂದು ತಿಳಿಸಿದರು.

ಇದೇ ವೇಳೆ 15 ದಿನಗಳ ಕಾರ್ಯಾಗಾರದ ಪರಿಚಯ ಪುಸ್ತಿಕೆ ಬಿಡುಗಡೆ ಮಾಡಲಾಯಿತು. ಅಲ್ಲದೆ, ಕಾರ್ಯಾಗಾರದ ಶಿಬಿರಾರ್ಥಿಗಳು ಅಭಿನಯ ಸಮೇತ ರಂಗಗೀತೆಗಳ ತುಣುಕು ಪ್ರದರ್ಶಿಸಿದರು. ಸಂಗೀತ ವಿವಿಯ ಆವರಣದಲ್ಲಿ ನಡೆದ 15 ದಿನಗಳ ಕಾರ್ಯಾಗಾರದಲ್ಲಿ 9 ಜಿಲ್ಲೆಗಳಿಂದ 22 ಮಂದಿ ಶಿಬಿರಾರ್ಥಿಗಳು ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಶಿಬಿರಾರ್ಥಿಗಳಿಗೆ ಪ್ರಮಾಣಪತ್ರಗಳನ್ನು ವಿತರಣೆ ಮಾಡಲಾಯಿತು.

ಸಂಗೀತ ವಿವಿ ಕುಲಪತಿ ಪ್ರೊ.ನಾಗೇಶ್ ವಿ.ಬೆಟ್ಟಕೋಟೆ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಾಗಾರದ ನಿರ್ದೇಶಕ ವೈ.ಎಂ.ಪುಟ್ಟಣ್ಣಯ್ಯ, ಪೌರಾಣಿಕ ನಾಟಕಗಳ ನಿರ್ದೇಶಕ ರಾಜಪ್ಪ ಕಿರಗಸೂರು, ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು, ವೃತ್ತಿ ರಂಗಭೂಮಿ ರಂಗಾಯಣದ ನಿರ್ದೇಶಕ ಮಲ್ಲಿಕಾರ್ಜುನ ಕಡಕೋಳ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ ಮತ್ತಿತರರು ಹಾಜರಿದ್ದರು.

> ಕನ್ನಡ ರಂಗಭೂಮಿ ವೈವಿಧ್ಯಮಯವಾದುದು. ವೃತ್ತಿ, ಹವ್ಯಾಸಿ, ಚಿಂತನಾ ಪ್ರಧಾನ, ಮನರಂಜನಾ ಪ್ರಧಾನ, ರೆಪರ್ಟರಿ ಈ ಎಲ್ಲರೂ ಪರಸ್ಪರ ಕಲಿಯುವುದು ಇದ್ದೇ ಇದೆ. ಇವುಗಳ ನಡುವೆ ನಾನೇನು ಬಹಳ ದೊಡ್ಡ ವ್ಯತ್ಯಾಸಗಳನ್ನು ಕಂಡಿಲ್ಲ. ಭಾರತೀಯ ಹಾಗೂ ಪಾಶ್ಚಿಮಾತ್ಯ ಎರಡೂ ವಾದ್ಯಗಳನ್ನು ನಮಗೆ ಬೇಕಾದಂತೆ ಯಶಸ್ವಿಯಾಗಿ ಬಳಸಿಕೊಂಡಿರುವುದನ್ನು ನಮ್ಮ ರಂಗಭೂಮಿಯಲ್ಲಿ ಕಾಣಬಹುದು.
> -ಡಾ.ರಾಜಪ್ಪ ದಳವಾಯಿ

ವಿದ್ಯಾರ್ಥಿಗಳ ಸೇವಾ ಮನೋಭಾವ ಬೆಳೆಯಲು ಎನ್‌ಎಸ್‌ಎಸ್, ಎನ್‌ಸಿಸಿ ಸಹಕಾರಿ

ವಿಧಾನ ಪರಿಷತ್ ಮಾಜಿ ಉಪಸಭಾಪತಿ ಮರಿತಿಬ್ಬೇಗೌಡ ಅಭಿಮತ



ರೋಟರಿ ಮೈಸೂರು ಮಿಡ್‌ಟೌನ್– ಟ್ರೀನಿಟಿ ಅಕಾಡೆಮಿಕ್ ಎಕ್ಸಲೆನ್ಸ್ ಅವಾರ್ಡ್ ಪ್ರಶಸ್ತಿಯನ್ನು ವಿದ್ಯಾರ್ಥಿಗಳಾದ ಎಂ.ಎಸ್.ನಮನಶ್ರೀ, ಕೃತಿಕ್ ಸಿ.ಅರಸ್ ಅವರಿಗೆ ಪ್ರದಾನ ಮಾಡಲಾಯಿತು.

ಮೈಸೂರು, ಜು.16(ಎಸ್‌ಪಿಎನ್)– ಶಾಲಾ ಕಾಲೇಜು ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಸೇವಾ ಮನೋಭಾವ ಬೆಳೆಸಲು ಎನ್‌ಎಸ್‌ಎಸ್ ಹಾಗೂ ಎಸ್‌ಸಿಸಿ ಘಟಕಗಳಲ್ಲಿ ತೊಡಗಿಸಬೇಕು ಎಂದು ವಿಧಾನ ಪರಿಷತ್ ಮಾಜಿ ಉಪ ಸಭಾಪತಿ ಮರಿತಿಬ್ಬೇಗೌಡ ಸಲಹೆ ನೀಡಿದರು.

ಮೈಸೂರು ಜೆಎಲ್‌ಬಿ ರಸ್ತೆಯ ಐಡಿಯಲ್ ಜಾವಾ ರೋಟರಿ ಸಭಾಂಗಣದಲ್ಲಿ ಟ್ರೀನಿಟಿ ಮತ್ತು ರೋಟರಿ ಮೈಸೂರು ಮಿಡ್‌ಟೌನ್ ಸಹಯೋಗದೊಂದಿಗೆ ಏರ್ಪಡಿಸಿದ್ದ ರೋಟರಿ ಮೈಸೂರು ಮಿಡ್‌ಟೌನ್ ಟ್ರೀನಿಟಿ ಅಕಾಡೆಮಿಕ್ ಎಕ್ಸಲೆನ್ಸ್ ಅವಾರ್ಡ್ ಪ್ರಶಸ್ತಿಯನ್ನು ಎಸ್‌ಎಸ್‌ಎಲ್‌ಸಿಯಲ್ಲಿ 625ಕ್ಕೆ 623 ಅಂಕಗಳಿಸಿರುವ ಎಂ.ಎಸ್. ನಮನಶ್ರೀ, ಪಿಯುಸಿಯಲ್ಲಿ 600ಕ್ಕೆ 582 ಅಂಕಗಳಿಸಿರುವ ಕೃತಿಕ್ ಸಿ ಅರಸ್ ಅವರಿಗೆ ಪ್ರದಾನ ಮಾಡಿ ಅವರು ಮಾತನಾಡಿದರು.

ಟ್ರೀನಿಟಿ ಕಾಲೇಜು ಕಳೆದ 8 ವರ್ಷಗಳಿಂದ ಉತ್ತಮ ಶಿಕ್ಷಣ ನೀಡುತ್ತಿದೆ. ಇಲ್ಲಿನ ಬೋಧಕರು, ಮಕ್ಕಳ ಏಳಿಗೆಗೆ ಸಾಕಷ್ಟು ಶ್ರಮಿಸುತ್ತಿದ್ದಾರೆ. ಆದರೆ, ಮಕ್ಕಳನ್ನು ತರಗತಿಗೆ ಸೀಮಿತವಾಗಿ ಶಿಕ್ಷಣ ನೀಡುವುದರ ಜೊತೆಯಲ್ಲಿ ಸಾಮಾಜಿಕ ಸೇವಾ ಮನೋಭಾವವನ್ನು, ಶಾಲಾ–ಕಾಲೇಜು ದಿನಗಳಿಂದಲೇ ಕಲಿಸಲು ಪ್ರಯತ್ನಿಸಬೇಕು. ಅದಕ್ಕಾಗಿ ಎನ್‌ಎಸ್‌ಎಸ್, ಎನ್‌ಸಿಸಿ ಘಟಕಗಳ ವೇದಿಕೆಗಳನ್ನು ಬಳಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ವಿದ್ಯಾರ್ಥಿಗಳಿಗೆ ಓದಿನ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಲು ಪ್ರೋತ್ಸಾಹಿಸಬೇಕು. ಇದರಿಂದ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕೆ ನಾಂದಿಯಾಗುತ್ತದೆ. ಹಾಗೂ ಸಮಾಜದ ಕಷ್ಟ–ನಷ್ಟಗಳು ಅರಿವಿಗೆ ಬರುತ್ತದೆ. ಇದರಿಂದ ತಮ್ಮ ಮುಂದಿನ ಬದುಕು ರೂಪಿಸಿಕೊಳ್ಳಲು ಸಹಕಾರಿ. ರೋಟರಿ ಮೈಸೂರು ಮಿಡಟೌನ್ ಪ್ರತಿಭಾವಂತರನ್ನು ಗುರುತಿಸಿ, ಅವರನ್ನು ಗೌರವಿಸುವುದು ಸಂತೋಷದ ವಿಷಯ ಎಂದರು.

ಈ ವೇಳೆ ರೊ.ರಾಕೇಸ್ ಬಾಬು, ರೊ.ಭಾಸ್ಕರ್ ಸೈನಿಕ್, ರೊ.ಎಲಿಜರ್ ವಿಲ್ಸನ್ ಸೇರಿದಂತೆ ಇತರರನ್ನು ಉಪಸ್ಥಿತರಿದ್ದರು.

ಸಾಧನಾ ಸಮಾವೇಶದಲ್ಲಿ ಕೆ.ಆರ್.ಕ್ಷೇತ್ರದಿಂದ 10 ಸಾವಿರಕ್ಕೂ ಅಧಿಕ ಜನ ಪಾಲ್ಗೊಳ್ಳಬೇಕು

ಕಾರ್ಯಕರ್ತರಿಗೆ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಸಲಹೆ



ಸಾಧನಾ ಸಮಾವೇಶ ಸಿದ್ಧತಾ ಸಭೆಯಲ್ಲಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮಾತನಾಡಿದರು.

ಮೈಸೂರು, ಜು.16(ಎಂಕೆ)– ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಜು.19 ರಂದು ನಡೆಯುವ ರಾಜ್ಯ ಸರ್ಕಾರದ ಸಾಧನಾ ಸಮಾವೇಶದಲ್ಲಿ ಕೆ.ಆರ್.ಕ್ಷೇತ್ರದಿಂದ 10 ಸಾವಿರಕ್ಕೂ ಕಾರ್ಯಕರ್ತರು, ಮುಖಂಡರು, ಫಲಾನುಭವಿಗಳು ಭಾಗವಹಿಸುವಂತೆ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಕರೆ ನೀಡಿದರು.

ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ಕಾಂಗ್ರೆಸ್ ಕಚೇರಿಯಲ್ಲಿ ಸಾಧನಾ ಸಮಾವೇಶ ಸಿದ್ಧತೆ ಹಿನ್ನಲೆಯಲ್ಲಿ ಆಯೋಜಿಸಿದ್ದ ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಮುಖಂಡರ ಸಭೆಯಲ್ಲಿ ಮಾತನಾಡಿದ ಅವರು, ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರದ ಆಡಳಿತ ದೇಶಕ್ಕೆ ಮಾದರಿಯಾಗಿದೆ. ಈ ಸರ್ಕಾರದ ಎರಡು ವರ್ಷದ ಸಾಧನಾ ಸಮಾವೇಶವನ್ನು ಯಶಸ್ವಿಗೊಳಿಸುವುದು ನಮ್ಮೆಲ್ಲರ ಕರ್ತವ್ಯವಾಗಿದ್ದು, ಕೆ.ಆರ್.ಕ್ಷೇತ್ರದಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು. ಹಾಗೆಯೇ ಜು.18 ರಂದು ನಡೆಯುವ 18 ರಂದು ನಡೆಯುವ ಯುವಕಾಂಗ್ರೆಸ್ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮವನ್ನೂ ಯಶಸ್ವಿಗೊಳಿಸುವಂತೆ ತಿಳಿಸಿದರು.

ಸಿದ್ದರಾಮಯ್ಯನವರು ದೇಶದ ಬೇರ್‍ಯಾವ ರಾಜ್ಯದಲ್ಲಿಯೂ ಜಾರಿಗೊಳಿಸಲಾಗದ ಅತ್ಯಂತ ಜನಪ್ರಿಯ ಯೋಜನೆಗಳನ್ನು ಈ ನಾಡಿಗೆ ನೀಡಿದ್ದಾರೆ. ಅವರು ನೀಡಿದಂತಹ ಪಂಚ ಗ್ಯಾರಂಟಿ ಯೋಜನೆಗಳ ಮೂಲಕ ರಾಜ್ಯದಲ್ಲಿ ಬಡತನದ ಪ್ರಮಾಣ ಬಹುತೇಕ ತಗ್ಗಿದೆ. ಅದಕ್ಕೂ ಮಿಗಿಲಾಗಿ ನೆರೆಹೊರೆಯ ರಾಜ್ಯಗಳಿಂದಲೂ ನಮ್ಮ ರಾಜ್ಯಕ್ಕೆ ಬಂದು ಇಲ್ಲಿಯ ಯೋಜನೆಗಳಿಂದ ಪ್ರೇರೇಪಿತರಾಗಿ ಮಾಹಿತಿ ಪಡೆದು, ತಮ್ಮ ರಾಜ್ಯದಲ್ಲಿಯೂ ಅನುಷ್ಠಾನಕ್ಕೆ ತರುವಂತಹ ಕೆಲಸಗಳಾಗುತ್ತಿವೆ ಎಂದು ಶ್ಲಾಘಿಸಿದರು.

ಜನಪರ ಸರ್ಕಾರದ ಎರಡು ವರ್ಷಗಳ ಸಾಧನಾ ಸಮಾವೇಶ ಮೈಸೂರಿನಲ್ಲಿ ಜರುಗುತ್ತಿರುವುದು ಒಂದು ಐತಿಹಾಸಿಕ ಸಂಗತಿಯಾಗಿದೆ. ಆದರೆ, ಬಿಜೆಪಿ ಮತ್ತು ಜೆಡಿಎಸ್ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಗಳನ್ನು ನೋಡಿ ಕಂಗಾಲಾಗಿ ಸುಳ್ಳು ಪ್ರಚಾರಗಳನ್ನು ಪ್ರಾರಂಭಿಸಿದೆ ಎಂದು ವ್ಯಂಗ್ಯವಾಡಿದರು.

ಮೈಸೂರು ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಪ್ರಧಾನ ಕಾರ್ಯದರ್ಶಿ ಎಂ.ಶಿವಣ್ಣ, ಕೆಪಿಸಿಸಿ ವಕ್ತಾರ ಹೆಚ್.ಎ. ವೆಂಕಟೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀಧರ್, ಮಾಜಿ ಮೇಯರ್‌ಗಳಾದ ಟಿ.ಬಿ. ಚಿಕ್ಕಣ್ಣ, ಪುಷ್ಪಲತಾ ಚಿಕ್ಕಣ್ಣ, ಮಾಜಿ ಉಪ ಮೇಯರ್ ಸಿದ್ದರಾಜು, ನಗರಪಾಲಿಕೆ ಮಾಜಿ ಸದಸ್ಯರಾದ ಶೋಭಾ ಸುನೀಲ್, ಜೆಗೋಪಿ, ಪ್ರಭುಮೂರ್ತಿ, ಕೆ.ವಿ.ಮಲ್ಲೇಶ್, ಮುಖಂಡರಾದ ಶ್ರೀನಾಥ್ ಬಾಬು, ರಾಮಪ್ಪ ರಮೇಶ್, ಮೊಗಣ್ಣಾಚಾರ್, ಭವ್ಯ, ಇಂದಿರಾ, ಮುಲ್ಲಾಜಮ್ಮ, ಆಶ್ರಯ ಸಮಿತಿ ಸದಸ್ಯರಾದ ಗುಣಶೇಖರ್, ಮಹ್ಮದ್ ಫಾರೂಖ್, ರಾಕೇಶ್, ನವೀನ್ ಕೆಂಪಿ, ಮದನ್, ಅಜಯ್ ಮತ್ತಿತರರಿದ್ದರು.

ಯುವನಿಧಿ ಯೋಜನೆಯಡಿ ನೋಂದಾಯಿಸಲು ಪೋಸ್ಟರ್ ಬಿಡುಗಡೆ

ಮೈಸೂರು,ಜು.16– ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಡಿಯಲ್ಲಿ ಒಂದಾದ ಯುವ ನಿಧಿ ಕಾರ್ಯಕ್ರಮದ 2025ನೇ ಸಾಲಿಗೆ ಪದವೀಧರ, ಸ್ನಾತಕೋತ್ತರ ಪದವಿ, ಡಿಪ್ಲೋಮದಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳಿಗೆ ಯುವನಿಧಿ ಕಾರ್ಯಕ್ರಮದಡಿಯಲ್ಲಿ ನೋಂದಾಯಿಸಲು ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಯುಕೇಶ್ ಕುಮಾರ್, 2025ನೇ ಸಾಲಿಗೆ ಯುವನಿಧಿ ಯೋಜನೆಯಡಿ ನೋಂದಾಯಿಸಲು ಪೋಸ್ಟರ್‌ನ್ನು ಬಿಡುಗಡೆಗೊಳಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಸವಿತಾ ಹಾಗೂ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ಸಹಾಯಕ ನಿರ್ದೇಶಕರಾದ ಡಿ.ಎಂ.ರಾಣಿ ಉಪಸ್ಥಿತರಿದ್ದರು.

ಇಂದು ಸುಪ್ರೀಂಕೋರ್ಟ್‌ನಲ್ಲಿ ದರ್ಶನ್ ಜಾಮೀನು ಭವಿಷ್ಯ ನಿರ್ಧಾರ



ನವದೆಹಲಿ, ಜು. 16– ಚಿತ್ರದುರ್ಗ ಮೂಲದ ರೇಣುಕಾಸ್ವಾಮಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ದರ್ಶನ್ ಮತ್ತು ಸಹಚರರ ಜಾಮೀನು ಭವಿಷ್ಯ ಗುರುವಾರ (ಜು.17) ಸುಪ್ರೀಂ ಕೋರ್ಟ್‌ನಲ್ಲಿ ನಿರ್ಧಾರ ಆಗಲಿದೆ. 2024ರ ಡಿಸೆಂಬರ್‌ನಲ್ಲಿ ಆರೋಪಿಗಳಿಗೆ ಕರ್ನಾಟಕ ಹೈಕೋರ್ಟ್ ಜಾಮೀನು ನೀಡಿತ್ತು. ಆದರೆ ಅದನ್ನು ಪ್ರಶ್ನಿಸಿ ರಾಜ್ಯ ಸರ್ಕಾರ ಸುಪ್ರೀಂಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿತ್ತು. ದರ್ಶನ್ ಸೇರಿ 7 ಆರೋಪಿಗಳ ಜಾಮೀನು ರದ್ದು ಮಾಡುವಂತೆ ರಾಜ್ಯ ಸರ್ಕಾರ ಕೋರಿದೆ. ಅದಕ್ಕೆ ಸಂಬಂಧಿಸಿದಂತೆ ಜು.17ರಂದು ಸುಪ್ರೀಂಕೋರ್ಟ್‌ನಲ್ಲಿ ಆದೇಶ ಹೊರಬೀಳುವ ಸಾಧ್ಯತೆ ಇದೆ.

ದರ್ಶನ್ ಪ್ರಭಾವಿ ವ್ಯಕ್ತಿ ಆದ ಕಾರಣ ಅವರು ಸಾಕ್ಷಿಗಳ ಮೇಲೆ ಪ್ರಭಾವ ಬೀರುವ ಸಾಧ್ಯತೆ ಇದೆ ಎಂಬ ಕಾರಣ ದಿಂದ ಅವರಿಗೆ ನೀಡಿರುವ ಜಾಮೀನನ್ನು ರಾಜ್ಯ ಸರ್ಕಾರ ಪ್ರಶ್ನಿಸಿದೆ. ಜಾಮೀನು ರದ್ದು ಮಾಡುವಂತೆ ಕೋರಿ ಸುಪ್ರೀಂಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಲಾಗಿದೆ. ಸುಪ್ರೀಂಕೋರ್ಟ್ ಯಾವ ಆದೇಶ ನೀಡಲಿದೆ ಎಂಬುದರ ಮೇಲೆ ದರ್ಶನ್ ಮತ್ತು ಇತರ ಆರೋಪಿಗಳ ಭವಿಷ್ಯ ನಿರ್ಧಾರ ಆಗಲಿದೆ.

128 ವರ್ಷಗಳ ಬಳಿಕ ಒಲಿಂಪಿಕ್ಸ್‌ಗೆ ಮರಳಿದ ಕ್ರಿಕೆಟ್; ವೇಳಾಪಟ್ಟಿ ಪ್ರಕಟ

ನವದೆಹಲಿ, ಜು.16– 128 ವರ್ಷಗಳ ಬಳಿಕ 2028ರ ಲಾಸ್ ಏಂಜಲೀಸ್‌ನಲ್ಲಿ ನಡೆಯುವ ಒಲಿಂಪಿಕ್ ಕ್ರೀಡಾಕೂಟಕ್ಕೆ ಕ್ರಿಕೆಟ್ ಅಧಿಕೃತವಾಗಿ ಮರಳಿದ್ದು, ಕ್ರಿಕೆಟ್ ದಿನಾಂಕಗಳನ್ನು ಅಧಿಕೃತವಾಗಿ ಘೋಷಣೆ ಮಾಡಲಾಗಿದೆ.

ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ ಎಲ್‌ಎ28ನಲ್ಲಿ ಪುರುಷ ಮತ್ತು ಮಹಿಳಾ ವಿಭಾಗಗಳಿಗೆ ಟಿ–20 ಸ್ಪರ್ಧೆಗಳು ಜುಲೈ 12 ರಿಂದ ಜುಲೈ 29, 2028 ರವರೆಗೆ ನಡೆಯಲಿವೆ ಎಂದು ಘೋಷಿಸಿದೆ. ಪದಕ ಪಂದ್ಯಗಳು ಕ್ರಮವಾಗಿ ಜುಲೈ 20 (ಮಹಿಳೆಯರು) ಮತ್ತು ಜುಲೈ 29 (ಪುರುಷರು) ರಂದು ನಡೆಯಲಿವೆ.

128 ವರ್ಷಗಳ ಬಳಿಕ ಮರಳಿದ ಕ್ರಿಕೆಟ್: ಈ ಘೋಷಣೆಯು ಕ್ರಿಕೆಟ್ ಕ್ರೀಡೆಗೆ ಮತ್ತೊಂದು ಹೆಗ್ಗುರುತಿನ ಕ್ಷಣವಾಗಿದ್ದು, ಇತಿಹಾಸದಲ್ಲಿ ಕ್ರಿಕೆಟ್ ಎರಡನೇ ಬಾರಿಗೆ ಒಲಿಂಪಿಕ್‌ನಲ್ಲಿ ಕಾಣಿಸಿಕೊಳ್ಳುತ್ತಿದೆ. ಈ ಹಿಂದೆ 1900ರಲ್ಲಿ ಪ್ಯಾರಿಸ್‌ನಲ್ಲಿ ಪಾದಾರ್ಪಣೆ ಮಾಡಿದ್ದ ಕ್ರಿಕೆಟ್ ಕ್ರೀಡೆಯನ್ನು ಬಳಿಕ ಕೈಬಿಡಲಾಗಿತ್ತು. ಅಂದಿನ ಚೊಚ್ಚಲ ಟೂರ್ನಿಯಲ್ಲಿ ಫ್ರಾನ್ಸ್ ವಿರುದ್ಧದ ಏಕೈಕ ಪಂದ್ಯದಲ್ಲಿ ಗ್ರೇಟ್ ಬ್ರಿಟನ್ ಗೆದ್ದು ಚಿನ್ನ ಪದಕಕ್ಕೆ ಭಾಜನವಾಗಿತ್ತು. ಇದಾದ 128 ವರ್ಷಗಳ ನಂತರ, ನಂತರ ಮತ್ತೆ ಕ್ರಿಕೆಟ್ ಒಲಿಂಪಿಕ್ಸ್‌ನಲ್ಲಿ ಕಾಣಿಸಿಕೊಳ್ಳುತ್ತಿದೆ.

ನೂತನ ವೇಳಾಪಟ್ಟಿ: ಈ ನೂತನ ವೇಳಾಪಟ್ಟಿ ಅನ್ವಯ ಪುರುಷ ಮತ್ತು ಮಹಿಳೆಯರ ವಿಭಾಗದಲ್ಲಿ ತಲಾ 6 ತಂಡಗಳು ಪ್ರಶಸ್ತಿಗೆ ಸ್ಪರ್ಧಿಸುತ್ತಿವೆ. ಪ್ರತಿ ಪಂದ್ಯಾವಳಿಗೆ 90 ಅಥ್ಲೀಟ್ ಕೋಟಾಗಳನ್ನು ನಿಗದಿಪಡಿಸಲಾಗಿದೆ, ಇದು ರಾಷ್ಟ್ರಗಳು 15 ಸದಸ್ಯರ ತಂಡಗಳನ್ನು ಹೆಸರಿಸಲು ಅನುವು ಮಾಡಿಕೊಡುತ್ತದೆ. ಎಲ್ಲಾ ಪಂದ್ಯಗಳನ್ನು ಲಾಸ್ ಏಂಜಲೀಸ್‌ನ ಡೌನ್‌ಟೌನ್‌ನಿಂದ ಸುಮಾರು 50 ಕಿ.ಮೀ ದೂರದಲ್ಲಿರುವ ಪೊಮೊನಾ ಫೇರ್‌ಪ್ಲೆಕ್ಸ್ ಮೈದಾನದಲ್ಲಿ ಆಯೋಜಿಸಲಾಗುವುದು ಎಂದು ಹೇಳಲಾಗಿದೆ.

ಈ ಪೈಕಿ ಅಂದರೆ ಈ ಮಾದರಿಯು ಹೆಚ್ಚಿನ ಪಂದ್ಯಗಳ ದಿನಗಳಲ್ಲಿ ಡಬಲ್–ಹೆಡರ್‌ಗಳನ್ನು ಒಳಗೊಂಡಿರುತ್ತದೆ. ಅಂದರೆ ಒಂದೇ ದಿನ ಒಂದಕ್ಕಿಂತ ಹೆಚ್ಚಿನ ಪಂದ್ಯಗಳು ಆಯೋಜನೆಯಾಗುತ್ತವೆ. ಪಂದ್ಯಗಳು ಸ್ಥಳೀಯ ಸಮಯ ಬೆಳಿಗ್ಗೆ 9:00 ಮತ್ತು ಸಂಜೆ 6:30ಕ್ಕೆ ಪ್ರಾರಂಭವಾಗುತ್ತವೆ ಎಂದು ಹೇಳಲಾಗುತ್ತಿದೆ.

ಕೆಬಿಜಿಯವರಿಗೆ ಮೈಸೂರು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಶ್ರದ್ಧಾಂಜಲಿ...





ಮೈಸೂರಿನ ಕೆಸಿ ಬಡಾವಣೆಯಲ್ಲಿರುವ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ (ಕೆಬಿಜಿ) ಅವರ ನಿವಾಸಕ್ಕೆ ಬುಧವಾರ ಸಂಜೆ ಭೇಟಿ ನೀಡಿದ ಮೈಸೂರು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಅವರು ಕೆ.ಬಿ.ಗಣಪತಿಯವರ ಭಾವಚಿತ್ರಕ್ಕೆ ನಮಿಸಿ, ಶ್ರದ್ಧಾಂಜಲಿ ಅರ್ಪಿಸಿದರು. (ಬಲಚಿತ್ರ) ಇದೇ ವೇಳೆ ಕೆ.ಬಿ.ಗಣಪತಿಯವರ ಧರ್ಮಪತ್ನಿ, ಅಕಾಡೆಮಿ ನ್ಯೂಸ್ ಪೇಪರ್ಸ್ ಪ್ರೈವೇಟ್ ಲಿಮಿಟೆಡ್‌ನ ಕಾರ್ಯಕಾರಿ ನಿರ್ದೇಶಕರಾದ ಕೆ.ಕೆ.ದೇವಮ್ಮ (ರ್‍ಯಾಲಿ ಗಣಪತಿ) ಹಾಗೂ ಪುತ್ರರು, ಅಕಾಡೆಮಿ ನ್ಯೂಸ್ ಪೇಪರ್ಸ್ ಪ್ರೈವೇಟ್ ಲಿಮಿಟೆಡ್‌ನ ಛೇರ್ಮನ್ ಮತ್ತು ಮ್ಯಾನೇಜಿಂಗ್ ಡೈರೆಕ್ಟರ್ ಕೆ.ಜಿ.ವಿಕ್ರಂ ಮುತ್ತಣ್ಣ ಅವರಿಗೆ ಲಕ್ಷ್ಮೀಕಾಂತರೆಡ್ಡಿ ಸಾಂತ್ವನ ಹೇಳಿದರು.

ಪರಿಶಿಷ್ಟರ ಬಗ್ಗೆ ಕಾಂಗ್ರೆಸ್‌ಗೆ ಕಿಂಚಿತ್ತು ಕಾಳಜಿ ಇದ್ದರೆ

ಮಲ್ಲಿಕಾರ್ಜುನ ಖರ್ಗೆ ಅವರ ಪ್ರಧಾನಿ ಅಭ್ಯರ್ಥಿ ಎಂದು ಘೋಷಿಸಲಿ

ಬೆಂಗಳೂರು, ಜು. 16(ಕೆಎಂಶಿ)–ಕಾಂಗ್ರೆಸ್‌ಗೆ ಪರಿಶಿಷ್ಟ ವರ್ಗಗಳ ಬಗ್ಗೆ ಕಿಂಚಿತ್ತಾದರೂ ಕಾಳಜಿ ಇದ್ದರೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಪ್ರಧಾನಿ ಅಭ್ಯರ್ಥಿ ಎಂಬುದಾಗಿ ಘೋಷಿಸಿ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಇಂದಿಲ್ಲಿ ಸವಾಲು ಹಾಕಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇವರ ಯೋಗ್ಯತೆಗೆ ಅದು ಸಾಧ್ಯವಿಲ್ಲ. ರಾಹುಲ್ ಗಾಂಧಿ, ಸೋನಿಯಾ ಗಾಂಧಿ ಇದನ್ನು ಒಪ್ಪುವುದು ಅಸಾಧ್ಯ. ಕಾಂಗ್ರೆಸ್ ಪಕ್ಷಕ್ಕೆ ಹಿಂದುಳಿದ ವರ್ಗ, ಪರಿಶಿಷ್ಟ ಜಾತಿ, ಪಂಗಡ, ಅಲ್ಪಸಂಖ್ಯಾತರ ಬಗ್ಗೆ ಪ್ರಾಮಾಣಿಕ ಕಾಳಜಿ ಇದೆಯೇ ಎಂದು ಪ್ರಶ್ನಿಸಿದರು.

ಸಿದ್ದರಾಮಯ್ಯ ತಮ್ಮನ್ನು ಹಿಂದುಳಿದ ವರ್ಗಗಳ ಹಾಗೂ ಅಹಿಂದ ಚಾಂಪಿಯನ್ ಎಂಬುದಾಗಿ ಕರೆದುಕೊಳ್ಳುತ್ತಾರೆ. ಕಾಂತರಾಜು ವರದಿಯನ್ನು ಸಚಿವ ಸಂಪುಟ ಸಭೆ ಮುಂದೆ ಮಂಡಿಸುವುದಾಗಿ ಹೇಳುತ್ತಿದ್ದೀರಿ, ನಂತರ ರಾಹುಲ್ ಗಾಂಧಿ ಆದೇಶ ಮಾಡಿದ್ದಾರೆಂದು 165 ಕೋಟಿ ರೂ. ಖರ್ಚು ಮಾಡಿ ಸಿದ್ಧಪಡಿಸಿದ್ದ ವರದಿಯನ್ನು ಕಸದ ಬುಟ್ಟಿಗೆ ಹಾಕಿದಿರಿ. ಆಗ ನಿಮ್ಮ ಹಿಂದುಳಿದವರ ಕಾಳಜಿ ಎಲ್ಲಿ ಹೋಗಿತ್ತು ಎಂದರು.

ಬೆಂಗಳೂರಿನಲ್ಲಿ ಎಐಸಿಸಿ ಒಬಿಸಿ ಸಮಿತಿ ಸಭೆಯಲ್ಲಿ ಸಿದ್ದರಾಮಯ್ಯ ಮಾತನಾಡಿ, ದೇಶದಲ್ಲಿ ಸಾಮಾಜಿಕ ನ್ಯಾಯ ಅಭಿಯಾನ ಮುನ್ನಡೆಸುವ ಜವಾಬ್ದಾರಿ ಸಮಿತಿಗಿದೆ. ದೀರ್ಘ ಕಾಲದಿಂದ ಅಧಿಕಾರ, ಅವಕಾಶ ಮತ್ತು ಘನತೆಯಿಂದ ವಂಚಿತವಾದ ಹಿಂದುಳಿದ ವರ್ಗಗಳು, ದಲಿತರು ಮತ್ತು ಅಲ್ಪಸಂಖ್ಯಾತರ ಏಳಿಗೆ ಆಗದೆ ದೇಶದ ಅಭಿವೃದ್ಧಿ ಸಾಧ್ಯವಾಗದು ಎಂದಿದ್ದಾರೆ.



ಮಲ್ಲಿಕಾರ್ಜುನ ಖರ್ಗೆ

ಬಿಜೆಪಿ ಹುಟ್ಟಿನಿಂದಲೇ ಸಾಮಾಜಿಕ ನ್ಯಾಯ ವಿರೋಧಿ, ಮೀಸಲಾತಿ ಪರ ಇಲ್ಲ ಎಂಬ ಆರೋಪ ಸರಿಯಲ್ಲ. ಕಾಂಗ್ರೆಸ್ ಕೇಂದ್ರದಲ್ಲಿ ಅಧಿಕಾರದಲ್ಲಿದ್ದಾಗ ಮಂಡಲ್ ವರದಿ ಅನುಷ್ಠಾನ ಮಾಡಿತೇ, ಕಾಂಗ್ರೆಸ್ ಬೆಂಬಲ ಕೊಟ್ಟಿತ್ತೇ. 1956ರಲ್ಲಿ ಕಾಕಾ ಕಾಲೇಕರ್ ವರದಿಯನ್ನು ಅಂದಿನ ಪ್ರಧಾನಿ ಜವಾಹರಲಾಲ್ ನೆಹರೂ ಕಸದ ಬುಟ್ಟಿಗೆ ಹಾಕಿದ್ದರಲ್ಲ. ಈ ಮಾಹಿತಿ ಸಿದ್ದರಾಮಯ್ಯ ಅವರಿಗೆ ಇಲ್ಲವೇ ಎಂದು ಪ್ರಶ್ನಿಸಿದರು.

ಹಿಂದುಳಿದ ವರ್ಗ, ಪರಿಶಿಷ್ಟ ಜಾತಿ, ಪಂಗಡ, ಅಲ್ಪಸಂಖ್ಯಾತರನ್ನು ಮನೆ ಆಳುಗಳಂತೆ ನೆಹರೂ–ಗಾಂಧಿ ಕುಟುಂಬ ನೋಡಿಕೊಂಡು ಬಂದಿದೆ. ಇಂಥ ಕಾಂಗ್ರೆಸ್‌ನಿಂದ ಹಿಂದುಳಿದ ವರ್ಗಕ್ಕೆ ನ್ಯಾಯ ಕೊಡಲು ಸಾಧ್ಯವೇ ಎಂಬುದಾಗಿ ಜನ ಕೇಳುತ್ತಿದ್ದಾರೆ ಎಂದರು.

ಬಿಹಾರ ವಿಧಾನಸಭಾ ಚುನಾವಣೆ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಎಐಸಿಸಿ ಒಬಿಸಿ ಸಮಿತಿ ಸಿದ್ದರಾಮಯ್ಯ ಮೂಲಕ ಹಿಂದುಳಿದ ವರ್ಗಗಳ ಬಗ್ಗೆ ಮೊಸಳೆ ಕಣ್ಣೀರು ಹಾಕುತ್ತಿದೆ. ಸ್ವಾತಂತ್ರ್ಯಾನಂತರದ 75 ವರ್ಷಗಳಲ್ಲಿ ಅದೂ 55 ರಿಂದ 60 ವರ್ಷ ದೇಶ ಮತ್ತು ರಾಜ್ಯದಲ್ಲಿ ಆಡಳಿತ ನಡೆಸಿದೆ. ಕಾಂಗ್ರೆಸ್‌ನ ಒಂದೇ ಒಂದು ಕುಟುಂಬ ಅಧಿಕಾರ ನಡೆಸಿದೆ.

ಕಾಂಗ್ರೆಸ್ ಪಕ್ಷಕ್ಕೆ ಈ ದೇಶ ಹಾಗೂ ರಾಜ್ಯದಲ್ಲಿ ಹಿಂದುಳಿದ ವರ್ಗ, ಪರಿಶಿಷ್ಟ ಜಾತಿ, ಪಂಗಡಗಳಿಗೆ ಅನ್ಯಾಯ ಆಗುತ್ತಿದೆ ಎಂಬುದಾಗಿ ಸಿದ್ದರಾಮಯ್ಯ ಅವರಿಗೆ 2025ರಲ್ಲಿ ಅನಿಸಿದರೆ ಅದಕ್ಕೆ ಹೊಣೆ ಯಾರು, ಅವರ ಪಕ್ಷವೇ ಹೊಣೆ ಹೊರಬೇಕಾಗುತ್ತದೆ.

ಹಿಂದುಳಿದ ವರ್ಗಗಳ ಮತ್ತು ಅಹಿಂದ ಚಾಂಪಿಯನ್ ಇವರೊಬ್ಬರೇ ಎಂಬ ಭ್ರಮೆಯಲ್ಲಿ ಸಿದ್ದರಾಮಯ್ಯ ಇದ್ದಾರೆ. ಪ್ರಧಾನಮಂತ್ರಿ ನರೇಂದ್ರ ಮೋದಿ 2001ರಿಂದ 2014ರವರೆಗೆ ಸತತವಾಗಿ ಗುಜರಾತ್ ಮುಖ್ಯಮಂತ್ರಿಯಾಗಿ ಅಭಿವೃದ್ಧಿ ಕೆಲಸ ಮಾಡಿದರು. 2014ರಿಂದ ಕಳೆದ 11 ವರ್ಷಗಳಲ್ಲಿ ದೇಶ ಮುನ್ನಡೆಸುತ್ತಿದ್ದಾರೆ.

ಮೋದಿ ಅತ್ಯಂತ ಹಿಂದುಳಿದ ವರ್ಗಕ್ಕೆ ಸೇರಿದ ಒಬ್ಬ ಸಾಮಾನ್ಯ ವ್ಯಕ್ತಿ, ಅವರದು ರಾಜಕೀಯ, ರಾಜವಂಶಸ್ಥ ಕುಟುಂಬ ಅಲ್ಲ, ನಿಮ್ಮಂತೆ ಹಿಂದುಳಿದ ವರ್ಗದವ ಎಂಬುದಾಗಿ ಹೇಳಿಕೊಂಡು ರಾಜಕೀಯ ಬೇಳೆ ಬೇಯಿಸುವ ಪ್ರಯತ್ನ ಮಾಡಿಲ್ಲ. ಬದಲಿಗೆ ಸಬ್ ಕಾ ಸಾಥ್ ಸಬ್ ಕಾ ವಿಕಾಸ್, ಸಬ್ ಕಾ ವಿಶ್ವಾಸ್, ಸಬ್ ಕಾ ಪ್ರಯಾಸ್ ಧ್ಯೇಯವಾಕ್ಯದೊಂದಿಗೆ ಎಲ್ಲರನ್ನೂ ಒಗ್ಗೂಡಿಸಿ ದೇಶ ಮುನ್ನಡೆಸುತ್ತಿದ್ದಾರೆ ಎಂದರು.



ವಿಜಯೇಂದ್ರ

ನಿಮ್ಮ ಥರ ಅವರು ಅದೃಷ್ಟದ ಮುಖ್ಯಮಂತ್ರಿ ಅಲ್ಲ. ಲಾಟರಿ ಮುಖ್ಯಮಂತ್ರಿಯೂ ಅಲ್ಲ. ತಮ್ಮ ಪರಿಶ್ರಮದಿಂದ, ದೇಶದ ಬಗ್ಗೆ ವಿಶಿಷ್ಟ ಕಲ್ಪನೆ ಇಟ್ಟುಕೊಂಡು, ಭಾರತದ ಅಭಿವೃದ್ಧಿ ಸಂಕಲ್ಪದೊಂದಿಗೆ ಕಳೆದ 11 ವರ್ಷಗಳಿಂದ ನಿರಂತರ ದೇಶಸೇವೆ ಮಾಡುತ್ತಿದ್ದಾರೆ.

ಬಿಜೆಪಿ ಹುಟ್ಟಿನಿಂದ ಸಾಮಾಜಿಕ ನ್ಯಾಯ ವಿರೋಧಿ, ಅಲ್ಪಸಂಖ್ಯಾತರ ವಿರೋಧಿ ಎಂಬುದಾಗಿ ಬಿಂಬಿಸುವ ಸಿದ್ದರಾಮಯ್ಯ, ಬುಡಕಟ್ಟು ಸಮುದಾಯಕ್ಕೆ ಸೇರಿದ ದ್ರೌಪದಿ ಮುರ್ಮು ಅವರನ್ನು ರಾಷ್ಟ್ರಪತಿಗಳಾಗಿ, ದೇಶದ ಪ್ರಥಮ ಪ್ರಜೆಯಾಗಿ ಆರಿಸಿದವರು ಯಾರು ಎಂಬುದನ್ನು ಸಿದ್ದರಾಮಯ್ಯ ಮರೆಯಬಾರದು. ಎ.ಪಿ.ಜೆ. ಅಬ್ದುಲ್ ಕಲಾಂ ಅವರನ್ನು ರಾಷ್ಟ್ರಪತಿಗಳನ್ನಾಗಿ ಮಾಡಿದ್ದು ಬಿಜೆಪಿ, ಕಾಂಗ್ರೆಸ್ ಅಲ್ಲ. ದೇಶದಲ್ಲಿ 6 ರಾಜ್ಯಗಳಲ್ಲಿ ಪರಿಶಿಷ್ಟ ಪಂಗಡದ ಬಿಜೆಪಿಯ ಮುಖ್ಯಮಂತ್ರಿಗಳಿದ್ದಾರೆ. 4 ರಾಜ್ಯಗಳಲ್ಲಿ ಹಿಂದುಳಿದ ವರ್ಗಕ್ಕೆ ಸೇರಿದವರು ರಾಜ್ಯ ಮುನ್ನಡೆಸುತ್ತಿದ್ದಾರೆ. ಕಾಂಗ್ರೆಸ್ ಜಾತಿ–ಜಾತಿಗಳ ನಡುವೆ ವಿಷಬೀಜ ಬಿತ್ತಿ ಸಮಾಜ ಒಡೆಯುವ ಕೆಲಸ ಮಾಡುತ್ತಿದೆ. ಹಿಂದುಳಿದ ವರ್ಗ, ಎಸ್‌ಸಿ, ಎಸ್‌ಟಿ, ಅಲ್ಪಸಂಖ್ಯಾತರ ಬಗ್ಗೆಯೂ ಕಾಳಜಿ ಇಲ್ಲ. ಮುಸ್ಲಿಮರ ಬಗ್ಗೆ ಕಾಂಗ್ರೆಸ್ಸಿಗರು ಬರೀ ಮಾತನಾಡುತ್ತಾರೆ. ತ್ರಿವಳಿ ತಲಾಖ್ ರದ್ದು ಮಾಡಿದ್ದು ಯಾರು, ಜಾತಿ ಜನಗಣತಿ ಬಗ್ಗೆ ಪ್ರಾಮಾಣಿಕ ಕಳಕಳಿಯಿಂದ ನಿರ್ಧಾರ ಮಾಡಿದ್ದು, ಮೋದಿ ಎಂದರು.

ಕರ್ನಾಟಕ ಕಾಂಗ್ರೆಸ್‌ನಲ್ಲಿ ಒಳಬೇಗುದಿ ಮುಂದುವರೆದಿದೆ. ಆಡಳಿತ ಶಾಸಕರು ಹತಾಶರಾಗಿದ್ದಾರೆ. ಯಾರ ಪರ ವಕಾಲತ್ತು ವಹಿಸಬೇಕು. ಸಿದ್ದರಾಮಯ್ಯ ಪರವೇ ಅಥವಾ ಡಿ.ಕೆ.ಶಿವಕುಮಾರ್ ಪರವೇ ಎಂಬ ಗೊಂದಲದಲ್ಲಿದ್ದಾರೆ. ಪಕ್ಷದಲ್ಲಿ ಕುದುರೆ ವ್ಯಾಪಾರ ನಡೆಯುತ್ತಿರುವುದು ಗೋಚರಿಸುತ್ತಿದೆ.

ಡ್ರಗ್ ಮಾಫಿಯಾ ಪ್ರಿಯಾಂಕ್ ಖರ್ಗೆ ಉಸ್ತುವಾರಿ ಸಚಿವರಾಗಿರುವ ಕಲಬುರಗಿ ಜಿಲ್ಲೆಯಲ್ಲಿ ಗರಿಷ್ಠ ಪ್ರಮಾಣದಲ್ಲಿದೆ, ಬಂಧಿತ ವ್ಯಕ್ತಿ ಪ್ರಿಯಾಂಕ್ ಖರ್ಗೆಯ ಅತ್ಯಂತ ಸಾಮೀಪ್ಯ ಇದ್ದವರು. ಕರ್ನಾಟಕದಲ್ಲಿ ಡ್ರಗ್ ಮಾಫಿಯಾ ವಿರುದ್ಧ ಗಂಭೀರ ಕ್ರಮದ ಅಗತ್ಯವಿದೆ ಎಂದರು.

ನಕ್ಕರೆ ಅದೇ ಸ್ವರ್ಗ

ಹೆಂಡತಿ : ರೀ... ನಾನು ಮೂರು ಗಂಟೆಗಳ ಕಾಲ ಹೊರಗೆ ಹೋಗ್ತಾ ಇದ್ದೀನಿ. ನಿಮಗೇನಾದ್ರೂ ಬೇಕಾ?

ಗಂಡ : ನನಗಷ್ಟೇ ಸಾಕು!

ಮೈಸೂರು ಮಿತ್ರ

ಗುರುವಾರ, 17 ಜುಲೈ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ..........

ವೇದಗಳನ್ನು ಓದಿದವರು ದೊಡ್ಡವರಾಗುವುದಿಲ್ಲ.
ಜನರ ವೇದನೆಗಳನ್ನು ಅರಿತವರು ಮಾತ್ರ ದೊಡ್ಡವರಾಗುತ್ತಾರೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬಡವರ ಮನೆ ಊಟ ಚೆಂದ, ಬಲ್ಲಿದರ ಮನೆ ಮಾತು ಚೆಂದ

ನಿಮ್ಮ ಪತ್ರಗಳು

ಕೆಬಿಜಿಯವರಿಗೆ ನುಡಿ ನಮನ

■ ವರ್ಣರಂಜಿತ ವ್ಯಕ್ತಿತ್ವದ ಡಾ.ಕೆ.ಬಿ.ಗಣಪತಿ

ಮಾನ್ಯರೆ,



ಹಿರಿಯ ಪತ್ರಕರ್ತರು, 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ದಿನ ಪತ್ರಿಕೆಗಳ ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿಯವರ ಹಠಾತ್ ನಿಧನ ಭಾರತೀಯ ಪತ್ರಿಕಾ ರಂಗಕ್ಕೆ ಉಂಟಾಗಿರುವ ತೀವ್ರ ನಷ್ಟವಾಗಿದೆ. ಮೂಲತಃ ಕಾನೂನು ಪದವೀಧರರಾಗಿದ್ದರೂ, ಡಾ.ಗಣಪತಿಯವರ ಒಲವು ಪತ್ರಿಕೋದ್ಯಮದ ಕಡೆಗೆ ವಾಲಿತು. ಹೀಗಾಗಿ ಆರಂಭದ ಕೆಲವು ವರ್ಷಗಳ ಕಾಲ ಮುಂಬಯಿಯಲ್ಲಿ ಆಂಗ್ಲ ಪತ್ರಿಕೆಯೊಂದರಲ್ಲಿ ಪತ್ರಕರ್ತರಾಗಿ ಕೆಲಸ ಮಾಡಿದ ಗಣಪತಿಯವರು ವೃತ್ತಿಯ ಒಳ ಹೊರವುಗಳನ್ನು ಅರಿತುಕೊಂಡರು. ನಂತರ ತಾವೇ ಏಕೆ ಒಂದು ಪತ್ರಿಕೆಯನ್ನು ಪ್ರಾರಂಭಿಸಬಾರದು ಎಂಬ ಆಸೆ ಚಿಗುರೊಡೆಯಿತು. ಇದಕ್ಕನುಗುಣವಾಗಿ 1978ರ ಫೆಬ್ರವರಿ ತಿಂಗಳಲ್ಲಿ 'ಸ್ಟಾರ್ ಆಫ್ ಮೈಸೂರ್' ಆಂಗ್ಲ ಸಂಜೆ ದಿನ ಪತ್ರಿಕೆಯನ್ನು ಶುರು ಮಾಡುವ ಮೂಲಕ ಸಾಂಸ್ಕೃತಿಕ ನಗರಿ ಮೈಸೂರನ್ನು ತಮ್ಮ ಕರ್ಮ ಭೂಮಿಯನ್ನಾಗಿ ಮಾಡಿಕೊಂಡರು. ಅಂದು ಪ್ರಾರಂಭವಾದ 'ಸ್ಟಾರ್ ಆಫ್ ಮೈಸೂರ್' ದಿನಪತ್ರಿಕೆ ಇಂದಿಗೂ ಕೂಡ ಅತ್ಯಂತ ಹೆಚ್ಚು ಪ್ರಸಾರವುಳ್ಳ ಹಾಗೂ ವಿಶ್ವಾಸಾರ್ಹವಾದ ದಿನ ಪತ್ರಿಕೆಯಾಗಿ ಮುಂದುವರೆದಿದೆ. 1980ರ ಏಪ್ರಿಲ್ ತಿಂಗಳಲ್ಲಿ 'ಮೈಸೂರು ಮಿತ್ರ' ಕನ್ನಡ ಪ್ರಾದೇಶಿಕ ದಿನ ಪತ್ರಿಕೆಯನ್ನು ಹುಟ್ಟುಹಾಕಿದ ಡಾ.ಕೆ.ಬಿ.ಗಣಪತಿ, ಈ ಎರಡು ಪತ್ರಿಕೆಗಳನ್ನು ಜನಪ್ರಿಯಗೊಳಿಸು ವಲ್ಲಿ ಸಾಕಷ್ಟು ಶ್ರಮ ವಹಿಸಿದ್ದಾರೆ. ತುಂಬಾ ಶಿಸ್ತುಬದ್ಧ ವ್ಯಕ್ತಿಯಾದ ಗಣಪತಿಯವರು ಅಷ್ಟೇ ಹಾಸ್ಯ ಪ್ರಿಯರು ಕೂಡ ಹೌದು.

'ಸ್ಟಾರ್ ಆಫ್ ಮೈಸೂರ್' ಮತ್ತು ಮತ್ತು 'ಮೈಸೂರು ಮಿತ್ರ' ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದ ಅವರ ಅಂಕಣ ಬರಹಗಳು ಸಹಸ್ರಾರು ಓದುಗರನ್ನು ಮಂತ್ರ ಮುಗ್ಧಗೊಳಿಸುತ್ತಿದ್ದವು. ತಾವಾಯಿತು, ತಮ್ಮ ಕೆಲಸವಾಯಿತು ಎಂಬ ನಿಯಮಕ್ಕೆ ಬದ್ಧರಾಗಿದ್ದ ಡಾ.ಕೆ.ಬಿ.ಗಣಪತಿ ಓರ್ವ ಧ್ಯೇಯ ನಿಷ್ಠ ಹಾಗೂ ವೃತ್ತಿನಿಷ್ಠ ಸಂಪಾದಕ ರಾಗಿದ್ದರು. ಜಿಲ್ಲಾ ಪತ್ರಿಕೋದ್ಯಮಕ್ಕೆ ಹೊಸ ದಿಕ್ಕು ತೋರಿಸಿದ ಕೀರ್ತಿಯು ಅವರಿಗೆ ಸಲ್ಲುತ್ತದೆ. 'ಸ್ಟಾರ್ ಆಫ್ ಮೈಸೂರ್' ದಿನ ಪತ್ರಿಕೆಯಲ್ಲಿ ಕೆಲ ವರ್ಷಗಳ ಕಾಲ ಕೆಲಸ ಮಾಡುವ ಸುಯೋಗವೂ ನನ್ನದಾಗಿತ್ತು. ಅವರೊಂದು ಜ್ಞಾನ ಸಾಗರ (ocean of knowledge) ವಾಗಿದ್ದರು. ಡಾ.ಗಣಪತಿಯವರ ಬಗ್ಗೆ ಬರೆಯುವುದು ಸಾಕಷ್ಟಿದ್ದರೂ ಸಹ, ಸದ್ಯಕ್ಕೆ ಇಷ್ಟು ಮಾತ್ರ ಸಾಕು ಅನ್ನಿಸುತ್ತಿದೆ. ಅವರಿಗೆ ಗೌರವಪೂರ್ವಕ ಶ್ರದ್ಧಾಂಜಲಿ ಸಲ್ಲಿಸುತ್ತೇನೆ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

■ ಕೆ.ಬಿ.ಗಣಪತಿಯವರಿಗೆ ಶ್ರದ್ಧಾಂಜಲಿ

ಮಾನ್ಯರೆ,

13.7.25 ರ ಬೆಳಗ್ಗೆ ಸಾಮಾಜಿಕ ಜಾಲ ತಾಣಗಳಲ್ಲಿ ಮೈಸೂರಿನ ಹಿರಿಯ ಪತ್ರಕರ್ತರು, 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಯ ಸಂಸ್ಥಾಪಕರೂ ಆದ ಕೆ.ಬಿ.ಗಣಪತಿಯವರ ನಿಧನದ ಸುದ್ದಿ ತಿಳಿದು ಅಘಾತ ವಾಯಿತು. ಇತ್ತೀಚಿನವರೆಗೂ ಪತ್ರಿಕೆಯಲ್ಲಿ ರಾಜ್ಯದ ರಾಜಕೀಯ ವಿದ್ಯಮಾನಗಳ ಬಗ್ಗೆ ಅಂಕಣ ಬರೆಯುತ್ತಿದ್ದ ಗಣಪತಿಯವರ ಹಠಾತ್ ನಿಧನ ಓದುಗರಿಗೆ ನಿಜಕ್ಕೂ ಏನನ್ನೋ ಕಳೆದುಕೊಂಡಂತೆ ಬಾಸವಾಗುತ್ತಿದೆ. ಅಬ್ರಕಡಬ್ರ, ಭೂ ಮಂತ್ರ.. ಅಂಕಣಗಳು ಓದುಗರು ಕುತೂಹಲದಿಂದ ಓದುವಂತೆ ಮಾಡುತ್ತಿದ್ದವು. 'ಮೈಸೂರು ಮಿತ್ರ, 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಗಳು ಅವರಿಗೆ ಮೈಸೂರು ವಿಭಾಗದಲ್ಲಿ ಜನಪ್ರಿಯತೆ ತಂದು ಕೊಟ್ಟಿದ್ದವು. ಅನೇಕ ಸಾಮಾಜಿಕ ಕಾರ್ಯಗಳ ಮೂಲಕವು ಅವರು ಮೈಸೂರು ಕೊಡಗು ಅಷ್ಟೇ ಅಲ್ಲದೆ ಇತರ ಜಿಲ್ಲೆ ಗಳಲ್ಲೂ ಜನಪ್ರಿಯರಾಗಿದ್ದರು. ಅವರ ಆತ್ಮಕ್ಕೆ ಶಾಂತಿ ದೊರಕಲಿ. ಅವರ ಕುಟುಂಬಕ್ಕೆ ಅವರ ಅಗಲಿಕೆಯನ್ನು ಸಹಿಸಿಕೊಳ್ಳುವ ಶಕ್ತಿಯನ್ನು ದೇವರು ನೀಡಲಿ ಎಂದು ಪ್ರಾರ್ಥಿಸುತ್ತೇನೆ.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

■ ಕೆಬಿಜಿ ಅಗಲಿಕೆ ದುಃಖದ ಸಂಗತಿ

ಮಾನ್ಯರೆ,

ನಾನು ಅವರನ್ನು ನೋಡಿಲ್ಲ ಪರಿಚಯವೂ ಇಲ್ಲ. ಆದರೂ ಅವರ ಬರವಣಿಗೆಗೆ ಮಾರುಹೋದವ. ನನ್ನ ಮೆಚ್ಚಿನ ಕೊಡಗಿನ ಜನ. ಅವರ ಮೈಸೂರು ಮಿತ್ರಕ್ಕೆ ಅನೇಕ ವರ್ಷಗಳಿಂದ ಚಂದಾದಾರ. ಅವರ ನಿಧನಕ್ಕೆ ದುಃಖ ಪಟ್ಟವರಲ್ಲಿ ನಾನೂ ಒಬ್ಬ. ಅವರ ಅಗಲಿಕೆ ಪತ್ರಿಕಾ ರಂಗಕ್ಕೆ ತುಂಬಲಾರದ ನಷ್ಟ, ಅವರ ಆತ್ಮಕ್ಕೆ ಶಾಂತಿಸಿಗಲಿ.

–ಅಕ್ಕಿಹೆಬ್ಬಾಳು ವೆಂಕಟೇಶ್, ಮೈಸೂರು

■ ಕಲಾಲೋಕದ ಅಪರಂಜಿ!



ಅಸ್ತಂಗತವಾಯಿತು
ಬೆಳ್ಳಿತೆರೆಯ ಅಪ್ಪಟ ಬಂಗಾರ!
ಬಹುಭಾಷಾ ನಟಿಯಾದರೂ
ಕನ್ನಡ ಕಲಾಲೋಕದ ಅಪರಂಜಿ!
ಪುರಾಣ ಚರಿತ್ರೆಗಳು
ಮರುಜೀವ ಪಡೆಯುತ್ತಿದ್ದವು
ನಿಮ್ಮ ಅಭಿನಯ ವೈಭವದಲಿ!
ಬೆಳಗಿಸಿದಿರಿ
ಕನ್ನಡ ಕಲಾಲೋಕವನು
ನಿಮ್ಮ ಪ್ರತಿಭಾ ಹಣತೆಯಲಿ!
ಜಗಕೆ ಮಾದರಿ
ನಿಮ್ಮ ಕಲಾಪರಿಣತಿ ಸಿದ್ಧಿ!
ನೀವಾದಿರಿ ನಿಜದಲಿ
ಕಲಾ ತಪಸ್ವಿನಿ ಅಭಿನಯ ಸರಸ್ವತಿ!
ನಿಮಗಿದೋ ಪ್ರೀತಿಯ ನುಡಿನಮನ
ಬಿ.ಸರೋಜಾದೇವಿಯವರೇ!

–ಪ್ರೊ.ಸಿ.ಪಿ.ಸಿದ್ಧಾಶ್ರಮ, ನಿವೃತ್ತ ಪ್ರಾಧ್ಯಾಪಕರು, ಮೈಸೂರು ವಿವಿ



ನಿವೇದಿತ ಹೆಚ್.
ಇಂಗ್ಲಿಷ್ ಉಪನ್ಯಾಸಕಿ
ಯುವರಾಜ ಕಾಲೇಜು
ಮೈಸೂರು.

ಮಂಥನ

ವಿಕಾಸದಲ್ಲಿ ಯಾಕೋ ಎತ್ತಾಸ ಆಗ್ತಿದೆಯಲ್ಲಾ!

ಒಮ್ಮೆ ಸರಕು ಸಾಗಿಸುತ್ತಿದ್ದ ಹಡಗು ಏನೋ ದೋಷದಿಂದ ಕಡಲಲ್ಲಿ ಇದ್ದಕ್ಕಿದ್ದ ಹಾಗೆ ನಿಂತುಬಿಟ್ಟಿತು. ಹಡಗಿನಲ್ಲಿಯೇ ಇದ್ದ ತಾಂತ್ರಿಕ ವಿಭಾಗದವರು ಎಷ್ಟು ಪ್ರಯತ್ನಿಸಿದರೂ ಹಡಗು ಒಂದಿಂಚೂ ಸರಿಯಲಿಲ್ಲ. ಕಡೆಗೆ ಅನತಿ ದೂರದ ಊರಿನಲ್ಲಿ ಹಡಗಿನ ಬಗ್ಗೆ ಬಹಳ ತಿಳಿದವನಿದ್ದಾನೆ ಎಂದು ಹಡಗಿನ ನಾಯಕನಿಗೆ ತಿಳಿದು, ಅವನಿಗೆ ಕರೆ ಕಳಿಸುತ್ತಾನೆ. ಆತ ಬಂದು ಹಡಗನ್ನು ಕೂಲಂಕುಷವಾಗಿ ಪರೀಕ್ಷಿಸಿ, ಹಡಗಿನ ಒಂದು ಭಾಗಕ್ಕೆ ಸುತ್ತಿಗೆಯಿಂದ ಮೆಲುವಾಗಿ ಎರಡು ಏಟು ಕೊಡುತ್ತಾನೆ. ಏನಾಶ್ಚರ್ಯ! ಹಡಗು ಚಲಿಸತೊಡಗುತ್ತದೆ. ಸಂತೋಷಗೊಂಡ ಹಡಗಿನ ನಾಯಕ, ಆತನಿಗೆ ಕೊಡಬೇಕಾದ ಶುಲ್ಕದ ಬಗ್ಗೆ ವಿಚಾರಿಸುತ್ತಾನೆ. ಆತ ಯಾವ ಮುಲಾಜೂ ಇಲ್ಲದೆ, ಲಕ್ಷ ರೂಪಾಯಿಯನ್ನು ಕೇಳುತ್ತಾನೆ. ಆಗ ನಾಯಕ ಕೇವಲ ಆ ಎರಡು ಸುತ್ತಿಗೆ ಏಟಿಗೆ ಒಂದು ಲಕ್ಷ ರೂಪಾಯಿಯೇ ಎಂದು ಚೌಕಾಸಿ ಮಾಡುತ್ತಾನೆ. ಆಗ ಆ ತಂತ್ರಜ್ಞ, ಎರಡು ಏಟಿಗೆ ಒಂದು ಲಕ್ಷ ರೂಪಾಯಿಗಳಲ್ಲ. ಆ ಎರಡು ಏಟನ್ನು ಎಲ್ಲಿ ಕೊಡಬೇಕು ಎಂಬ ನಿರ್ಧಾರಕ್ಕೆ ಒಂದು ಲಕ್ಷ ರೂಪಾಯಿ ಎನ್ನುತ್ತಾನೆ. ಆಗ ಹಡಗಿನ ನಾಯಕ ಮರುಮಾತಿಲ್ಲದೆ ಅವನು ಕೇಳಿದಷ್ಟು ಹಣ ಕೊಟ್ಟು ಕಳಿಸುತ್ತಾನೆ.

ಈ ಕತೆ ಹೇಳಲು ಒಂದು ಕಾರಣವೂ ಇದೆ; ಇದೇ ಜುಲೈ 15 ವಿಶ್ವ ಯುವ ಕೌಶಲ್ಯ ದಿನ ಆಚರಿಸಿದ್ದೇವೆ. 2014ರಲ್ಲಿ ವಿಶ್ವಸಂಸ್ಥೆ ಯುವಜನರಲ್ಲಿ ಕೌಶಲ್ಯಾಭಿವೃದ್ಧಿಯಾಗಬೇಕು ಎಂಬ ಆಶಯದೊಂದಿಗೆ ಈ ದಿನವನ್ನು ಆಚರಿಸಲು ನಿರ್ಣಯಿಸಿತು. ಈ ವರ್ಷ 10ನೇ ವರ್ಷದ ಆಚರಣೆಯಾಗಿದ್ದು, ಎಐ ಮತ್ತು ಡಿಜಿಟಲ್ ಕ್ಷೇತ್ರದಲ್ಲಿ ಆಗುತ್ತಿರುವ ಕ್ಷಿಪ್ರ ಬೆಳವಣಿಗೆಯನ್ನು ಗಮನಿಸಿ, ಅದರ ಮೂಲಕ ಯುವಜನರ ಸಶಕ್ತೀಕರಣ ಆಗಬೇಕು ಎಂದು ಉದ್ದೇಶಿಸಿದೆ.

ಏನೇ ಶಿಕ್ಷಣ ಪಡೆದು ಡಿಗ್ರಿಗಳ ಸರಮಾಲೆ ಹಾಕಿಕೊಂಡರೂ, ಸರಿಯಾದ ಕೌಶಲ್ಯವಿಲ್ಲದಿದ್ದರೆ, ಎಲ್ಲಿಯೂ ಸಲ್ಲುವುದು ಸಾಧ್ಯವಾಗುವುದಿಲ್ಲ. ಹಾಗಾದ ಪಕ್ಷದಲ್ಲಿ ಯುವಜನರು ಏನನ್ನೂ ಸಾಧಿಸಲು ಸಾಧ್ಯವಾಗುವುದಿಲ್ಲ. ಇದನ್ನು ಅರಿತೇ, ನಮ್ಮ ಪ್ರಧಾನಮಂತ್ರಿ ಮೋದಿ ಅವರು, 2015ರಲ್ಲಿಯೇ Skill India ಅಭಿಯಾನವನ್ನು ಪ್ರಾರಂಭಿಸಿದರು. ಇದರ ಜೊತೆಗೆ, ಪ್ರಧಾನಮಂತ್ರಿ ಕೌಶಲ್ಯ ವಿಕಾಸ್ ಯೋಜನೆ, Indian Skill Development Service National Policy for Skill Development and Entrepreneurship Program, ಉದ್ಯೋಗಮಿತ್ರ ವಿಕಾಸ ಅಭಿಯಾನ ಯೋಜನೆಗಳು ಕೂಡ ಕೆಲಸ ಮಾಡತೊಡಗಿದ್ದಾವೆ. ಕರ್ನಾಟಕ ಸರ್ಕಾರವೂ ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ ಸ್ಥಾಪಿಸಿದೆ. ಈ ಎಲ್ಲ ಯೋಜನೆಗಳು, ಯುವಜನತೆಯಲ್ಲಿ ಕಾಲಕ್ಕೆ ತಕ್ಕಂತೆ ಬೇಕಾದ ಕೌಶಲ್ಯಗಳ ಅಭಿವೃದ್ಧಿಗೆ ಶ್ರಮಿಸುತ್ತಾ ಯುವಜನತೆಗೆ ಉತ್ತೇಜನ ನೀಡುತ್ತಿವೆ. ಹಲವು ಕ್ಷೇತ್ರಗಳಲ್ಲಿ ಸೂಕ್ತವಾದ ತರಬೇತಿ ನೀಡುವುದಷ್ಟೇ ಅಲ್ಲದೇ, ಕೌಶಲ್ಯ ಕಲಿತ ನಂತರ ಸಣ್ಣ ಪ್ರಮಾಣದಲ್ಲಿ ಉದ್ಯಮ ಆರಂಭಿಸಲು ಸಾಲವನ್ನು ನೀಡುತ್ತಿವೆ.

ಯುವಜನರಲ್ಲಿ ಕೌಶಲ ಇತ್ತೀಚೆಗೆ ಆತಂಕಕಾರಿ ಮಟ್ಟದಲ್ಲಿ ಕಡಿಮೆಯಾಗುತ್ತಿದೆ ಎಂದು ಹಲವಾರು ಅಧ್ಯಯನಗಳು ಹೇಳುತ್ತಿವೆ. ಒಂದು ಲೆಕ್ಕಾಚಾರದ ಪ್ರಕಾರ, ಇಡೀ ಪ್ರಪಂಚದಲ್ಲಿ 8.52 ಕೋಟಿಗೂ ಹೆಚ್ಚು ವಿವಿಧ ಕೌಶಲಗಳುಳ್ಳ ಕೆಲಸಗಾರರು ಬೇಕಾಗಿದ್ದಾರೆ. ಭಾರತದಲ್ಲಿಯೇ ನಡೆದ ಅಧ್ಯಯನಗಳನ್ನು ಗಮನಿಸಿದರೆ, 10.3 ಕೋಟಿ ಕುಶಲಕರ್ಮಿಗಳಿಗೆ ಬೇಡಿಕೆ ಇದೆ. ಆದರೆ ಲಭ್ಯವಿರುವ ಕುಶಲಕರ್ಮಿಗಳು ಕೇವಲ 7 ಕೋಟಿ. ಅತೀ ಹೆಚ್ಚು ಕುಶಲಕರ್ಮಿಗಳನ್ನು ಬೇಡುವ ಕಟ್ಟಡ ನಿರ್ಮಾಣ ಕ್ಷೇತ್ರ 80% ಕುಶಲಕರ್ಮಿಗಳ ಅಭಾವವನ್ನು ಎದುರಿಸುತ್ತಿದೆ. 76% ಇತರ ಕಾರ್ಯ ಕ್ಷೇತ್ರಗಳು ಕುಶಲಕರ್ಮಿಗಳಿಗಾಗಿ ಪರದಾಡುತ್ತಿವೆ. 28% ಸಂಘಟನೆಗಳು ಕುಶಲಕರ್ಮಿಗಳ ಅಭಾವದಿಂದ, ಉತ್ಪಾದನೆಯಲ್ಲಿ ಹಿನ್ನಡೆ ಮತ್ತು ವಿಳಂಬವನ್ನು ಅನುಭವಿಸುತ್ತಿವೆ. ಅಲ್ಲಿಗೆ ನಿಮಗೆ, ಕುಶಲಕರ್ಮಿಗಳ, ಕೌಶಲ್ಯದ ಮಹತ್ವ ಎಷ್ಟೆಂದು ಅರಿವಾಗಿರುತ್ತದೆ ಎಂದುಕೊಳ್ಳುತ್ತೇನೆ.

ಭಾರತದಲ್ಲಿ 10% ಜನರಿಗೆ ಮಾತ್ರ ಕೌಶಲ್ಯ ತರಬೇತಿಯನ್ನು ನೀಡಲಾಗುತ್ತಿದೆ. ಜರ್ಮನಿ, ಜಪಾನ್, ದಕ್ಷಿಣ ಕೊರಿಯಾ ದೇಶಗಳಿಗೆ ಹೋಲಿಸಿದರೆ ಇದು ಏನೇನೂ ಅಲ್ಲ. ಭಾರತದಂತಹ ಶೀಘ್ರವಾಗಿ ಅಭಿವೃದ್ಧಿಯೆಡೆಗೆ ದಾಪುಗಾಲು ಹಾಕುತ್ತಿರುವ ದೇಶದಲ್ಲಿ ಮುಂಬರುವ ದಿನಗಳಲ್ಲಿ 12ಕೋಟಿಗೂ ಹೆಚ್ಚು ಕುಶಲಕರ್ಮಿಗಳ ಅವಶ್ಯಕತೆ ವಿವಿಧ ಕ್ಷೇತ್ರಗಳಲ್ಲಿ ಹೆಚ್ಚಲಿದೆ. ಅದಕ್ಕೆ ದೇಶ ಸಜ್ಜಾಗಬೇಕಿದೆ. ವಿದೇಶಗಳಲ್ಲಿಯೂ ಬೇಡಿಕೆ ಹೀಗೆಯೇ ಹೆಚ್ಚಳವಾಗುವ ಎಲ್ಲ ಲಕ್ಷಣಗಳೂ ಇರುವುದರಿಂದ, ಅತ್ಯಂತ ಹೆಚ್ಚಿನ ಮಾನವ ಸಂಪನ್ಮೂಲ ಹೊಂದಿರುವ ಭಾರತದ ಕೆಲಸಗಾರರು, ದೇಶದಲ್ಲಿ ಮಾತ್ರವಲ್ಲ ವಿದೇಶಗಳಲ್ಲಿ ಉದ್ಭವವಾಗುವ ಬೇಡಿಕೆಗೂ ಸಜ್ಜಾಗಬೇಕಿದೆ.

ಬೇರೆ ದೇಶಗಳಿಗೆ ಹೋಲಿಸಿದರೆ, ಭಾರತದಲ್ಲಿ ಮನೆಮನೆಗಳಲ್ಲಿಯೂ ಕುಶಲಕರ್ಮಿಗಳಿದ್ದರು. ಅಷ್ಟಕ್ಕೂ ಕುಶಲಕರ್ಮಿಗಳು ಎಂದರೆ ಯಾರು ಕುಶಲತೆ ಎಂದರೆ ಏನು ಎಂಬ ಪ್ರಶ್ನೆ ಕೇಳಿಕೊಂಡರೆ, ಒಂದು ನಿರ್ದಿಷ್ಟ ಕೆಲಸದಲ್ಲಿ ಪರಿಣತಿ ಹೊಂದಿದವರು ಕುಶಲಕರ್ಮಿಗಳು ಎಂದು ತಿಳಿಯುತ್ತದೆ.

ವರ್ಣಾಶ್ರಮದಲ್ಲಿ ನಂಬಿಕೆಯಿಟ್ಟಿದ್ದ ಭಾರತದಲ್ಲಿ ಒಂದೊಂದು ಕೆಲಸವೂ ಒಂದೊಂದು ವರ್ಗಗಳ ಜನರಿಗೆ ಹಂಚಿಹೋಗಿತ್ತು ತಲತಲಾಂತರಗಳಿಂದ ರೂಢಿಸಿಕೊಂಡು ಬಂದ ಕೆಲಸವನ್ನು ಆಸ್ಥೆಯಿಂದ ಕಲಿಯುತ್ತಿದ್ದ ಅಂದಂದಿನ ಯುವಪೀಳಿಗೆ, ತನ್ನ ಪೀಳಿಗೆಯ ಅವಶ್ಯಕತೆಗನುಸಾರವಾಗಿ ತನ್ನ ಕ್ಷೇತ್ರದಲ್ಲಿ ಬೇಕಾದ ಬದಲಾವಣೆ, ಸುಧಾರಣೆಯನ್ನು ಮಾಡಿಕೊಳ್ಳುತ್ತಿತ್ತು. ಹಾಗಾಗಿ ಕುಶಲತೆ ಎನ್ನುವುದು ದಿನೇದಿನೆ ಬದಲಾವಣೆ ಸುಧಾರಣೆಗೆ ಒಳಪಟ್ಟು ತನ್ನ ಅತ್ಯುನ್ನತ ಸ್ತರದಲ್ಲಿ ಪರಿಷ್ಕರಣೆಗೆ ಒಳಪಡುತ್ತಿತ್ತು.



> “ನಾವು ಮಾನವರು ಕೌಶಲಗಳ ವಿಷಯದಲ್ಲಿ ಇಷ್ಟರಲ್ಲಿಯೇ ಆ ಭೀತಿಯನ್ನು ಎದುರಿಸಲು ಸಿದ್ಧರಾಗಬೇಕಿದೆ. ಪಾರಂಪರಿಕ ಜ್ಞಾನ ವರ್ಗಾಯಿಸಲ್ಪಡದಿದ್ದರೆ ಅದು ನಾಶವಾಗುತ್ತದೆ. ಆದರೂ ಸೃಷ್ಟಿಯ ಅತ್ಯುತ್ಕೃಷ್ಟ ಜೀವಿಗಳು ನಾವೇ! ನಾವೇ ಹುಟ್ಟು ಹಾಕಿದ ಸಮಸ್ಯೆಗೆ ನಾವೇ ಪರಿಹಾರ ಕಂಡುಕೊಳ್ಳಬೇಕಷ್ಟೇ.

ಮಾನವ ಶಿಲಾಯುಗದಿಂದಲೂ ಒಂದಿಲ್ಲೊಂದು ರಚನೆ, ನಿರ್ಮಾಣಗಳಲ್ಲಿ ತೊಡಗಿದ್ದಾನೆ. ಅಂದಿನ ಆ ರಚನೆ ನಿರ್ಮಾಣಗಳಿಗೂ ನಂತರದ ರಚನೆ ನಿರ್ಮಾಣಗಳಿಗೂ ನೀವು ವ್ಯತ್ಯಾಸ ಗಮನಿಸಿ. ಎಷ್ಟರಮಟ್ಟಿಗಿನ ಸುಧಾರಣೆ ಉತ್ಕೃಷ್ಟತೆಯನ್ನು ನಾವು ಸಾಧಿಸಿದ್ದೇವೆ ಎನ್ನುವ ಅಂದಾಜು ಆಗುತ್ತದೆ. ಈ ನಿಟ್ಟಿನಲ್ಲಿ ಭಾರತದಲ್ಲಿ ನಾವು, ಅತ್ಯುತ್ತಮ ಕುಶಲತೆಯ ವಸ್ತುಗಳನ್ನು, ಕೆತ್ತನೆ, ತಾಂತ್ರಿಕತೆ, ನಿರ್ಮಾಣವನ್ನು ನೋಡಿದ್ದೇವೆ.

ಇದಲ್ಲದೆ ದೈನಂದಿನ ಜೀವನದಲ್ಲಿ, ಕೃಷಿಯಲ್ಲಿ, ತೋಟಗಾರಿಕೆಯಲ್ಲಿ, ಅಡುಗೆಮನೆಯಲ್ಲಿ ನಮ್ಮ ಕುಶಲತೆಯಿಂದ ಎಲ್ಲವನ್ನೂ ಅಂದವಾಗಿಸಿ ಚಂದವಾಗಿಸಿ ಆನಂದದಿಂದ ಆರೋಗ್ಯದಿಂದ ಇದ್ದೆವು. ಆದರೆ ತಾಂತ್ರಿಕವಾಗಿ ಯಾವಾಗ ನಾವು ಅಭಿವೃದ್ಧಿ ಸಾಧಿಸಲು ಪ್ರಾರಂಭಿಸಿದೆವೋ, ನಮ್ಮ ಕುಶಲತೆಗಳೆಲ್ಲಾ ಒಂದೊಂದಾಗಿ ಹಿಂಸರಿಯಲು ಆರಂಭಿಸಿದವು.

ಕಾಲದ ಜೊತೆ ನಾವು ಅಡಿಯಿಡಬೇಕು ಎಂಬುದೇನೋ ನಿಜ. ಆದರೆ ಕಾಲದ ಜೊತೆಗೆ ಓಡುತ್ತಾ ದೇವರು ನಮಗೆ ವರವಾಗಿ ಕೊಟ್ಟಿರುವ ಕೌಶಲ್ಯವನ್ನು ಕಳೆದುಕೊಳ್ಳುತ್ತಿರುವುದು ವಿಷಾದನೀಯ.

ಈಗ ಕೌಶಲ್ಯವಿಲ್ಲವೆಂದಲ್ಲ. ಆದರೆ ನಾವು ಸಾಧಿಸುತ್ತಿದ್ದ ಕೌಶಲ್ಯಗಳಲ್ಲಿ ಇದ್ದ ವೈವಿಧ್ಯತೆ ಈಗ ಇಲ್ಲದಾಗಿದೆ. ಬಹುತೇಕರು ಕೆಲವೇ ಕೆಲವು ವೃತ್ತಿಗಳಲ್ಲಿ ಅತೀ ಆಸ್ಥೆ ವಹಿಸುತ್ತಿರುವುದರಿಂದ, ಬೇರೆ ಕ್ಷೇತ್ರಗಳಿಗೆ ಕಾಟಾಚಾರಕ್ಕೆ ಕಾಲಿಟ್ಟು, ಕೇವಲ ಜೀವನೋಪಾಯಕ್ಕೆ ಯಾಂತ್ರಿಕವಾಗಿ ಕೆಲಸ ಮಾಡುವವರು ಹೆಚ್ಚಾಗುತ್ತಿದ್ದಾರೆ. ಆದ್ದರಿಂದ ಕುಶಲತೆ–ಕೌಶಲ್ಯವೆಂಬ ವಿಶೇಷ ಗುಣ ಇಂದು ಕಾಣೆಯಾಗುತ್ತಿದೆ.

ಈಗ ವರ್ಣಾಶ್ರಮದ ಕಟ್ಟುಪಾಡುಗಳಿಲ್ಲದೇ ಇರುವುದರಿಂದ, ಪಾರಂಪರಿಕವಾಗಿ ನಡೆಸಿಕೊಂಡು ಬಂದ ಕುಲಕಸುಬನ್ನು ಬಿಟ್ಟು, ಹೆಚ್ಚು ದುಡ್ಡು ದುಡಿಯಬಹುದಾದ ಕ್ಷೇತ್ರಗಳಿಗೆ ಉದ್ಯೋಗ ಬಯಸಿ ವೃತ್ತಿವಲಸೆ ಹೋಗುತ್ತಿರುವುದರಿಂದ, ವಂಶವಾಹಿನಿಯಲ್ಲಿ ಹರಿದುಬಂದ ಕುಶಲತೆ ಕಾಲಾಂತರದಲ್ಲಿ ನಶಿಸಿಹೋಗುತ್ತಿದೆ. ಇಂದು ಹೇಳಿಕೊಳ್ಳಲು ಆಕರ್ಷಣೀಯ ಹುದ್ದೆಯ ಹೆಸರು ಬೇಕಾಗಿದೆ. ಇಲ್ಲಿ ನಾನು ವರ್ಣಾಶ್ರಮದ ಪರವೋ, ವಿರುದ್ಧವೋ ಮಾತನಾಡುತ್ತಿಲ್ಲ. ಕೌಶಲ್ಯ ನಶಿಸುತ್ತಿರುವುದಕ್ಕೆ ಕಾರಣ ಹುಡುಕುವ ಪ್ರಯತ್ನವನ್ನಷ್ಟೇ ಮಾಡುತ್ತಿದ್ದೇನೆ.

ರೈತನ ಮಗ ರೈತನಾಗುತ್ತಿಲ್ಲವಾದ್ದರಿಂದ, ಪ್ರಾಕೃತಿಕ, ಸುರಕ್ಷಿತ ಸಮೃದ್ಧ ಕೃಷಿ ನಡೆಸುತ್ತಿದ್ದ ತನ್ನ ಅಪ್ಪ ಮತ್ತು ತಾತಂದಿರ ಜ್ಞಾನ ವ್ಯರ್ಥವಾಗುತ್ತಿದೆ. ಕೃಷಿಯನ್ನು ಒಂದು ಉದ್ಯಮ ಎಂದು ಬಗೆದು ಅಲ್ಲಿ ಪ್ರವೇಶಿಸುವವರಿಗೆ, ಕಳೆನಿಯಂತ್ರಣ, ಸಮೃದ್ಧ ಫಸಲು, ಕೀಟಬಾಧೆ ವಿಷಯಗಳ ಬಗ್ಗೆ ಪುಸ್ತಕ ಜ್ಞಾನ ಮಾತ್ರವಿದ್ದು, ನಿರಪಾಯಕಾರಿ ಸಾಂಪ್ರದಾಯಿಕ ಕೃಷಿ ವಿಧಾನ ಮರೆಯಾಗಿ ರಾಸಾಯನಿಕಗಳ ಕೈಮೇಲಾಗಿ ನಾವು ವಿಷದ ಅಂಶವನ್ನು ನಿಸ್ಸಹಾಯಕರಾಗಿ ಸೇವಿಸುವಂತಾಗಿದೆ. ಇದು ಒಂದು ಉದಾಹರಣೆಯಷ್ಟೇ.

ಹಿಂದೆ ಮೋಡಗಳ ಚಲನೆ, ಗಾಳಿಯ ರಭಸಗಳನ್ನು ನೋಡಿ ಮಳೆಯ ಮುನ್ಸೂಚನೆಯನ್ನು ತಿಳಿಯುತ್ತಿದ್ದರು. ಅದಕ್ಕಾಗಿ ಯಂತ್ರಗಳು ಬಂದ ಮೇಲೆ ಆ ಕುಶಲತೆಯೇ ಮರೆಯಾಯಿತು. ಮರದ ಮೇಲಿನ ಕಾಯಿಗಳು, ಗಿಡದ ಮೇಲಿನ ಮೊಗ್ಗುಗಳನ್ನು ನೋಡಿ ಅವು ಹಣ್ಣಾಗುವ ಹೂವಾಗುವ ಸಮಯವನ್ನು ನಿಗದಿತವಾಗಿ ಹೇಳುತ್ತಿದ್ದರು! ಮಣ್ಣಿನ ನುಣುಪು ಗಡುಸುತನ ನೋಡಿ ಬೆಳೆಯಬೇಕಾದ ಬೆಳೆ ನಿರ್ಧರಿಸುತ್ತಿದ್ದರು. ಮಕ್ಕಳ ಕಣ್ಣು ಚರ್ಮ ಉಸಿರಾಡುವ ಲಯ ನೋಡಿ ಆರೋಗ್ಯ ನಿರ್ಣಯ ಮಾಡುತ್ತಿದ್ದರು. ಮನೆಯ ಹೆಂಗಸರೂ ಸೇರಿದಂತೆ ಮಕ್ಕಳಾದಿಯಾಗಿ ಎಲ್ಲರಿಗೂ ತಮ್ಮ ಸುತ್ತಲ ಪರಿಸರದಲ್ಲಿ ದೊರೆಯುವ ಉಪಯುಕ್ತ ಗೆಡ್ಡೆ ಗೆಣಸು ಕಂದಮೂಲ ಔಷಧೀಯ ಸಸ್ಯಗಳ ಅರಿವಿರುತ್ತಿತ್ತು. ಮನೆಯಲ್ಲಿಯೇ ಅಡುಗೆಗೆ, ದೇವರ ದೀಪಕ್ಕೆ, ತಲೆಗೆ ಹಚ್ಚಲು ಬೇಕಾದ ಎಣ್ಣೆಗಳನ್ನು ತಯಾರಿಸಿಕೊಳ್ಳುತ್ತಿದ್ದರು. ಅವಲಕ್ಕಿ–ಮಂಡಕ್ಕಿಗಳನ್ನೂ ಮನೆಯಲ್ಲಿಯೇ ತಯಾರಿಸುತ್ತಿದ್ದರು. ಇನ್ನು ಕಾಡಿನ ಮಕ್ಕಳ ಜ್ಞಾನ ಬೆರಗು ಹುಟ್ಟಿಸುವಂಥದ್ದು. ಕಾಡಿನ ಪ್ರತಿ ಹುಲ್ಲು ಗಿಡ ಹೂ ಹಣ್ಣು ಕೀಟ ಔಷಧೀಯ ಸಸ್ಯಗಳು ಪ್ರಾಣಿಗಳ ಆಮೂಲಾಗ್ರ ಪರಿಚಯವಿದ್ದ ಅವರನ್ನು ಕಾಡಿನಿಂದ ಒಕ್ಕಲೆಬ್ಬಿಸಿ ಎಡಬಿಡಂಗಿಗಳನ್ನಾಗಿಸಿ ಅವರ ಜ್ಞಾನ ಕೌಶಲ್ಯಗಳನ್ನೂ ನಾಶ ಮಾಡಿದೆವು.

ಎಲ್ಲದ್ದಕ್ಕೂ ಯಂತ್ರಗಳು ಗ್ಯಾಡ್ಜೆಟ್‌ಗಳ ಬಳಕೆಯಿಂದಾಗಿ ನಮ್ಮ ಹೆಚ್ಚಿನ ಅಂಗಾಂಗಗಳಿಗೆ ಕೆಲಸ ಇಲ್ಲದ ಹಾಗೆ ಆಗಿಹೋಯಿತು. ಯಂತ್ರಗಳು ಬಂದವೆಂದು ಇವೆಲ್ಲವನ್ನು ಅದರ ತೆಕ್ಕೆಗೆ ಹಾಕಿ ಸೋಮಾರಿತನ ಮೈಗೂಡಿಸಿಕೊಂಡೆವು. ಇಂದು ಇವೇ ಎಲ್ಲ ಕೆಲಸಗಳಿಗೆ ಮತ್ತೆ ಕುಶಲಕರ್ಮಿಗಳನ್ನು ತಯಾರು ಮಾಡಲಾಗುತ್ತಿದೆ ಎಂಬುದು ವಿಪರ್ಯಾಸ!

ಈಗ?!

ಶಿಲ್ಪಿಯ ಮಗ ಶಿಲ್ಪಿಯಾಗುತ್ತಿಲ್ಲ, ಕುಂಬಾರನ ಮಗ ಕುಂಬಾರನಾಗುತ್ತಿಲ್ಲ, ಸಂಗೀತಗಾರನ ಮಗ ಸಂಗೀತಗಾರನಾಗುತ್ತಿಲ್ಲ, ವ್ಯಾಪಾರಿಯ ಮಗ ವ್ಯಾಪಾರಿಯಾಗುತ್ತಿಲ್ಲ, ನೇಕಾರನ ಮಗ ನೇಕಾರನಾಗುತ್ತಿಲ್ಲ ಇಂದು ಎಲ್ಲವನ್ನೂ ವಿಶ್ವವಿದ್ಯಾನಿಲಯವೇ ಕಲಿಸುವಂತಾಗಿ, ಕೌಶಲ್ಯವನ್ನು ಸಾಧಿಸುವುದು ಕಷ್ಟವೆನಿಸುತ್ತಿದೆ. ಮೇಲಾಗಿ ಎಲ್ಲದಕ್ಕೂ ಕೋರ್ಸುಗಳಿವೆ. ಎಲ್ಲದ್ದಕ್ಕೂ ಡಿಗ್ರೀ ಡಿಪ್ಲೋಮಾಗಳಿವೆ, ಆದರೂ ಕುಶಲಕರ್ಮಿಗಳು ಸಿಗುತ್ತಿಲ್ಲ. ಮನೆಯಲ್ಲಿ ಕೆಟ್ಟುಹೋದ ಬಲ್ಬ್, ನಲ್ಲಿ, ಬಾಗಿಲು, ಕಿಟಕಿ ಸರಿಮಾಡಲೂ ನಮಗೆ ಆಸಕ್ತಿಯಿಲ್ಲ.

ನಮ್ಮ ಈ ಆಸಕ್ತಿಹೀನತೆಯನ್ನು ಬಂಡವಾಳ ಮಾಡಿಕೊಂಡು, ಅರ್ಬನ್ ಕ್ಲಾಪ್‌ನಂತಹ ಸೇವೆ ಒದಗಿಸುವ ಕಂಪನಿಗಳು ನೂರಾರು ಕೋಟಿಗಳ ವ್ಯವಹಾರ ನಡೆಸುತ್ತಿವೆ. ಅಲ್ಲಿ ನಿಮಗೆ ರಿಪೇರಿ ಕೆಲಸಗಳಿರಲಿ, ಮನೆ ಸ್ವಚ್ಛಗೊಳಿಸಲೂ ಕುಶಲಕರ್ಮಿಗಳು ಸಿಗುತ್ತಾರೆ! ಇನ್ನು ಅನ್ನ ಮುದ್ದೆ ದೋಸೆ ಮಾಡಲು ಬರದ ಹೊಸ ಪೀಳಿಗೆ ಕೇಟರಿಂಗ್ ಉದ್ಯಮಕ್ಕೆ ಅಡಿಪಾಯ ಹಾಕಿದೆ!

ಕ್ಯಾಲ್ಕುಲೇಟರ್‌ನಿಂದ ಪ್ರಾರಂಭವಾದ ನಮ್ಮ ಯಂತ್ರದಾಸ್ಯ ಇಂದು ಎಐವರೆಗೂ ಬಂದು ನಿಂತಿದೆ. ಕುಶಲತೆಗಳನ್ನು ರೂಢಿಸಿಕೊಳ್ಳುವ ಅವಕಾಶಗಳನ್ನೇ ಕೊಡದ ಪೆಡಂಭೂತದಂತೆ!

ತೀರಾ ಬರವಣಿಗೆಯಂತಹ ಸೃಜನಶೀಲ ಕೆಲಸಕ್ಕೂ ಚಾಟ್ ಜಿಪಿಟಿ ಮತ್ತು ಎಐಗಳನ್ನು ಬಳಸುವ ಚಟಕ್ಕೆ ಈಗಾಗಲೇ ಶಿಕ್ಷಕರೂ ಸೇರಿದಂತೆ ವಿದ್ಯಾರ್ಥಿಗಳೂ ಬಿದ್ದಿರುವುದು ಅತ್ಯಂತ ಆತಂಕಕಾರಿ. ಒಂದು ರಜಾಚೀಟಿ ಬರೆಯಲೂ ಚಾಟ್ ಜಿಪಿಟಿಯ ನೆರವು ಪಡೆಯುವವರನ್ನು ನಾನೇ ನೋಡಿದ್ದೇನೆ. ಇತ್ತೀಚೆಗೆ ಕನ್ನಡದ ಪ್ರಸಿದ್ಧ ಮಾಸ ಪತ್ರಿಕೆ ಕಸ್ತೂರಿ, ಚಾಟ್ ಜಿಪಿಟಿ ಮತ್ತು ಏಐಗಳ ನೆರವಿನಿಂದ ಸಿದ್ಧಪಡಿಸಲಾದ ಲೇಖನಗಳನ್ನು ತಾನು ಸ್ವೀಕರಿಸುವುದಿಲ್ಲ ಎಂದು ಒಂದು ಪ್ರಕಟಣೆಯನ್ನೇ ನೀಡಿತ್ತು. ಈಗ ಅದೇ ಚಾಟ್ ಜಿಪಿಟಿ ಮತ್ತು ಎಐಗಳ ಬಳಕೆಯ ಮೂಲಕ, ಯುವ ಜನರಲ್ಲಿ ಕೌಶಲ್ಯಾಭಿವೃದ್ಧಿ ಎಂಬ ಧ್ಯೇಯವನ್ನು ವಿಶ್ವಸಂಸ್ಥೆ ಈ ಬಾರಿಯ ವಿಶ್ವ ಯುವ ಕೌಶಲ ದಿನಕ್ಕೆ ಇಟ್ಟುಕೊಂಡಿದೆ! ಈ ವೈರುಧ್ಯಕ್ಕೆ ಏನೆನ್ನೋಣ.

ಆ ಕಾಲ ಒಂದಿತ್ತು ಎಂದು ಮರುಗುವುದರಲ್ಲಿ ಏನೂ ಅರ್ಥವಿಲ್ಲ ಎಂಬುದು ನಿಜವೇ. ಆದರೆ ಮನುಷ್ಯನನ್ನು Thinking Animal ಆಗಿ ಇರಲು ಬಿಡದಿರುವ ಈ ಅಭಿವೃದ್ಧಿ ಗೊಂದಲಮಯ. ಇವೆಲ್ಲವನ್ನೂ ಸಿದ್ಧಪಡಿಸಿದ್ದು ಮಾನವನೇ ಅಲ್ಲವೇ ಎಂದು ನೀವು ಕೇಳಬಹುದು. ಹೌದು, ಮಾನವನೇ! ಆದರೆ ಕೆನೆಪದರದವರು. ಈ ಎಲ್ಲ ತಂತ್ರಜ್ಞಾನಗಳನ್ನು ಕೇವಲ ಬಳಸುವ ನಮ್ಮ ನಿಮ್ಮಂತಹ ಮಾಮೂಲಿ ಮನುಷ್ಯರ ಜೀವನ ಎಷ್ಟು ಫಲವತ್ತು ಎಂಬುದನ್ನು ಯೋಚಿಸಿದರೆ ಗಾಬರಿಯಾಗುತ್ತದೆ. ಅತಿಯಾದ ಈ ತಂತ್ರಜ್ಞಾನದ ಅಭಿವೃದ್ಧಿ ಕೌಶಲ್ಯವನ್ನು ಕೊಲ್ಲುತ್ತಿದೆ, ಕೌಶಲ್ಯ ಇಲ್ಲದಿರುವಿಕೆ ಯುವ ಜನತೆಯನ್ನು ನಿರುದ್ಯೋಗಿಗಳನ್ನಾಗಿಸುತ್ತಿದೆ; ಅಲ್ಲಿಗೆ ನಿರುದ್ಯೋಗಕ್ಕೆ ತಂತ್ರಜ್ಞಾನ ಕಾರಣ! ತಂತ್ರಜ್ಞಾನ ತಿಳಿದಿಲ್ಲದಿದ್ದರೆ ಉದ್ಯೋಗವಿಲ್ಲ! ಅಬ್ಬಾ!!! ವಿಷವರ್ತುಲ ಎನ್ನಿಸುತ್ತಿದೆ ಅಲ್ಲವೇ?

ಡಾರ್ವಿನ್ ತನ್ನ ಸಿದ್ಧಾಂತದಲ್ಲಿ ಹೇಳುತ್ತಾನೆ, ಹೆಚ್ಚು ಬಳಕೆಗೆ ಒಳಪಡದ ಅಂಗಗಳು ಕಾಲಾಂತರದಲ್ಲಿ ಕಾಣೆಯಾಗುತ್ತವೆ ಮತ್ತು ಮುಂದಿನ ಪೀಳಿಗೆಗೆ ಅವು ಇಲ್ಲವಾಗುತ್ತವೆ ಎಂದು. ಇಂದು ನಾವು ಮಾನವರು ಕೌಶಲಗಳ ವಿಷಯದಲ್ಲಿ ಇಷ್ಟರಲ್ಲಿಯೇ ಆ ಭೀತಿಯನ್ನು ಎದುರಿಸಲು ಸಿದ್ಧರಾಗಬೇಕಿದೆ. ಪಾರಂಪರಿಕ ಜ್ಞಾನ ವರ್ಗಾಯಿಸಲ್ಪಡದಿದ್ದರೆ ಅದು ನಾಶವಾಗುತ್ತದೆ. ಆದರೂ ಸೃಷ್ಟಿಯ ಅತ್ಯುತ್ಕೃಷ್ಟ ಜೀವಿಗಳು ನಾವೇ! ನಾವೇ ಹುಟ್ಟು ಹಾಕಿದ ಸಮಸ್ಯೆಗೆ ನಾವೇ ಪರಿಹಾರ ಕಂಡುಕೊಳ್ಳಬೇಕಷ್ಟೇ.

ಚಿತ್ರಮಂದಿರಗಳಲ್ಲಿ ಟಿಕೆಟ್ ದರ 200 ರೂ. ನಿಗದಿ

ಸಿಂಗಲ್ ಸ್ಕ್ರೀನ್ ಚಿತ್ರಮಂದಿರ ಮಾಲೀಕರ ಸ್ವಾಗತ; ಮಲ್ಟಿಪ್ಲೆಕ್ಸ್ ಮಾಲೀಕರಿಂದ ಆಕ್ಷೇಪಣೆ ಸಲ್ಲಿಸಲು ನಿರ್ಧಾರ

ಮೈಸೂರು, ಜು.16(ಎಂಟಿವೈ)–ಮಲ್ಟಿಪ್ಲೆಕ್ಸ್ ಚಿತ್ರ ಮಂದಿರಗಳಲ್ಲಿ 200 ರೂ. ದರ ನಿಗದಿ ಮಾಡಿರುವ ರಾಜ್ಯ ಸರ್ಕಾರದ ನಿರ್ಧಾರವನ್ನು ಸಿಂಗಲ್ ಸ್ಕ್ರೀನ್ ಚಲನಚಿತ್ರ ಮಂದಿರಗಳ ಮಾಲೀಕರು ಸ್ವಾಗತಿಸಿದ್ದರೆ, ಮಲ್ಟಿಪ್ಲೆಕ್ಸ್ ಚಿತ್ರಮಂದಿರಗಳ ಮಾಲೀಕರು ಆಕ್ಷೇಪಣೆ ಸಲ್ಲಿಸಲು ನಿರ್ಧರಿಸಿದ್ದಾರೆ.

ರಾಜ್ಯ ಸರ್ಕಾರ ಚಿತ್ರಮಂದಿರಗಳಿಗೆ ಏಕರೂಪದ ದರ ನಿಗದಿ ಮಾಡಿರುವ ಆದೇಶ ಹೊರಡಿಸಿದ್ದು, ಕನ್ನಡ ಸೇರಿದಂತೆ ಯಾವುದೇ ಭಾಷೆಯ ಚಿತ್ರಗಳ ವೀಕ್ಷಣೆಗೆ 200 ರೂ.ಗಿಂತ ಹೆಚ್ಚಿನ ದರ ಪಡೆಯದಂತೆ ಆದೇಶಿಸಿರುವುದಕ್ಕೆ ಪರ ಮತ್ತು ವಿರೋಧದ ಚರ್ಚೆ ಆರಂಭವಾಗಿದೆ.

ಕನ್ನಡ ಚಲನಚಿತ್ರ ರಂಗದ ಉಳಿವಿಗೆ ನೆರವು: ಸಿಂಗಲ್ ಸ್ಕ್ರೀನ್ ಚಲನಚಿತ್ರ ಮಂದಿರಗಳ ಮಾಲೀಕರ ಸಂಘದ ಅಧ್ಯಕ್ಷ ಎಂ.ಆರ್.ರಾಜಾರಾಮ್ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಕರ್ನಾಟಕ ಸರ್ಕಾರ 200 ರೂ.ಗಿಂತ ಹೆಚ್ಚು ಟಿಕೆಟ್ ದರ ನಿಗಧಿ ಮಾಡದಂತೆ ಆದೇಶ ಹೊರಡಿಸಿರುವುದು ಕನ್ನಡ ಚಲನ ಚಿತ್ರ ಕ್ಷೇತ್ರಕ್ಕೆ ಒಳ್ಳೆಯ ಬೆಳವಣಿಗೆಯಾಗಿದೆ. 'ಪಾನ್ ಇಂಡಿಯಾ' ಹೆಸರಿನಲ್ಲಿ ಆಗುತ್ತಿದ್ದ ಬೆಳವಣಿಗೆಗಳು ಕನ್ನಡ ಚಿತ್ರರಂಗಕ್ಕೆ ಧಕ್ಕೆಯುಂಟು ಮಾಡುತ್ತಿದ್ದವು. ಕೆಲವು ನಟ–ನಟಿಯರು ಪಾನ್ ಇಂಡಿಯಾದ ಹಿಂದೆ ಬಿದ್ದಿದ್ದರು. ಇದರಿಂದ ಕನ್ನಡ ಚಲನಚಿತ್ರ ರಂಗಕ್ಕೆ ತೊಂದರೆಯಾಗುತ್ತಿತ್ತು. ಪಾನ್ ಇಂಡಿಯಾದಿಂದಾಗಿ ದೊಡ್ಡ ಮೊತ್ತದ ಸಿನಿಮಾ ತಯಾರಿಸಿ, ಮಲ್ಟಿಪ್ಲೆಕ್ಸ್ ಚಿತ್ರಮಂದಿರಗಳಲ್ಲಿ ಮನಸ್ಸೋಯಿಚ್ಛೆ ದರ ನಿಗಧಿ ಮಾಡಿ ಪ್ರದರ್ಶಿಸಲಾಗುತ್ತಿತ್ತು. ಮೊದಲ 3 ದಿನ ಹೆಚ್ಚು ಮೊತ್ತ ಟಿಕೆಟ್ ಮಾರಾಟ ಮಾಡಿ ಹಣ ಗಳಿಸುವ ತಂತ್ರ ನಡೆಸಲಾಗುತ್ತಿತ್ತು. ಬೆಂಗಳೂರಲ್ಲಿ ಮಲ್ಟಿಪ್ಲೆಕ್ಸ್ ಚಿತ್ರ ಮಂದಿರದಲ್ಲಿ 1 ಟಿಕೆಟ್‌ಗೆ 500 ರೂ., ಮೈಸೂರಲ್ಲಿ 1 ಟಿಕೆಟ್‌ಗೆ 400 ರೂ.ವರೆಗೆ ದರ ನಿಗಧಿ ಮಾಡಿರುವ ಉದಾಹರಣೆ ಇದೆ ಎಂದರು.

ದುಬಾರಿ ಬಜೆಟ್‌ನ ಚಿತ್ರ ನಿರ್ಮಾಣದಿಂದ ನಟ–ನಟಿ, ಸಹಾಯಕ ನಟರು, ತಂತ್ರಜ್ಞರು ಹೆಚ್ಚಿನ ಸಂಭಾವನೆ ಕೇಳುವಂತಾಗಿದೆ. ಆ ಹೊರೆಯಿಂದಾಗಿ ಮಲ್ಟಿಪ್ಲೆಕ್ಸ್ ಚಿತ್ರಮಂದಿರಗಳಲ್ಲಿ ದುಬಾರಿ ಶುಲ್ಕ ನಿಗದಿ ಮಾಡಲಾಗುತ್ತಿತ್ತು. ಕರ್ನಾಟಕದಲ್ಲಿ ಕೆಲವು ನಟರು ಮಾತ್ರ ಪಾನ್ ಇಂಡಿಯಾಗೆ ಒಳಗಾಗದೇ ಕನ್ನಡಕ್ಕಾಗಿ ಮಾತ್ರ ಚಲನಚಿತ್ರ ನಿರ್ಮಿಸುತ್ತಿದ್ದಾರೆ. ಮತ್ತೆ ಕೆಲವರು ದುಬಾರಿ ಬಜೆಟ್ ಚಿತ್ರ ನಿರ್ಮಾಣದಲ್ಲಿ ತೊಡಗಿದ್ದು, ಎರಡು ಅಥವಾ ಒಂದೂವರೆ ವರ್ಷಕ್ಕೊಮ್ಮೆ ಒಂದು ಚಲನ ಚಿತ್ರ ನಿರ್ಮಿಸುತ್ತಿದ್ದಾರೆ. ಇದರಿಂದ ಕನ್ನಡ ಚಲನ ಚಿತ್ರ ರಂಗಕ್ಕೆ ತೊಂದರೆಯಾಗುತಿದೆ. ಇದೀಗ ರಾಜ್ಯ ಸರ್ಕಾರ 200 ರೂ. ದರ ನಿಗಧಿ ಮಾಡಿರುವ ಆದೇಶದಿಂದ ಪಾನ್ ಇಂಡಿಯಾ ಹಾಗೂ ದುಬಾರಿ ಬಜೆಟ್ ಚಿತ್ರ ನಿರ್ಮಾಣಕ್ಕೆ ಕಡಿವಾಣ ಬಿದ್ದಂತಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಮಲ್ಟಿಪ್ಲೆಕ್ಸ್ ಚಿತ್ರಮಂದಿರಗಳಲ್ಲಿ ಚಿತ್ರ ಪ್ರದರ್ಶನವಾದರೆ ಸಂಗ್ರಹವಾದ ಹಣದಲ್ಲಿ ವಿತರಕರು ಹಾಗೂ ಮಲ್ಟಿಪ್ಲೆಕ್ಸ್ ಚಿತ್ರಮಂದಿರದ ಮಾಲೀಕರಿಗೆ ಹಂಚಿಕೆಯಾಗುತ್ತದೆ. ಆ ಕಾರಣದಿಂದ ಮಲ್ಟಿಪ್ಲೆಕ್ಸ್ ಚಿತ್ರಮಂದಿರಗಳಲ್ಲಿ ಟಿಕೆಟ್ ದರ ಹೆಚ್ಚಿಸಲಾಗುತ್ತದೆ. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರದ ಆದೇಶ ಸೂಕ್ತವಾಗಿದೆ. ಈಗಾಗಲೇ ಆಂಧ್ರ, ಕೇರಳ, ತಮಿಳುನಾಡಿನಲ್ಲೂ ಟಿಕೆಟ್ ದರ ನಿಗದಿ ಮಾಡಲಾಗಿದೆ. ರಾಜ್ಯದಲ್ಲಿ ಈಗ ಟಿಕೆಟ್ ದರ ನಿಗಧಿ ಮಾಡಿದ್ದು, ಇದರಿಂದ ಸಿಂಗಲ್ ಸ್ಕ್ರೀನ್ ಚಿತ್ರಮಂದಿರಗಳಿಗೆ ಲಾಭವಾಗುತ್ತದೆ ಎಂಬ ನಿರೀಕ್ಷೆಯಿಲ್ಲ. ಆದರೆ, ಮಲ್ಟಿಪ್ಲೆಕ್ಸ್ ಚಿತ್ರ ಚಿತ್ರಮಂದಿರಗಳ ಸುತ್ತಮುತ್ತವಿರುವ ಹೋಟೆಲ್ ಸೇರಿದಂತೆ ಇನ್ನಿತರ ಅಂಗಡಿಗಳಲ್ಲಿ ವ್ಯಾಪಾರ ಹೆಚ್ಚಾಗಲಿದೆ ಎಂದರು.

ದರ ಮರುಪರಿಶೀಲನೆಗೆ ಮನವಿ ಸಲ್ಲಿಸಲು ನಿರ್ಧಾರ: ಡಿಆರ್‌ಸಿ ಸಿನಿಮಾಸ್ ಸಂಸ್ಥೆಯ ಮುಖ್ಯಸ್ಥ ಹನುಮಂತು ಮಾತನಾಡಿ, ಮಲ್ಟಿಪ್ಲೆಕ್ಸ್ ಚಿತ್ರಮಂದಿರಗಳಲ್ಲಿ 200 ರೂ. ದರ ನಿಗಧಿ ಮಾಡಿರುವ ಸರ್ಕಾರದ ನಿರ್ಧಾರ ಅವೈಜ್ಞಾನಿಕವಾಗಿದೆ. ಮಲ್ಟಿಪ್ಲೆಕ್ಸ್‌ಗಳಲ್ಲಿ ಅಳವಡಿಸಿರುವ ಉಪಕರಣಗಳು ದುಬಾರಿ ಮೊತ್ತದ್ದಾಗಿದೆ. ಮನರಂಜನಾ ಕ್ಷೇತ್ರಕ್ಕೆ ಸರ್ಕಾರ ದರ ನಿಗಧಿ ಮಾಡುವುದು ಸರಿಯಲ್ಲ. ಸರ್ಕಾರದ ಹಸ್ತಕ್ಷೇಪ ಸಮಂಜಸವಲ್ಲ. ಹೋಟೆಲ್‌ಗೆ ಹೋದ ಗ್ರಾಹಕ ಮೆನು ಕಾರ್ಡ್‌ನಲ್ಲಿ ನಮೂದಾಗಿರುವ ತಿಂಡಿಯ ಮೊತ್ತ ನೋಡಿ, ತಮಗೆ ಇಷ್ಟವಾದರೆ ತಿನ್ನುತ್ತಾರೆ. ಇಲ್ಲದಿದ್ದರೆ ವಾಪಸ್ಸಾಗುತ್ತದೆ. ಮಲ್ಟಿಪ್ಲೆಕ್ಸ್‌ನಲ್ಲಿ ದರ ಹೆಚ್ಚಾಗಿದೆ ಎನಿಸಿದರೆ, ಪ್ರೇಕ್ಷಕರು ವಾಪಸ್ಸಾಗುತ್ತಾರೆ. ಕಡ್ಡಾಯವಾಗಿ ಮಲ್ಟಿಪ್ಲೆಕ್ಸ್‌ನಲ್ಲಿ ಸಿನಿಮಾ ವೀಕ್ಷಿಸಿ ಎಂದು ಮಾಲೀಕರು ಎಲ್ಲೂ ಹೇಳಿಲ್ಲ. ಆ ಕಾರಣದಿಂದ ದರ ನಿಗದಿ ಮಾಡಿರುವ ಕ್ರಮದಿಂದ ಮಲ್ಟಿಪ್ಲೆಕ್ಸ್ ಮಾಲೀಕರಿಗೆ ತೊಂದರೆಯಾಗಿದೆ. ಸರ್ಕಾರ ಆಕ್ಷೇಪ ಸಲ್ಲಿಸಲು 15 ದಿನ ಕಾಲಾವಕಾಶ ನೀಡಿದೆ. ಈ ಆದೇಶ ಪುನರ್ ಪರಿಶೀಲಿಸುವಂತೆ ಸರ್ಕಾರಕ್ಕೆ ಮನವಿ ಸಲ್ಲಿಸುತ್ತೇವೆ ಎಂದು ತಿಳಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಅಪಘಾತದಲ್ಲಿ ಮೃತಪಟ್ಟ ಮಹಿಳೆ ಅಂಗದಿಂದ ಬೇರೊಬ್ಬರ ಜೀವ ರಕ್ಷಣೆ

ಮೈಸೂರಿನ ಅಪೋಲೊ ಬಿಜಿಎಸ್ ಆಸ್ಪತ್ರೆಯಲ್ಲಿ ಅಂಗಾಂಗ ಕಸಿ

ಮೈಸೂರು, ಜು.16–ಅಪಘಾತದಲ್ಲಿ ಮೃತಪಟ್ಟ ಮಹಿಳೆಯ ಅಂಗಾಂಗ ದಾನ ಮಾಡುವ ಮೂಲಕ ಅವರ ಕುಟುಂಬದವರು ಕೆಲವರ ಜೀವ ರಕ್ಷಣೆ ಮಾಡಿದ್ದಾರೆ ಎಂದು ಮೈಸೂರಿನ ಅಪೋಲೊ ಬಿಜಿಎಸ್ ಆಸ್ಪತ್ರೆ ಪ್ರಕಟಣೆ ತಿಳಿಸಿದೆ.



ಅಪಘಾತದಲ್ಲಿ ತೀವ್ರ ಗಾಯಗೊಂಡಿದ್ದ ಬಿ.ಎಸ್. ರಾಜಮ್ಮ(53) ಎಂಬುವರನ್ನು ಜುಲೈ 2ರಂದು ಮೈಸೂರಿನ ಅಪೋಲೊ ಬಿಜಿಎಸ್ ಆಸ್ಪತ್ರೆಗೆ ಕರೆತರಲಾಗಿತ್ತು. ತಲೆಗೆ ತೀವ್ರವಾಗಿ ಪೆಟ್ಟು ಬಿದ್ದಿದ್ದ ರಾಜಮ್ಮ ಅವರ ಮೆದುಳು ನಿಷ್ಕ್ರಿಯವಾಗಿದೆ ಎಂದು ಅಂದು ಸಂಜೆ 5.30ರಲ್ಲಿ ವೈದ್ಯರು ಘೋಷಿಸಿದ್ದು, ರಾಜಮ್ಮ ಕುಟುಂಬಸ್ಥರು ಅಂಗಾಂಗ ದಾನಕ್ಕೆ ಒಪ್ಪಿಗೆ ನೀಡಿದರು. ಮರು ದಿನ ಬೆಳಗ್ಗೆ 7.27ಕ್ಕೆ ಕ್ರಾಸ್ –ಕ್ಲಾಂಪ್ ಮೂಲಕ ರಾಜಮ್ಮ ಅವರ ಯಕೃತ್ತನ್ನು ಬೆಳಗ್ಗೆ 8.15ಕ್ಕೆ ಹೊರ ತೆಗೆದು, ಮೈಸೂರಿನ ಅಪೋಲೊ ಆಸ್ಪತ್ರೆಯಲ್ಲಿ ಅಂಗಾಂಗದ ಅವಶ್ಯವಿರುವ ಒಬ್ಬರಿಗೆ ಜೀವದಾನ ಮಾಡಿದಂತಾಯಿತು ಎಂದು ಪ್ರಕಟಣೆ ತಿಳಿಸಿದೆ.

ಕರ್ನಾಟಕದ ಎಸ್‌ಓಟಿಟಿಓ ಅಡಿ ಅಂಗಾಂಗ ಕಸಿಗಾಗಿ 5ನೇ ವಲಯ ಎಂದು ಗುರುತಿಸಲ್ಪಟ್ಟಿರುವ ಮೈಸೂರಿನ ಅಪೋಲೊ ಬಿಜಿಎಸ್ ಆಸ್ಪತ್ರೆ ಬಹು ಅಂಗಾಂಗ ಕಸಿಗೆ ಒಳಗಾಗುವ ರೋಗಿಗಳ ಕ್ರಾಸ್ ಮ್ಯಾಚಿಂಗ್ ಅನ್ನು ಈ ಆಸ್ಪತ್ರೆಯಲ್ಲಿ ಕೈಗೊಳ್ಳುವುದರಿಂದ ಬೆಂಗಳೂರಿಗೆ ತೆರಳುವ ಸಮಯದೊಂದಿಗೆ ಅಂಗಾಂಗ ಕಸಿಗೂ ಬೇಕಾಗುವ ನಿರ್ಣಾಯಕ ಸಮಯ ಉಳಿತಾಯವಾಗುತ್ತದೆ.

ನಾಳೆ ಕೆಎಎಸ್ ತಾಲೂಕು ನೋಡಲ್ ಆಫೀಸರ್‌ಗಳಿಗೆ ತರಬೇತಿ

ಮೈಸೂರು,ಜು.16– ಆಡಳಿತ ತರಬೇತಿ ಸಂಸ್ಥೆ, ಮೈಸೂರು ಇಲ್ಲಿ ಜು.18 ರಂದು ಸಂಸ್ಥೆಯಲ್ಲಿ KAS Taluka Nodal Officers ಗಳಿಗೆ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಸದರಿ ತರಬೇತಿ ಕಾರ್ಯಕ್ರಮವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉದ್ಘಾಟಿಸಲಿದ್ದಾರೆ ಎಂದು ಆಡಳಿತ ತರಬೇತಿ ಸಂಸ್ಥೆಯ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೆ.ಹೆಚ್.ರಾಮಯ್ಯ ಒಕ್ಕಲಿಗರಾದರೂ ಹಿಂದುಳಿದ ವರ್ಗಗಳ ಶ್ರೇಯೋಭಿವೃದ್ಧಿಗೆ ಶ್ರಮಿಸಿದ್ದಾರೆ

ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಪ್ರಶಂಸೆ

ಮೈಸೂರು, ಜು.16(ಬಿಎಲ್‌ಯು)– ರಾಜ್ಯ ಒಕ್ಕಲಿಗ ಸಂಘದ ಸಂಸ್ಥಾಪಕ ಕೆ.ಹೆಚ್.ರಾಮಯ್ಯ ಅವರು ಒಕ್ಕಲಿಗ ಸಮುದಾಯಕ್ಕೆ ಮಾತ್ರವಲ್ಲದೆ ಎಲ್ಲಾ ಹಿಂದುಳಿದ ವರ್ಗಗಳ ಶ್ರೇಯೋಭಿವೃದ್ಧಿಗೆ ಶ್ರಮಿಸಿದ್ದಾರೆ ಎಂದು ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಪ್ರಶಂಸೆ ವ್ಯಕ್ತಪಡಿಸಿದರು.

ಮೈಸೂರಿನ ವಿಜಯನಗರದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಇಂದು ನಡೆದ ಕೆ.ಹೆಚ್.ರಾಮಯ್ಯ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸಹಕಾರ ಇಲಾಖೆಯ ರಿಜಿಸ್ಟ್ರಾರ್ ಆಗಿದ್ದ ರಾಮಯ್ಯ ಅವರು ಮೂಲತಃ ಒಕ್ಕಲಿಗ ಸಮುದಾಯದವರಾಗಿದ್ದರೂ ಹಿಂದುಳಿದ ವರ್ಗದವರ ಶಿಕ್ಷಣಕ್ಕೆ ದಾರಿದೀಪವಾದರು ಎಂದರು.

ಬಹಳಷ್ಟು ಜನರ ಸಮಾಜ ಸೇವಾ ಕಾರ್ಯ ಕಾಲಗರ್ಭದಲ್ಲಿ ಹುದುಗಿ ಹೋಗಿದೆ. ಅಂಥವರಲ್ಲಿ ಕೆಹೆಚ್.ರಾಮಯ್ಯ ಅವರೂ ಕೂಡ ಒಬ್ಬರು. ಆದರೆ ಇಂತಹ ಕಾರ್ಯಕ್ರಮಗಳನ್ನು ಆಯೋಜನೆ ಮಾಡುವ ಮೂಲಕ ಅವರನ್ನು ಸ್ಮರಿಸುತ್ತಿರುವುದು ಒಳ್ಳೆಯ ಬೆಳವಣಿಗೆ ಎಂದು ಮಂಜೇಗೌಡ ಅಭಿಪ್ರಾಯಪಟ್ಟರು.


ಮೈಸೂರಿನ ವಿಜಯನಗರದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಬುಧವಾರ ನಡೆದ ಕೆ.ಹೆಚ್.ರಾಮಯ್ಯ ಜಯಂತಿ ಕಾರ್ಯಕ್ರಮವನ್ನು ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಉದ್ಘಾಟಿಸಿದರು.

ಮೈಸೂರು ಮಹಾರಾಜರಿಗೆ ಆತ್ಮೀಯರಾಗಿದ್ದ ಕೆ.ಹೆಚ್.ರಾಮಯ್ಯ ಅವರು, ಅತ್ಯಂತ ಕೆಳಸ್ಥರದ ಜನರಿಗೆ ಶಿಕ್ಷಣ ಕೊಡಿಸಬೇಕೆಂದು ಮನವಿ ಮಾಡಿದ್ದರು. ತರುವಾಯ ಮಹಾರಾಜರ ಸಲಹೆಯಂತೆ ಆದಿ ದ್ರಾವಿಡ ಸಂಘ ಸ್ಥಾಪಿಸಿ ದಲಿತರ ಸಾಮಾಜಿಕ, ಶೈಕ್ಷಣಿಕ ಏಳಿಗೆಗೆ ಪ್ರೋತ್ಸಾಹಿಸಿದರು ಎಂದು ಹೇಳಿದರು.

ಅಲ್ಲದೆ ಒಳ ಪಂಗಡಗಳ ಕಿತ್ತಾಟ ಶಮನ ಮಾಡಿ ಒಗ್ಗಟ್ಟಿನ ಪಾಠ ಹೇಳಿಕೊಟ್ಟರು. ಒಗಟ್ಟು ಇದ್ದರೆ ಏನೆಲ್ಲಾ ಸಾಧಿಸಬಹುದು ಎಂದು ಮನದಟ್ಟು ಮಾಡಿಕೊಟ್ಟರು. ಹಲವು ಶಾಲೆ ಹಾಗೂ ವಸತಿ ನಿಲಯವನ್ನು ಸ್ಥಾಪಿಸಿದ ಕೆ.ಹೆಚ್.ರಾಮಯ್ಯ ಅವರು ಮಾಡಿರುವ ಸಮಾಜಮುಖಿ ಕಾರ್ಯಕ್ರಮಗಳು ಸ್ಮರಣೀಯ ಎಂದು ಮಂಜೇಗೌಡ ತಿಳಿಸಿದರು.

ಇದೇ ವೇಳೆ ಮಾತನಾಡಿದ ಮಾಜಿ ಸಂಸದ ಪ್ರತಾಪ್ ಸಿಂಹ ಅವರು, ವಿದೇಶದಲ್ಲಿ ಉನ್ನತ ವ್ಯಾಸಂಗ ಮಾಡಿದ್ದ ಕೆ.ಹೆಚ್. ರಾಮಯ್ಯ ಅವರು ತಮ್ಮ ಕರ್ಮಭೂಮಿ ಮೈಸೂರಿನಲ್ಲಿ ಸಮಾಜಮುಖಿಯಾಗಿ ಹಲವು ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಿದ್ದು, ಇಂದಿಗೂ ಅದು ಜನೋಪಯೋಗಿಯಾಗಿದೆ ಎಂದು ಹೇಳಿದರು.

ವಿದ್ಯುತ್ ಗುತ್ತಿಗೆದಾರ ಸಿ.ರಮೇಶ್, ಸಮಾಜ ಸೇವಕ ಕೆ.ಎನ್.ಧನ್ಯಕುಮಾರ್, ಐಶ್ವರ್ಯ ಆಸ್ಪತ್ರೆಯ ಡಾ.ಲಕ್ಷ್ಮೀಗೌಡ, ಕಾವೇರಿ ಕ್ರಿಯಾ ಸಮಿತಿ ಅಧ್ಯಕ್ಷ ಎಸ್. ಜಯಪ್ರಕಾಶ್, ನಿವೃತ್ತ ಪ್ರಾಂಶುಪಾಲ ಪ್ರೊ.ಸಿ.ಹೆಚ್.ಪ್ರಕಾಶ್, ಉದ್ಯಮಿ ಪಾಂಡುರಂಗ ಸತೀಶ್, ಕೆಪಿಸಿಸಿ ಸದಸ್ಯ ನಟರಾಜ್, ಶ್ರೀ ಲಕ್ಷ್ಮಿ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷೆ ಶೋಭಾರಾಣಿ ಗೌಡ ಹಾಗೂ ಜೆ.ರವಿಚಂದ್ರ ಹಂಚ್ಯಾ ಅವರಿಗೆ ಕೆ.ಹೆಚ್.ರಾಮಯ್ಯ ಸೇವಾ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಅಖಿಲ ಕರ್ನಾಟಕ ಒಕ್ಕಲಿಗ ಸಂಘದ ರಾಜ್ಯಾಧ್ಯಕ್ಷ ಸಿ.ಜಿ.ಗಂಗಾಧರ್, ಮಾಜಿ ಗೌರವಾಧ್ಯಕ್ಷ ಕೆ.ವಿ.ಶ್ರೀಧರ್, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಮಾಜಿ ಸಿಂಡಿಕೇಟ್ ಸದಸ್ಯ ಡಾ.ಈ.ಸಿ.ನಿಂಗರಾಜೇ ಗೌಡ ಸೇರಿದಂತೆ ಹಲವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಹಲವು ತಿಂಗಳಿಂದ ವೇತನವಾಗದೇ ಮನ್ರೇಗಾ ಯೋಜನೆಯ ಗುತ್ತಿಗೆ ಸಿಬ್ಬಂದಿಯ ಸಂಕಷ್ಟ

ಜೀವನ ನಿರ್ವಹಣೆಗೆ ಪರಿತಪಿಸುತ್ತಿರುವ ಬಡಪಾಯಿಗಳು

ಮೈಸೂರು, ಜು.16(ಎಸ್‌ಪಿಎನ್)– ರಾಜ್ಯದಲ್ಲಿ ಮಹಾತ್ಮಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ (ಮನ್ರೇಗಾ) ಯೋಜನೆಯಡಿ ವಿವಿಧ ಹಂತಗಳಲ್ಲಿ ಕೆಲಸ ಮಾಡುತ್ತಿರುವ ಗುತ್ತಿಗೆ ಸಿಬ್ಬಂದಿಗೆ ಏಳೆಂಟು ತಿಂಗಳಿಂದ ವೇತನ ಪಾವತಿಯಾಗಿಲ್ಲ. ಇದರಿಂದ ರಾಜ್ಯಾದ್ಯಂತ ಅಂದಾಜು 5,400 ಸಿಬ್ಬಂದಿ ಸಂಕಷ್ಟದಲ್ಲಿದ್ದು, ಮೈಸೂರಿನಲ್ಲೂ ಹತ್ತಾರು ಸಿಬ್ಬಂದಿ ಸಮಸ್ಯೆಯಲ್ಲಿದ್ದಾರೆ.


ಸಂಗ್ರಹ ಚಿತ್ರ

ಜಿಲ್ಲಾ ಐಇಸಿ ಸಂಯೋಜಕ, ಜಿಲ್ಲಾ ಲೆಕ್ಕ ವ್ಯವಸ್ಥಾಪಕರು, ತಾಲೂಕು ಆಡಳಿತ ಸಹಾಯಕರು, ತಾಲೂಕು ಐಇಸಿ ಸಂಯೋಜಕ, ಸಹಾಯಕ ಕಾರ್ಯಕ್ರಮ ಸಂಯೋಜಕರು, ಗ್ರಾಮ ಕಾಯಕ ಮಿತ್ರರು, ತಾಂಡ ರೋಜಗಾರ್ ಮಿತ್ರ, ತಾಂತ್ರಿಕ ಸಂಯೋಜಕರು ಹೀಗೆ ವಿವಿಧ ಹುದ್ದೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಈ ಹುದ್ದೆಗಳಲ್ಲಿ ಇರುವವರು ಬಹುತೇಕರು ಬಡ ಮತ್ತು ಮಧ್ಯಮ ವರ್ಗದವರು.

ವಿಳಂಬಕ್ಕೆ ಕಾರಣವೇನು?: ಕೇಂದ್ರ ಸರ್ಕಾರ ಕಳೆದ ವರ್ಷ ತನ್ನ ಯೋಜನೆಗಳ ಲೆಕ್ಕಪತ್ರಗಳ ನಿರ್ವಹಣೆಯನ್ನು ಎಸ್‌ಎನ್‌ಎ ಸ್ಪರ್ಶ್ ತಂತ್ರಾಂಶದ ಮೂಲಕ ಆರಂಭಿಸಿದೆ. ರಾಜ್ಯ ಸರ್ಕಾರ ನರೇಗಾ ಮತ್ತು ಖಜಾನೆ–2 ಜೊತೆ ಸೇರಿಸಿ ರೀಟ್ ಎನ್ನುವ ತಂತ್ರಾಂಶ ಅಭಿವೃದ್ಧಿಪಡಿಸಿತ್ತು.

ಕೇಂದ್ರದ ಸೂಚನೆ ಮೇರೆಗೆ ರಾಜ್ಯವೂ ಸ್ಪರ್ಶ್ ತಂತ್ರಾಂಶ ಅಳವಡಿಸಿಕೊಂಡಿದ್ದು ಇದು ಖಜಾನೆ–2 ಜೊತೆ ಸುಗಮವಾಗಿ ಕೆಲಸ ಮಾಡುವ ವಿಷಯ ಖಚಿತಪಡಿಸಿಕೊಳ್ಳದೆ ರೀಟ್ ತಂತ್ರಾಂಶವನ್ನು ನಿಷ್ಕ್ರಿಯ ಮಾಡಿದ್ದರಿಂದ ವೇತನ ಪಾವತಿ ವಿಳಂಬವಾಗುತ್ತಿದೆ. ಇದರಿಂದ ನರೇಗಾ ಯೋಜನೆಗೆ ಕೇಂದ್ರ ಸರ್ಕಾರದಿಂದ ಅನುದಾನ ಬಿಡುಗಡೆಯಾಗಿಲ್ಲ ಎಂಬ ಸಬೂಬು ಅಧಿಕಾರಿಗಳ ವಲಯದಲ್ಲಿ ಕೇಳಿಬರುತ್ತಿದೆ.

ವೇತನವಿಲ್ಲದೆ ಹೇಳತೀರದು ಸಿಬ್ಬಂದಿಯ ಗೋಳು

"ಹಲವು ದಿನಗಳಿಂದ ಹಳೆಯ ರೀಟ್ ತಂತ್ರಾಂಶ ನಿಷ್ಕ್ರಿಯಗೊಂಡು ಖಜಾನೆ–2 ಜೊತೆ ಹೊಂದಿಕೆಯಾಗಿಲ್ಲ. ಹೊಸ ತಂತ್ರಾಂಶದ ಬದಲಾವಣೆ ಮಾಡಿರುವ ಹಿನ್ನಲೆಯಲ್ಲಿ ಇದರ ತಾಂತ್ರಿಕ ದೋಷದಿಂದ ವೇತನ ಪಾವತಿ ನಿಧಾನವಾಗುತ್ತಿದೆ. ಅಲ್ಲದೆ, ಕೇಂದ್ರ ಸರ್ಕಾರದಿಂದ ಅನುದಾನ ಬಿಡುಗಡೆ ವಿಳಂಬವಾಗಿರುವ ಹಿನ್ನಲೆಯಲ್ಲಿ ಈ ಸಮಸ್ಯೆ ಉದ್ಭವಿಸಿದೆ.

– ಹೆಸರೇಳಲಿಚ್ಛಿಸದ ನರೇಗಾ ಸಿಬ್ಬಂದಿ

ಶೀಘ್ರದಲ್ಲೇ ನರೇಗಾ ಸಿಬ್ಬಂದಿಗೆ ವೇತನ ಪಾವತಿ

"ಕಳೆದ ಎಂಟು ತಿಂಗಳಿಂದ ಕೇಂದ್ರದಿಂದ ನರೇಗಾ ಯೋಜನೆಗೆ ಅನುದಾನ ಬಿಡುಗಡೆಯಾಗಿರಲಿಲ್ಲ. ಈ ಬಗ್ಗೆ ರಾಜ್ಯ ಸರ್ಕಾರ ಪತ್ರ ವ್ಯವಹಾರ ನಡೆಸಿದ ಫಲವಾಗಿ ಇದೀಗ ಕೇಂದ್ರ ಸರ್ಕಾರದಿಂದ ನರೇಗಾ ಯೋಜನೆಗೆ ಅನುದಾನ ಬಿಡುಗಡೆಗೊಂಡಿದ್ದು, ಸಿಬ್ಬಂದಿಗೆ ಹಂತ ಹಂತವಾಗಿ ಅತೀ ಶೀಘ್ರದಲ್ಲೇ ವೇತನ ಪಾವತಿಯಾಗಲಿದೆ.



- ಎಸ್.ಉಕೇಶ್‌ಕುಮಾರ್, ಸಿಇಓ, ಮೈಸೂರು ಜಿಲ್ಲಾ ಪಂಚಾಯತ್

ಬದುಕು ನಡೆಸುವುದೇ ಕಷ್ಟವಾಗುತ್ತಿದೆ: ಬಹುತೇಕ ಸಿಬ್ಬಂದಿಗೆ ವೇತನ ನಿಲುಗಡೆಯಿಂದ ಮಕ್ಕಳ ಶಿಕ್ಷಣದ ಶುಲ್ಕ ಪಾವತಿಸಲಾಗುತ್ತಿಲ್ಲ. ಅವಲಂಬಿತರ ಆರೋಗ್ಯ ಸಂಬಂಧಿ ಖರ್ಚುಗಳ ನಿರ್ವಹಣೆ ಮಾಡಲು ಹಾವಿಲ್ಲದಂತಾಗಿದೆ ಬಾಕಿ ವೇತನಕ್ಕಾಗಿ ಅನೇಕ ಕಡೆ ಈಗಾಗಲೇ ಸಿಬ್ಬಂದಿ ಹೋರಾಟ ಮಾಡಿದರೂ ಯಾರೂ ಕೇಳುವವರೇ ದಿಕ್ಕಿಲ್ಲದಂತಾಗಿದೆ. ಸದ್ಯಕ್ಕೆ ಕಚೇರಿಯಲ್ಲಿದ್ದುಕೊಂಡೇ ಕರ್ತವ್ಯಕ್ಕೆ 'ಅಸಹಕಾರ' ಹೋರಾಟ ಆರಂಭಿಸಲಾಗಿದೆ ಎನ್ನುತ್ತಾರೆ ನರೇಗಾದಲ್ಲಿ ಕೆಲಸ ಮಾಡುವ ಸಿಬ್ಬಂದಿ.

ಮತ್ತೆ ಸ್ಮಾರ್ಟ್ ಮೀಟರ್ ಹಗರಣ: ಇಂಧನ ಸಚಿವ ಜಾರ್ಜ್ ವಿರುದ್ಧ ಬಿಜೆಪಿಯಿಂದ ಖಾಸಗಿ ದೂರು

ಬೆಂಗಳೂರು, ಜು.16–ಇಂಧನ ಇಲಾಖೆಯಲ್ಲಿ ಕೇಳಿಬಂದಿರುವ ಸ್ಮಾರ್ಟ್ ಮೀಟರ್ ಹಗರಣ ಈಗ ಹೊಸ ರೂಪ ಪಡೆದುಕೊಂಡಿದೆ. ಈ ಹಿಂದೆ ಲೋಕಾಯುಕ್ತಕ್ಕೆ ದೂರು ನೀಡಿದ್ದರೂ ಯಾವುದೇ ತನಿಖಾ ಪ್ರಗತಿ ಕಾಣದೇ ಇರುವುದರಿಂದ ಮೂವರು ಬಿಜೆಪಿ ಶಾಸಕರು ಕೋರ್ಟ್ ಮೊರೆ ಹೋಗಿದ್ದಾರೆ.



ಸಚಿವ ಕೆ.ಜೆ ಜಾರ್ಜ್ ಹಾಗೂ ಬೆಸ್ಕಾಂನ ಹಿರಿಯ ಅಧಿಕಾರಿಗಳ ವಿರುದ್ಧ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದಲ್ಲಿ ಖಾಸಗಿ ದೂರು ದಾಖಲಿಸಿದ್ದಾರೆ. ಬಿಜೆಪಿ ಶಾಸಕ ಅಶ್ವಥ್ ನಾರಾಯಣ, ಎಸ್.ಆರ್.ವಿಶ್ವನಾಥ್ ಹಾಗೂ ಧೀರಜ್ ಮುನಿರಾಜು ಈ ದೂರು ದಾಖಲಿಸಿದ್ದು, ಅರ್ಜಿದಾರರ ಪರವಾಗಿ ವಕೀಲೆ ಲಕ್ಷ್ಮಿ ಅಯ್ಯಂಗಾರ್ ವಾದ ಮಂಡಿಸಿದ್ದಾರೆ. ಬ್ಲ್ಯಾಕ್ ಲಿಸ್ಟ್‌ನಲ್ಲಿರುವ ಕಂಪನಿ ಜೊತೆ ಒಡಂಬಡಿಕೆ ಮಾಡಿಕೊಂಡು ದುಬಾರಿ ದರ ವಿಧಿಸಲಾಗಿದೆ ಎಂದು ಬಿಜೆಪಿ ಶಾಸಕರ ಪರ ವಾದಿಸಿದರು. ವಾದ–ಪ್ರತಿವಾದಗಳನ್ನು ಆಲಿಸಿ ಕೋರ್ಟ್ ವಿಚಾರಣೆಯನ್ನು ಗುರುವಾರಕ್ಕೆ ಮುಂದೂಡಿತು.

ಖಾಸಗಿ ದೂರಿನ ಬಗ್ಗೆ ಪ್ರತಿಕ್ರಿಯೆ ನೀಡಿದ ಸಚಿವ ಕೆ.ಜೆ.ಜಾರ್ಜ್, ದೂರುದಾರರು ಕೋರ್ಟ್ ಮೊರೆ ಹೋಗಿ ದ್ದಾರೆ. ನಾವು ಕೂಡ ವಿವರಣೆ ನೀಡುತ್ತೇವೆ. ಅಂತಿಮವಾಗಿ ಕೋರ್ಟ್ ನಿರ್ಧಾರ ಮಾಡಲಿದೆ ಎಂದರು.

ಬಿಜೆಪಿ ಆರೋಪ ಏನು: ಸ್ಮಾರ್ಟ್ ಮೀಟರ್ ಟೆಂಡರ್‌ನಲ್ಲಿ ಕೇವಲ ಮೂರು ಕಂಪನಿ ಮಾತ್ರ ಟೆಂಡರ್‌ನಲ್ಲಿದ್ದವು. ಇತರೆ ಕಂಪನಿಗಳು ಟೆಂಡರ್‌ಗೆ ಬಾರದಂತೆ ಷರತ್ತು ವಿಧಿಸಲಾಗಿತ್ತು. ಬಿಡ್‌ನಲ್ಲಿ ಇದ್ದ ಎರಡು ಕಂಪನಿಗಳು ಡಮ್ಮಿ ಕಂಪನಿಗಳು. ಹೀಗಾಗಿ ರಾಜಶ್ರೀ ಕಂಪನಿಗೆ ಟೆಂಡರ್ ನೀಡಿರುವುದೇ ಅಕ್ರಮವಾಗಿದೆ. ಬೆಸ್ಕಾಂನಲ್ಲಿ ದೊಡ್ಡ ಮಟ್ಟದ ಅಕ್ರಮಗಳು ನಡೆಯುತ್ತಿವೆ. ಒಂದು ಸ್ಮಾರ್ಟ್ ಮೀಟರ್‌ಗೆ 5,000 ರೂ., ತ್ರೀಫೇಸ್ ಮೀಟರ್‌ಗೆ 9,000 ರೂ. ನಿಗದಿ ಮಾಡಿದೆ. ಇದೇ ಮೀಟರ್‌ಗಳು ಬೇರೆ ರಾಜ್ಯಗಳಲ್ಲಿ 900 ರೂ. ಮಾತ್ರ ಇದೆ. ರಾಜ್ಯಪಾಲರ ಬಳಿ ಈಗಾಗಲೇ ಪ್ರಾಸಿಕ್ಯೂಷನ್ ಅನುಮತಿ ಕೋರಲಾಗಿದೆ ಎಂದು ಬಿಜೆಪಿ ದೂರಿನಲ್ಲಿ ತಿಳಿಸಿದೆ.


ಕೆ.ಜೆ ಜಾರ್ಜ್

ನಾಳೆಯಿಂದ ವಿಶ್ವಬ್ರಹ್ಮ ಕ್ರಿಕೆಟ್ ಟೂರ್ನಮೆಂಟ್

ಮೈಸೂರು, ಜು. 16– ಮೈಸೂರು ಜಿಲ್ಲಾ ಚಿನ್ನ ಬೆಳ್ಳಿ ಕೆಲಸಗಾರರ ಅಭಿವೃದ್ಧಿ ಸಂಘದ ವತಿಯಿಂದ ಜು. 18 ರಿಂದ 20 ರವರೆಗೆ ಮೈಸೂರು ವಿವಿ ಮೈದಾನದಲ್ಲಿ ವಿಶ್ವಬ್ರಹ್ಮ ಕ್ರಿಕೆಟ್ ಟೂರ್ನಮೆಂಟ್ ಹಮ್ಮಿಕೊಳ್ಳಲಾಗಿದೆ. ಮುಖ್ಯ ಅತಿಥಿಗಳಾಗಿ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಅಂತರರಾಷ್ಟ್ರೀಯ ಕ್ರಿಕೆಟ್ ಆಟಗಾರ ಜಾವಗಲ್ ಶ್ರೀನಾಥ್, ಚಲನಚಿತ್ರ ನಟಿ ಭವ್ಯಾ, ನೂತನ ಡಿಸಿಪಿ ಬಿಂದುಮಣಿ ಆರ್.ಎನ್., ಸಂಘದ ಗೌರವಾಧ್ಯಕ್ಷ ರವಿಪ್ರಕಾಶ್, ಅಧ್ಯಕ್ಷ ಗೋಲ್ಡನ್ ಟಿ. ಸುರೇಶ್, ಕೆ.ಆರ್. ಆಸ್ಪತ್ರೆ ವೈದ್ಯಕೀಯ ಅಧೀಕ್ಷಕರಾದ ಡಾ. ಶೋಭ ಹೆಚ್.ಪಿ., ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ. ದೀಪಕ್ ಭಾಗವಹಿಸಲಿದ್ದಾರೆ.

ಕೆಬಿಜಿ ಆತ್ಮಕ್ಕೆ ಚಿರಶಾಂತಿ ಸಿಗಲಿ

'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರೂ ಆದ ಹಿರಿಯ ಪತ್ರಕರ್ತ ಡಾ.ಕೆ.ಬಿ.ಗಣಪತಿ (ಕೆಬಿಜಿ) ಅವರು 50 ವರ್ಷಗಳ ಕಾಲ ಎರಡೂ ಪತ್ರಿಕೆಗಳನ್ನು ಅತ್ಯಂತ ಯಶಸ್ವಿಯಾಗಿ ನಡೆಸಿದ್ದು, ಈ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದ ಅವರ ಅಂಕಣ ಹಾಗೂ ಲೇಖನಗಳು ಸಮಾಜವನ್ನು ಚಿಂತನೆಗೆ ಹಚ್ಚುತ್ತಿದ್ದವು. ಪತ್ರಿಕಾರಂಗದಲ್ಲಿ ಅವರ ಸೇವೆ ಅನನ್ಯ. ಹಿರಿಯ ಪತ್ರಕರ್ತರಾದ ಕೆಬಿಜಿಯವರು ಸತ್ಯವನ್ನೇ ಬರೆಯುತ್ತಿದ್ದರು. ಇವರ ನಿಧನ ಪತ್ರಿಕಾರಂಗಕ್ಕೆ ತುಂಬಲಾರದ ನಷ್ಟ ಉಂಟು ಮಾಡಿದೆ. ದೇವರು ಕೆಬಿಜಿ ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಹಾಗೂ ಅವರ ಕುಟುಂಬ, ಬಂಧು ಬಳಗಕ್ಕೆ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ದೇವರು ನೀಡಲಿ ಎಂದು ಪ್ರಾರ್ಥಿಸುತ್ತೇನೆ.



-ಎನ್.ಆರ್.ರವಿಚಂದ್ರೇಗೌಡ, ವಕೀಲರು ಹಾಗೂ ಜೆಡಿಎಸ್ ರಾಜ್ಯ ವಕ್ತಾರರು.

ಬಾಳೆಹಣ್ಣು ವ್ಯಾಪಾರಿಯ 7 ಮೊಬೈಲ್‌ಗಳ ಕಳವು

ಮೈಸೂರು, ಜು.16(ಪಿಎಂ)– ಬಾಳೆಹಣ್ಣು ವ್ಯಾಪಾರಿಯೊಬ್ಬರ ಒಟ್ಟು 78 ಸಾವಿರ ರೂ. ಮೌಲ್ಯದ 7 ಮೊಬೈಲ್‌ಗಳು ಕಳುವಾಗಿರುವ ಸಂಬಂಧ ದೇವರಾಜ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಂಜನಗೂಡಿನ ತಾಯೂರು ಗ್ರಾಮದ ನಿವಾಸಿ ರಾಜು, ಮೊಬೈಲ್‌ಗಳನ್ನು ಕಳೆದುಕೊಂಡವರು. ಮೈಸೂರಿನ ಸಯ್ಯಾಜಿರಾವ್ ರಸ್ತೆಯಲ್ಲಿ ಇವರು ವ್ಯಾಪಾರ ಮಾಡುವಾಗ ಸ್ಥಳದಲ್ಲಿ ಜೂ.25 ರಂದು ಮೊಬೈಲ್‌ಗಳ ಕಳವಾಗಿದೆ. ಕುಟುಂಬದ ಉಪಯೋಗಕ್ಕಾಗಿ 2024 ರಿಂದ ಈವರೆಗೆ ನನ್ನ ಹೆಸರಿನಲ್ಲಿಯೇ 7 ಮೊಬೈಲ್‌ಗಳನ್ನು ಆನ್‌ಲೈನ್ ಮತ್ತು ಮಳಿಗೆ ಎರಡರಲ್ಲೂ ಖರೀದಿಸಿ ಉಪಯೋಗಿಸುತ್ತಿದ್ದೆವು. ಜೂ.25ರಂದು ಮೊಬೈಲ್‌ಗಳಿಗೆ ಟೆಂಪರ್ ಗ್ಲಾಸ್, ಪೌಚ್ ಹಾಕಿಸಲು ತಂದಿದ್ದೆ. ಮೊಬೈಲ್‌ಗಳನ್ನು ಒಂದು ಕವರ್‌ನಲ್ಲಿ ಹಾಕಿ ಬಾಳೆ ಹಣ್ಣು ವ್ಯಾಪಾರ ಮಾಡುವ ಸ್ಥಳದಲ್ಲಿಯೇ ಇಟ್ಟುಕೊಂಡಿದ್ದೆ. ಕೆಲ ಸಮಯದ ನಂತರ ನೋಡಿದಾಗ ಮೊಬೈಲ್‌ಗಳಿದ್ದ ಕವರ್ ನಾಪತ್ತೆಯಾಗಿತ್ತು ಎಂದು ರಾಜು ತಾವು ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ಪಡಿತರ ಅಕ್ಕಿ ಅಕ್ರಮ ಸಾಗಾಟ; ಯುವಕನ ಬಂಧನ

ಮೈಸೂರು, ಜು.16(ಪಿಎಂ)– ಪಡಿತರ ಅಕ್ಕಿಯನ್ನು ಅಕ್ರಮವಾಗಿ ಆಟೋದಲ್ಲಿ ಸಾಗಿಸುತ್ತಿದ್ದ ಸಂಬಂಧ ಯುವಕನನ್ನು ಬಂಧಿಸಿರುವ ಜಯಪುರ ಠಾಣಾ ಪೊಲೀಸರು, ಆತನಿಂದ 5.50 ಕ್ವಿಂಟಾಲ್ ಅಕ್ಕಿ ಹಾಗೂ ಸಾಗಾಟಕ್ಕೆ ಬಳಸಿದ್ದ ಆಟೋವನ್ನು ವಶಪಡಿಸಿಕೊಂಡಿದ್ದಾರೆ.

ಮೈಸೂರಿನ ಗೌಸಿಯಾನಗರ ನಿವಾಸಿ ಫರಹಾನ್ (30) ಬಂಧಿತ. ತಾಲೂಕಿನ ಧನಗಳ್ಳಿ ಗ್ರಾಮದ ಬಳಿ ಪ್ಯಾಸೆಂಜರ್ ಆಟೋದಲ್ಲಿ ಪಡಿತರ ಅಕ್ಕಿ ಸಾಗಿಸುತ್ತಿರುವ ಮಾಹಿತಿ ಮೇರೆಗೆ ಪೊಲೀಸರು ದಾಳಿ ನಡೆಸಿದ್ದರು. ಈ ವೇಳೆ ಆಟೋ ಚಾಲಕ ಪರಾರಿಯಾಗಿದ್ದು, ಫರಹಾನ್ ಮಾತ್ರ ಸಿಕ್ಕಿಬಿದ್ದಿದ್ದಾನೆ. ಈ ಸಂಬಂಧ ಜಯಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸತ್ಯಜಿತ್ ರೇ ಪೂರ್ವಜರ ಮನೆ ನೆಲಸಮ


ಬಾಂಗ್ಲಾದೇಶದ ಹಂಗಾಮಿ ಸರ್ಕಾರದ ಕ್ರಮಕ್ಕೆ ಭಾರತೀಯರ ಖಂಡನೆ

ನವದೆಹಲಿ: ಭಾರತ ಮತ್ತು ಬಾಂಗ್ಲಾದೇಶದ ಸಾಂಸ್ಕೃತಿಕ ಇತಿಹಾಸದ ಕೊಂಡಿಯಂತಿದ್ದ ಖ್ಯಾತ ಸಿನಿಮಾ ನಿರ್ದೇಶಕ ಸತ್ಯಜಿತ್ ರೇ ಅವರ ಶತಮಾನದಷ್ಟು ಹಳೆಯ ಅಜ್ಜನ ಮನೆಯನ್ನು ಬಾಂಗ್ಲಾದೇಶದ ಹಂಗಾಮಿ ಸರ್ಕಾರ ನೆಲಸಮ ಮಾಡಿದೆ.

ಮಧ್ಯಂತರ ಸರ್ಕಾರದ ಈ ಕ್ರಮವನ್ನು ಭಾರತವು ತೀವ್ರವಾಗಿ ಖಂಡಿಸಿದ್ದು, ಇದೊಂದು ತೀವ್ರ ವಿಷಾದದ ವಿಚಾರ ಎಂದು ಬಣ್ಣಿಸಿದೆ. ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಕೂಡ ಇದನ್ನು ವಿರೋಧಿಸಿದ್ದಾರೆ.

ಸಾಮಾಜಿಕ ಜಾಲತಾಣಗಳಲ್ಲಿ ಈ ಬಗ್ಗೆ ತೀವ್ರ ಚರ್ಚೆ ನಡೆಯುತ್ತಿದ್ದು, ಬಾಂಗ್ಲಾ ಸರ್ಕಾರದ ಕ್ರಮಕ್ಕೆ ಭಾರತೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ದೇಶದೊಳಗಿರುವ ಎಲ್ಲ ಹಿಂದೂ ಬೇರುಗಳನ್ನು ಕಿತ್ತೆಸೆಯಲಾಗುತ್ತಿದೆ ಎಂದು ಕೆಲವು ಬಾಂಗ್ಲಾ ದೇಶದ ಧ್ವಜವಿರುವ ಖಾತೆಗಳು ಪೋಸ್ಟ್ ಹಂಚಿಕೊಂಡಿವೆ.

ಟ್ಯಾಗೋರ್ ಪೂರ್ವಜರ ಮನೆಯೂ ಧ್ವಂಸ: ಲೇಖಕ ರವೀಂದ್ರನಾಥ ಟ್ಯಾಗೋರ್ ಅವರ ಪೂರ್ವಜರ ಮನೆಯು ಬಾಂಗ್ಲಾದ ಸಿರಾಜ್‌ಗಂಜ್ ಜಿಲ್ಲೆಯಲ್ಲಿದೆ. ಇದನ್ನು ವಸ್ತುಸಂಗ್ರಹಾಲಯವನ್ನಾಗಿ ಮಾಡಲಾಗಿದೆ. ಸಿಬ್ಬಂದಿ ಹಾಗೂ ವೀಕ್ಷಕರೊಬ್ಬರ ಮಧ್ಯೆ ನಡೆದಿದ್ದ ಜಗಳದಲ್ಲಿ ವಸ್ತುಸಂಗ್ರಹಾಲಯಕ್ಕೆ ಜೂನ್‌ನಲ್ಲಿ ಹಾನಿಯಾಗಿತ್ತು



ಕಾಲೇಜುಗಳಲ್ಲಿ ಸಿಸಿ ಕ್ಯಾಮಾರಾ ಅಳವಡಿಕೆಗೆ ಸೂಚನೆ

ಮೈಸೂರು, ಜು.16(ಎಸ್‌ಪಿಎನ್)– ರಾಜ್ಯದ ಎಲ್ಲಾ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಸುರಕ್ಷತೆ ದೃಷ್ಟಿಯಿಂದ ಸಿಸಿ ಕ್ಯಾಮಾರಾಗಳನ್ನು ಅಳವಡಿಸಲು ಕ್ರಮಕೈಗೊಳ್ಳಬೇಕೆಂದು ಕಾಲೇಜು ಶಿಕ್ಷಣ ನಿರ್ದೇಶಕರು ಸುತ್ತೋಲೆ ಹೊರಡಿಸಿದ್ದಾರೆ.

ಸಿಸಿ ಕ್ಯಾಮಾರಾ ಅಳವಡಿಕೆಗೆ ವಿದ್ಯಾರ್ಥಿಗಳಿಂದ ಸಂಗ್ರಹವಾಗಿ ಬಳಕೆಯಾಗದೇ ಉಳಿತಾಯವಾಗಿರುವ ಹಣವನ್ನು ಬಳಸಿಕೊಳ್ಳುವಂತೆ ಅವರು ಸೂಚಿಸಿದ್ದಾರೆ.

ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಮಾದಕ ದ್ರವ್ಯಗಳ ವ್ಯಸನಕ್ಕೆ ತುತ್ತಾಗುತ್ತಿರುವುದು, ರ್‍ಯಾಗಿಂಗ್ ಹಾಗೂ ಲೈಂಗಿಕ ದೌರ್ಜನ್ಯ ಪ್ರಕರಣಗಳು ಭಾಗಿಯಾಗಿರುವ ಕುರಿತು ವರದಿಯಾಗುತ್ತಿವೆ. ಈ ಕುರಿತು ಪತ್ರಿಕೆಗಳಲ್ಲಿ ವರದಿಯಾಗುತ್ತಿವೆ. ಈ ಹಿನ್ನಲೆಯಲ್ಲಿ ರಾಜ್ಯ ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಶೈಕ್ಷಣಿಕ ಸಂಸ್ಥೆಗಳು, ಸರ್ಕಾರಿ, ಅನುದಾನಿತ, ಖಾಸಗಿ ಕಾಲೇಜುಗಳು ಮತ್ತು ವಿವಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಸುರಕ್ಷತೆ ದೃಷ್ಟಿಯಿಂದ ಸಿಸಿ ಕ್ಯಾಮಾರಾ ಅಳವಡಿಸಲು ನಿಯಮಾನುಸಾರ ಕ್ರಮವಹಿಸುವಂತೆ ಲೋಕಾ ಯುಕ್ತರು ಶಿಫಾರಸ್ಸು ಮಾಡಿದ್ದರು. ಇದರನ್ವಯ ಕಾಲೇಜುಗಳಲ್ಲಿ ಸಿಸಿ ಕ್ಯಾಮಾರಾ ಅಳವಡಿಸುವಂತೆ ಕಾಲೇಜು ಶಿಕ್ಷಣ ಇಲಾಖೆ ಸುತ್ತೋಲೆ ಹೊರಡಿಸಿದೆ.

ಬಾಲಿವುಡ್ ಹಿರಿಯ ನಟ, ನಿರ್ಮಾಪಕ ಧೀರಜ್‌ಕುಮಾರ್ ನಿಧನ



ಮುಂಬೈ: ಬಾಲಿವುಡ್ ಹಿರಿಯ ನಟ, ನಿರ್ದೇಶಕ ಮತ್ತು ದೂರದರ್ಶನ ನಿರ್ಮಾಪಕ ಧೀರಜ್ ಕುಮಾರ್ ಅವರು ಮಂಗಳವಾರ ಮುಂಬೈನಲ್ಲಿ ನಿಧನರಾಗಿದ್ದು, ಅವರಿಗೆ 79 ವರ್ಷ ವಯಸ್ಸಾಗಿತ್ತು.

1965 ರಲ್ಲಿ ಚಿತ್ರೋದ್ಯಮದಲ್ಲಿ ತಮ್ಮ ವೃತ್ತಿ ಜೀವನ ಆರಂಭಿಸಿದ ಧೀರಜ್ ಕುಮಾರ್ ಅವರು ಹಿಂದಿ ಸಿನಿಮಾ ಮಾತ್ರವಲ್ಲದೆ ಪಂಜಾಬಿ ಚಿತ್ರಗಳಲ್ಲೂ ಅಭಿನಯಿಸಿದ್ದರು. 1970 ಮತ್ತು 1984 ರ ನಡುವೆ 21ಕ್ಕೂ ಹೆಚ್ಚು ಪಂಜಾಬಿ ಚಲನಚಿತ್ರಗಳಲ್ಲಿ ನಟಿಸಿದ್ದಾರೆ. ಹಿಂದಿ ಚಿತ್ರರಂಗದಲ್ಲಿ, ಧೀರಜ್ ಅವರು ಸ್ವಾಮಿ, ಹೀರಾ ಪನ್ನಾ, ರಾತೋಂ ಕಾ ರಾಜಾ, ರೋಟಿ ಕಪ್ಡಾ ಔರ್ ಮಕಾನ್ ಮತ್ತು ಇತರ ಹಲವು ಸಿನಿಮಾಗಳಲ್ಲಿ ಅಭಿನಯಿಸಿದ್ದಾರೆ. ನಟನೆಯ ಜೊತೆಗೆ ಕುಮಾರ್ ದೂರದರ್ಶನದಲ್ಲೂ ತಮ್ಮ ಛಾಪು ಮೂಡಿಸಿದ್ದ ಧೀರಜ್ ಕುಮಾರ್ ಅವರು ಕ್ರಿಯೇಟಿವ್ ಐ ಎಂಬ ನಿರ್ಮಾಣ ಸಂಸ್ಥೆಯನ್ನು ಸ್ಥಾಪಿಸಿದ್ದರು. ಇದು ಓಂ ನಮಃ ಶಿವಾಯ ಸೇರಿದಂತೆ ಹಲವು ಪೌರಾಣಿಕ ಮತ್ತು ಆಧ್ಯಾತ್ಮಿಕ ಟಿವಿ ಕಾರ್ಯಕ್ರಮಗಳನ್ನು ನಿರ್ಮಿಸಿದೆ.

ಉರಗ ಸಂರಕ್ಷಕ ಸ್ನೇಕ್ ಶ್ಯಾಮ್‌ಗೆ ಸನ್ಮಾನ

ಹಾವುಗಳ ಬಗ್ಗೆ ಆತಂಕ ಬೇಡ, ಅರಿವಿರಲಿ: ಮಕ್ಕಳಿಗೆ ಕಿವಿಮಾತು

ಮೈಸೂರು, ಜು.16(ವಿವಿಹೆಚ್)– ಹಾವುಗಳ ಬಗೆಗಿನ ತಪ್ಪು ಕಲ್ಪನೆಯಿಂದಾಗಿ, ಅವುಗಳ ಮೇಲಿನ ಭಯದಿಂದ ಹಾವುಗಳನ್ನು ಕೊಲ್ಲಲಾಗುತ್ತಿದೆ. ಎಲ್ಲಾ ಹಾವುಗಳು ವಿಷಕಾರಿಯಲ್ಲ. ಅವುಗಳನ್ನು ಸುಖಾಸುಮ್ಮನೆ ಕೊಲ್ಲುವ ಮುನ್ನಾ, ಅವುಗಳ ಬಗ್ಗೆ ಅರಿವು ಹೊಂದಬೇಕು ಎಂದು ಉರಗ ಸಂರಕ್ಷಕ ಸ್ನೇಕ್ ಶ್ಯಾಮ್ ಅಭಿಪ್ರಾಯಪಟ್ಟರು.

ನಗರದ ತ್ಯಾಗರಾಜ ರಸ್ತೆಯಲ್ಲಿರುವ ಅಕ್ಕನ ಬಳಗ ಶಾಲೆಯಲ್ಲಿ ಕೆಎಂಪಿಕೆ ಚಾರಿಟೇಬಲ್ ಟ್ರಸ್ಟ್ ಆಶ್ರಯದಲ್ಲಿ ಹಾವುಗಳ ದಿನದ ಅಂಗವಾಗಿ ತಮಗೆ ಆಯೋಜಿಸಲಾಗಿದ್ದ ಅಭಿನಂದನಾ ಕಾರ್ಯಕ್ರಮದಲ್ಲಿ ಮಕ್ಕಳಿಗೆ ಹಾವುಗಳ ಬಗ್ಗೆ ಜಾಗೃತಿ ಮೂಡಿಸಿದರು.

ನಮ್ಮ ದೇಶದಲ್ಲಿ ಸುಮಾರು 275ಕ್ಕೂ ಅಧಿಕ ಜಾತಿಯ ಹಾವುಗಳಿವೆ. ಆದರೆ ಅವುಗಳಲ್ಲಿ ಕೇವಲ ನಾಲ್ಕು ಜಾತಿಯ ಹಾವುಗಳು ಮಾತ್ರ ವಿಷಕಾರಿಯಾಗಿವೆ. ಹಾವು ಕಚ್ಚಿದರೆ ಅನಗತ್ಯ ಭಯ ಪಡದೇ ಹತ್ತಿರದ ಆಸ್ಪತ್ರೆಗೆ ಭೇಟಿ ನೀಡಿ ತಕ್ಷಣ ಚಿಕಿತ್ಸೆ ಪಡೆಯಬೇಕು. ಹಾವು ಕಚ್ಚಿದಾಗ ಬಹುತೇಕ ಜನರು ಭಯಭೀತರಾಗಿ ಹೃದಯಾಘಾತದಿಂದ ಸಾವನ್ನಪ್ಪುತ್ತಾರೆ.


ಕೆಎಂಪಿಕೆ ಚಾರಿಟೇಬಲ್ ಟ್ರಸ್ಟ್ ಆಶ್ರಯದಲ್ಲಿ ಹಾವುಗಳ ದಿನದ ಅಂಗವಾಗಿ ಆಯೋಜಿಸಲಾಗಿದ್ದ ಅಭಿನಂದನಾ ಕಾರ್ಯಕ್ರಮದಲ್ಲಿ ಉರಗ ಸಂರಕ್ಷಕ ಸ್ನೇಕ್ ಶ್ಯಾಮ್ ಅವರನ್ನು ಗೌರವಿಸಲಾಯಿತು.

ಹೀಗಾಗಿ ಮೊದಲು ಹಾವುಗಳ ಬಗ್ಗೆ ಅರಿವು ಪಡೆದು ಚಿಕಿತ್ಸೆ ಪಡೆಯಬೇಕು ಅನಗತ್ಯವಾಗಿ ಭಯ ಪಡಬಾರದು ಎಂದು ಸಲಹೆ ನೀಡಿದರು. ಇನ್ನು ಹಾವುಗಳ ರಕ್ಷಣೆಗೆ ಅರಣ್ಯ ಇಲಾಖೆ ಮುಂದಾಗಿದ್ದು, ಸಾರ್ವಜನಿಕರು ಸಹಕರಿಸಬೇಕು ಎಂದು ಮನವಿ ಮಾಡಿದರು.

ಹಿರಿಯ ಸಮಾಜಸೇವಕರಾದ ಕೆ.ರಘುರಾಮ್ ವಾಜಪೇಯಿ ಮಾತನಾಡಿ, ಹಾವುಗಳಿಗೆ ನಮ್ಮ ಸನಾತನ ಧರ್ಮದಲ್ಲಿ ದೇವರ ಸ್ಥಾನಮಾನ ನೀಡಿ ಗೌರವಿಸಲಾಗಿದೆ. ಇಂತಹ ಸುಮಾರು 85 ಸಾವಿರಕ್ಕೂ ಅಧಿಕ ಹಾವುಗಳನ್ನು ರಕ್ಷಿಸಿದ ಕೀರ್ತಿ ಸ್ನೇಕ್ ಶ್ಯಾಮ್ ಅವರಿಗೆ ಸಲ್ಲುತ್ತದೆ. ಅತಿಹೆಚ್ಚು ಉರಗಗಳ ರಕ್ಷಣೆ ಮಾಡುವ ಮೂಲಕ ಶ್ಯಾಮ್ ದೇಶ ವಿದೇಶಗಳಲ್ಲಿ ಮೈಸೂರನ್ನು ಗುರುತಿಸುವಂತೆ ಮಾಡಿದ್ದಾರೆ ಎಂದು ಶ್ಲಾಘನೆ ವ್ಯಕ್ತಪಡಿಸಿದರು.

ಕಾಂಗ್ರೆಸ್ ಮುಖಂಡ ಎನ್.ಎಂ.ನವೀನ್ ಕುಮಾರ್ ಮಾತನಾಡಿ, ಶ್ಯಾಮ್ ಅವರು ಹಾವುಗಳನ್ನು ಮಾತ್ರ ರಕ್ಷಿಸದೇ ಅವುಗಳ ಬಗ್ಗೆ ಅರಿವು ಮೂಡಿಸುವ ಕೆಲಸವನ್ನು ಸಹ ಮಾಡುತ್ತಾ ಬರುತ್ತಿದ್ದಾರೆ. ಶ್ಯಾಮ್ ಅವರ ಸಾಮಾಜಿಕ ಕೆಲಸವನ್ನು ಸರ್ಕಾರ ಗುರುತಿಸಿ ಹೆಚ್ಚಿನ ಉತ್ತೇಜನ ನೀಡಬೇಕು. ಜೊತೆಗೆ ಸಣ್ಣಮಕ್ಕಳಲ್ಲಿ ಉರಗ ಮತ್ತು ಪರಿಸರ ಸಂರಕ್ಷಣೆ ಬಗ್ಗೆ ಜಾಗೃತಿ ಮೂಡಿಸುವ ಕೆಲಸ ಮಾಡಬೇಕು ಎಂದು ತಿಳಿಸಿದರು.

ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ ಮಾತನಾಡಿ, ಮನುಷ್ಯನಿಗೆ ಯಾವುದೇ ಪ್ರಾಣಿಯನ್ನು ಕೊಲ್ಲುವ, ನೋಯಿಸುವ ಅಧಿಕಾರವಿಲ್ಲ. ಸಾಧ್ಯವಾದಷ್ಟು ನಮ್ಮ ಪರಿಸರ, ಪ್ರಾಣಿ–ಪಕ್ಷಿಗಳನ್ನು ರಕ್ಷಿಸುವ ಕೆಲಸ ಆಗಬೇಕು. ಪರಿಸರ ಸಂರಕ್ಷಣೆ ಬಗ್ಗೆ ಮಕ್ಕಳಿಗೆ ಜ್ಞಾನ ತುಂಬುವ ಕೆಲಸ ಆಗಬೇಕು ಎಂದು ಅವರು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಜೀವಧಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಶಾಲೆಯ ಮುಖ್ಯ ಶಿಕ್ಷಕಿ ಸುಗುಣಾವತಿ, ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಮ ಅಯ್ಯಂಗಾರ್, ಜಿ ರಾಘವೇಂದ್ರ, ಕರುಣಾಮಯಿ ಟ್ರಸ್ಟ್ ಅಧ್ಯಕ್ಷ ಎಸ್.ಎನ್.ರಾಜೇಶ್, ಶ್ರೀನಿವಾಸ್, ಪ್ರವೀಣ್ ಕುಮಾರ್, ರಾಕೇಶ್ ಸೇರಿದಂತೆ ಇತರರು ಭಾಗವಹಿಸಿದ್ದರು.

ಮೈಸೂರು ಮಿತ್ರ ಗುರುವಾರ 17 ಜುಲೈ 2025

ಚೆಲುವನ ವೈಭವದ ಕೃಷ್ಣರಾಜಮುಡಿ ಬ್ರಹ್ಮೋತ್ಸವ

ಶ್ರೀಕೃಷ್ಣರಾಜಮುಡಿ ಕಿರೀಟದೊಂದಿಗೆ ಕಂಗೊಳಿಸಿದ ಶ್ರೀದೇವಿ ಭೂದೇವಿ ಸಮೇತ ಶ್ರೀಚೆಲುವನಾರಾಯಣಸ್ವಾಮಿ

ಮೇಲುಕೋಟೆ, ಜು.16– ಆಷಾಡ ಜಾತ್ರಾ ಮಹೋತ್ಸವದ ಕೃಷ್ಣರಾಜಮುಡಿ ಬ್ರಹ್ಮೋತ್ಸವದ 4ನೇ ತಿರುನಾಳ್ ದಿನವಾದ ಬುಧವಾರ ರಾತ್ರಿ ಮೈಸೂರು ಸಂಸ್ಥಾನದ ಕುಲದೈವ ಶ್ರೀಚೆಲುವನಾರಾಯಣಸ್ವಾಮಿ ಅವರಿಗೆ ಶ್ರೀಕೃಷ್ಣರಾಜಮುಡಿ ಕಿರೀಟಧಾರಣ ಮಹೋತ್ಸವ ವೈಭವದಿಂದ ನೆರವೇರಿತು.

ರಾತ್ರಿ 7.30ಕ್ಕೆ ಗಂಡು ಬೇರುಂಡ ರೂಪಿಯಾದ ಅರ್ಧಚಂದ್ರ ಪ್ರಭಾವಳಿಯಲ್ಲಿ ಶ್ರೀದೇವಿ ಭೂದೇವಿ ಸಮೇತನಾಗಿ ಗರುಡಾರೂಢನಾದ ಚೆಲುವನಾರಾಯಣಸ್ವಾಮಿಗೆ ವಜ್ರಖಚಿತ ಕೃಷ್ಣರಾಜಮುಡಿ ಕಿರೀಟ ಮತ್ತು ರಾಜಲಾಂಛನ ಗಂಡು ಬೇರುಂಡ ಪದಕ ತೊಡಿಸಿ ಮಹಾಮಂಗಳಾರತಿ ನೆರವೇರಿಸಿ ವೈಭವದಿಂದ ತಿರುವೀದಿಗಳಲ್ಲಿ ಉತ್ಸವ ನೆರವೇರಿಸಲಾಯಿತು.



ಮೇಲುಕೋಟೆಯಲ್ಲಿ ಬುಧವಾರ ರಾತ್ರಿ ಕೃಷ್ಣರಾಜಮುಡಿ ಉತ್ಸವ ವಿಜೃಂಭಣೆಯಿಂದ ನಡೆಯಿತು.

ಪರ್ಕಾವಣೆ: ಜಿಲ್ಲಾ ಖಜಾನೆಯಿಂದ ಬಿಗಿ ಪೊಲೀಸ್ ಭದ್ರತೆಯೊಂದಿಗೆ ತಂದ ಶ್ರೀಕೃಷ್ಣರಾಜಮುಡಿ ತಿರುವಾಭರಣ ಪೆಟ್ಟಿಗೆಯನ್ನು ಪಾಂಡವಪುರ ಉಪವಿಭಾಗಾಧಿಕಾರಿ ಶ್ರೀನಿವಾಸ್ ಸಮಕ್ಷಮ ಮುಮ್ಮಡಿ ಶ್ರೀಕೃಷ್ಣರಾಜ ಒಡೆಯರ್ ಮಂಟಪದಲ್ಲಿ ಪಾರ್ಕಾವಣೆ ಮಾಡಿ ಸ್ಥಾನೀಕರು, ಅರ್ಚಕ ಪರಿಚಾರಕರ ವಶಕ್ಕೆ ನೀಡಲಾಯಿತು. ಬಳಿಕ ಗರುಡದೇವನ ಉತ್ಸವದ ನಂತರ ಮಹಾಮಂಗಳಾರತಿ ನೆರವೇರಿಸಿ ಉತ್ಸವ ಆರಂಭಿಸಲಾಯಿತು.

ದಿವ್ಯ ಪ್ರಬಂಧ ಪಾರಾಯಣ ಹಾಗೂ ಮಂಗಳವಾದ್ಯದೊಂದಿಗೆ ರಾಜಬೀದಿಯಲ್ಲಿ ಕೃಷ್ಣರಾಜಮುಡಿ ಉತ್ಸವ ವಿಜೃಂಭಣೆಯಿಂದ ನೆರವೇರಿತು. ನಂತರ ದೇವಾಲಯದಲ್ಲಿ ಪಡಿಯೇತ್ತ ಕಾರ್ಯಕ್ರಮಗಳು ವಿಧಿ ವಿಧಾನದಲ್ಲಿ ನಡೆಯಿತು. ಅಲ್ಲದೇ ರಾತ್ರಿ 10 ಗಂಟೆವರೆಗೆ ನಡೆದ ಉತ್ಸವ ನೆರೆದಿದ್ದ ಭಕ್ತರ ಮನಸೂರೆಗೊಂಡಿತು. ಉಪವಿಭಾಗಾಧಿಕಾರಿ ಶ್ರೀನಿವಾಸ್, ದೇವಾಲಯದ ಇಓ ಶೀಲಾ, ಪಾರುಪತ್ತೇಗಾರರಾದ ಸ್ಥಾನಾಚಾರ್ಯ ಶ್ರೀನಿವಾಸನರಸಿಂಹನ್ ಗುರೂಜಿ ಮತ್ತು ಎಂ.ಎನ್.ಪಾರ್ಥಸಾರಥಿ ಸೇರಿದಂತೆ ನೂರಾರು ಭಕ್ತರು ಭಾಗವಹಿಸಿದ್ದರು.

ಸರಳ ದೀಪಾಲಂಕಾರ

ಮೈಸೂರು ಅರಸರ ಹೆಸರಲ್ಲಿ 10 ದಿನಗಳ ಕಾಲ ನಡೆಯುವ ಬ್ರಹ್ಮೋತ್ಸವ ಅಂಗವಾಗಿ ದೇವಾಲಯದ ರಾಜಗೋಪುರ ಹಾಗೂ ರಾಜಬೀದಿಗೆ ಈ ವರ್ಷ ಶಾಸಕ ದರ್ಶನ್ ಸೂಚನೆ ಹಾಗೂ ಜಿಲ್ಲಾಧಿಕಾರಿಗಳ ಕಚೇರಿ ಮುಜರಾಯಿ ತಹಸೀಲ್ದಾರ್ ತಮ್ಮೇಗೌಡರ ಸೂಚನೆಯಂತೆ ದೇವಾಲಯದ ವತಿಯಿಂದ ಇಓ ಶೀಲಾ ಸರಳ ದೀಪಾಲಂಕಾರ ಮಾಡಿದ್ದರು. ಮಹಾರಾಜರ ಹೆಸರಿನ ಬ್ರಹ್ಮೋತ್ಸವವನ್ನು ಅಚ್ಚುಕಟ್ಟಾಗಿ ನಡೆಸಲು ದೇವಾಲಯದ ಅಧಿಕಾರಿಗಳು 2 ತಿಂಗಳ ಮೊದಲೇ ಯೋಜನೆ ರೂಪಿಸಿ ಸರ್ಕಾರ ಹಾಗೂ ದಾನಿಗಳ ಸಹಕಾರದಲ್ಲಿ ವೈಭವದ ಉತ್ಸವ ನಡೆಸಬೇಕು ಎಂಬ ಮನವಿ ಭಕ್ತರಿಂದ ಕೇಳಿಬಂತು.

ವಜ್ರ ಕಿರೀಟದ ಕಣ್ತುಂಬಿಕೊಂಡ ಭಕ್ತರು: ಮೈಸೂರು ಅರಸ ಮುಮ್ಮಡಿ ಕೃಷ್ಣರಾಜ ಒಡೆಯರ್ ತಮ್ಮ ಮನೆ ದೇವರು ಶ್ರೀ ಚೆಲುವನಾರಾಯಣಸ್ವಾಮಿಗೆ ಭಕ್ತಿಯಿಂದ ಅರ್ಪಿಸಿರುವ ಕೆಂಪು, ಬಿಳಿ ವಜ್ರದ ಪಚ್ಚೆ ಮಣಿಯ ಸಿಂಹಲಾಂಛನವುಳ್ಳ ಕೃಷ್ಣರಾಜ ಮುಡಿ ಮತ್ತು ಗಂಡು ಬೇರುಂಡ ಪದಕವನ್ನು ನೆರೆದಿದ್ದ ಸಾವಿರಾರು ಭಕ್ತರು ಕಣ್ತುಂಬಿಕೊಂಡರು.

ಜಿಲ್ಲಾ ಖಜಾನೆಯಿಂದ ಶ್ರೀಕೃಷ್ಣ ರಾಜಮುಡಿ ತಿರುವಾಭರಣ ಪೆಟ್ಟಿಗೆಯನ್ನು ಶಿವಳ್ಳಿ ಮಾರ್ಗವಾಗಿ ಮೇಲುಕೋಟೆಗೆ ತಂದು ವೀರಾಂಜನೇಯಸ್ವಾಮಿ ಗುಡಿಯಲ್ಲಿ ವಿಶೇಷವಾಗಿ ಪೂಜೆ ಸಲ್ಲಿಸಿ. ಪಲ್ಲಕ್ಕಿಯಲ್ಲಿಟ್ಟು ಶ್ವೇತಛತ್ರಿ ಮತ್ತು ಮಂಗಳವಾದ್ಯದೊಂದಿಗೆ ದೇವಾಲಯಕ್ಕೆ ಮೆರವಣಿಗೆ ಮೂಲಕ ತರಲಾಯಿತು. ಕೃಷ್ಣರಾಜಮುಡಿ ಕಿರೀಟ ಜು.21ರವರೆಗೆ ಪ್ರತಿದಿನ ಸಂಜೆ ವಿವಿಧ ಉತ್ಸವದಲ್ಲಿ ಚೆಲುವನಾರಾಯಣಸ್ವಾಮಿಯನ್ನು ಅಲಂಕರಿಸಲಿದೆ. ಮುಮ್ಮಡಿ ಕೃಷ್ಣರಾಜ ಒಡೆಯರು 18ನೇ ಶತಮಾನದಲ್ಲಿ ಆರಂಭಿಸಿದ ಈ ಬ್ರಹ್ಮೋತ್ಸವ ಅನುಚಾನವಾಗಿ ನಡೆಯುತ್ತಾ ಬಂದಿದ್ದು ಈ ವರ್ಷವೂ ಆಡಂಭರವಿಲ್ಲದೇ ಸರಳವಾಗಿ ನೆರವೇರಿತು.

ಕೆ.ಆರ್.ಪೇಟೆ: ಟ್ರಾಕ್ಟರ್ ಹರಿದು ವ್ಯಕ್ತಿ ಸಾವು



ಕೆ.ಆರ್.ಪೇಟೆ, ಜು.16– ಟ್ರಾಕ್ಟರ್ ಹಿಮ್ಮುಖವಾಗಿ ಚಲಿಸಿ ವ್ಯಕ್ತಿ ಮೇಲೆ ಹರಿದ ಪರಿಣಾಮ ಆತ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಪಟ್ಟಣದ ಮೈಸೂರು ರಸ್ತೆಯ ಎಪಿಎಂಸಿ ಮಾರುಕಟ್ಟೆ ಎದುರು ನಡೆದಿದೆ.

ಪಟ್ಟಣದ ಅಗ್ರಹಾರ ಬಡಾವಣೆ ನಿವಾಸಿ, ಹಣ್ಣಿನ ವ್ಯಾಪಾರಿ ಶ್ರೀನಿವಾಸ್ ಅವರ ಪುತ್ರ ಪ್ರವೀಣ್(34) ಸ್ಥಳದಲ್ಲೇ ಸಾವನ್ನಪ್ಪಿದವರು. ಈತ ಮಾರುಕಟ್ಟೆಯ ರಸ್ತೆ ಬಳಿ ನಿಂತಿದ್ದರು. ಈ ವೇಳೆ ಸೆಂಟ್ರಿಂಗ್ ಸಾಮಗ್ರಿಗಳನ್ನು ತುಂಬಿಕೊಂಡು ಕೆ.ಆರ್.ಪೇಟೆ ಕಡೆಗೆ ಹೋಗುತ್ತಿದ್ದ ಟ್ರಾಕ್ಟರ್ ಚಾಲಕನ ನಿಯಂತ್ರಣ ತಪ್ಪಿ ಹಿಮ್ಮುಖವಾಗಿ ಚಲಿಸಿ ಡಿಕ್ಕಿ ಹೊಡೆದಿದೆ. ಬಳಿಕ ಕೆಳಗೆ ಬಿದ್ದ ಪ್ರವೀಣನ ಮೇಲೆ ಹರಿದು ಆತ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಕೆ.ಆರ್.ಪೇಟೆ ಠಾಣೆ ಪೊಲೀಸರು ಪರಿಶೀಲನೆ ನಡೆಸಿ ಶವವನ್ನು ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ರವಾನಿಸಿ ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಒಪ್ಪಿಸಿದರು. ಟ್ರಾಕ್ಟರ್ ವಶಪಡಿಸಿಕೊಂಡಿರುವ ಪಟ್ಟಣ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಇಂದು ನೇರ ಸಂದರ್ಶನ

ಮಂಡ್ಯ, ಜು.16– ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ಹಾಗೂ ಮೆ.ಪ್ಯಾಲೆಸ್ ಟೊಯೋಟಾ ಮೆ.ಕೋಲ್‌ಮನ್ ಸರ್ವಿಸಸ್, ಮೆ. ಹೆಚ್‌ಡಿಬಿ ಫೈನಾನ್ಸ್ ಸರ್ವಿಸಸ್ ಲಿಮಿಟೆಡ್, ಮೆ.ಕ್ರೆಡಿಟ್ ಗ್ರಾಮೀಣ್ ಆಕ್ಸಿಸ್ ಬ್ಯಾಂಕ್ ಮತ್ತು ಮೆ.ಇಂಡಿಯಾ ಲಿಟ್ರೆಸಿ ಪ್ರೋಜೆಕ್ಟ್ ಸಂಸ್ಥೆಯವರು ತಮ್ಮ ಸಂಸ್ಥೆಯಲ್ಲಿ ಖಾಲಿ ಇರುವ "ಟೆಕ್ನಿಷಿಯನ್, ಇನ್ಶೂರೆನ್ಸ್ ಎಕ್ಸಿಕ್ಯೂಟಿವ್, ಫೀಲ್ಡ್ ಎಕ್ಸಿಕ್ಯೂಟಿವ್, ಸೇಲ್ಸ್ ಎಕ್ಸಿಕ್ಯೂಟಿವ್, ರಿಲೇಷನ್‌ಶಿಪ್ ಆಫೀಸರ್ಸ್ ಮತ್ತು ಟೆಕ್ನಿಕಲ್ ಫೆಸಿಲಿಟೇಟರ್" ಹುದ್ದೆಗಳಿಗಾಗಿ ನೇರ ಸಂದರ್ಶನ ನಡೆಲಿದ್ದಾರೆ.

ಎಸ್‌ಎಸ್‌ಎಲ್‌ಸಿ, ಪಿಯುಸಿ, ಐಟಿಐ ಹಾಗೂ ಯಾವುದೇ ಪದವಿ ಉತ್ತೀರ್ಣರಾಗಿರುವ ಆಸಕ್ತ ಅಭ್ಯರ್ಥಿಗಳು ಜು.17 ರಂದು ಬೆಳಗ್ಗೆ 10 ಗಂಟೆಗೆ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ಬಯೋಡೇಟಾದೊಂದಿಗೆ ನೇರ ಸಂದರ್ಶನಕ್ಕೆ ಹಾಜರಾಗಿ ಉದ್ಯೋಗ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗೆ ದೂ: 08232–295124, 9164642684 ಸಂಪರ್ಕಿಸಬಹುದಾಗಿದೆ

ಜು.19ಕ್ಕೆ, 'ಸೌರಶಕ್ತಿ–ಸ್ವ ಉದ್ಯೋಗ ಮೇಳ: ಶಾಸಕ ದರ್ಶನ್

ಮಂಡ್ಯ, ಜು.16– ಸೆಲ್ಕೊ ಫೌಂಡೇಶನ್ ಮತ್ತು ಪುಟ್ಟಣ್ಣಯ್ಯ ಫೌಂಡೇಶನ್ ಹಾಗೂ ಸರ್ಕಾರಿ ಇಲಾಖೆಗಳ ಸಹಯೋಗದೊಂದಿಗೆ 'ಸೌರಶಕ್ತಿ–ಸ್ವ ಉದ್ಯೋಗ ಮೇಳ' ವನ್ನು ಜು.19ರಂದು ಬೆಳಗ್ಗೆ 10.30ಕ್ಕೆ ಪಾಂಡವಪುರ ಟಿಎಪಿಸಿಎಂಎಸ್ ರೈತ ಭವನದಲ್ಲಿ ಆಯೋಜಿಸಲಾಗಿದೆ ಎಂದು ಶಾಸಕ ದರ್ಶನ್ ಪುಟ್ಟಣ್ಣಯ್ಯ ತಿಳಿಸಿದರು.



ಸುದ್ದಿಗೋಷ್ಠಿಯಲ್ಲಿ ಶಾಸಕ ದರ್ಶನ್ ಮಾತನಾಡಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ರಾಷ್ಟ್ರದ ಜಿಡಿಪಿಗೆ ಕೃಷಿ ಕ್ಷೇತ್ರ ಶೇ.45ರಷ್ಟು ಕೊಡುಗೆ ನೀಡುತ್ತಿದೆ. ಅಲ್ಲದೇ ಕೃಷಿಯಲ್ಲಿ ಶೇ.60ರಷ್ಟು ಮಹಿಳೆಯರೇ ತೊಡಗಿದ್ದು, ಕೃಷಿ ಜೊತೆಗೆ ಬಿಡುವಿನ ವೇಳೆ ಸ್ವ ಉದ್ಯೋಗ ರೂಪಿಸಿಕೊಳ್ಳಲು ಸದರಿ ಕಾರ್ಯಕ್ರಮ ಪ್ರೋತ್ಸಾಹಿಸುತ್ತದೆ ಎಂದರು.

ಸ್ವ ಸಹಾಯ ಸಂಘಗಳು ಹಾಗೂ ಗುಂಪುಗಳನ್ನು ಒಂದೆಡೆ ಸೇರಿಸಿ ಸ್ತ್ರೀ ಸಬಲೀಕರಣದ ಮೂಲಕ ಹೊಸ ಸಾಧ್ಯತೆಗಳನ್ನು ಒದಗಿಸುವುದು ಕಾರ್ಯಕ್ರಮದ ಉದ್ದೇಶವಾಗಿದ್ದು, ಸ್ವ ಉದ್ಯೋಗ ರೂಪಿಸಿಕೊಳ್ಳಲು ಸೌರವಿದ್ಯುತ್ ಆಧಾರಿತ ಯಂತ್ರಗಳ ಮೂಲಕ ಉತ್ಪನ್ನಗಳನ್ನು ತಯಾರಿಸಿ ಹವಾಮಾನ ಸ್ನೇಹಿ ಜೀವನೋಪಾಯ ಪರಿಹಾರಗಳ ಮೂಲಕ ಸಬಲೀಕರಣಕ್ಕೆ ಉತ್ತೇಜನ ನೀಡಲಾಗುವುದು ಎಂದರು.

ಕಾರ್ಯಕ್ರಮಕ್ಕೆ ಕೃಷಿ ಮತ್ತು ತೋಟಗಾರಿಕೆ ಇಲಾಖೆ, ಎಂಆರ್‌ಎಲ್‌ಎಂ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಹಯೋಗವಿದ್ದು, ಸಂವಾದ, ಯಂತ್ರಗಳ ಪ್ರಾತ್ಯಕ್ಷಿತೆ, ಮಾದರಿ ಪ್ರಯೋಗಗಳ ಪ್ರದರ್ಶನ ನೀಡಲು 16 ಮಳಿಗೆಗಳನ್ನು ರೂಪಿಸಲಾಗಿದೆ ಎಂದರು.

ಜಿಪಂ ಸಿಇಓ ಕೆ.ಆರ್.ನಂದಿನಿ, ಸೆಲ್ಕೋ ಫೌಂಡೇಷನ್ ನಿರ್ದೇಶಕಿ ಹುದಾ ಜಾಫರ್, ಕ.ರಾ. ರೈತ ಸಂಘದ ಜಿಲ್ಲಾಧ್ಯಕ್ಷ ಎ.ಎಲ್. ಕೆಂಪೂಗೌಡ, ಕೃಷಿ ಜಂಟಿ ನಿರ್ದೇಶಕ ವಿ.ಎಸ್. ಅಶೋಕ್, ತೋಟಗಾರಿಕೆ ಇಖಾಖೆ ಉಪ ನಿರ್ದೇಶಕಿ ಕೆ.ಎನ್.ರೂಪಶ್ರೀ, ಮಹಿಳಾ ಮತ್ತು ಮಕ್ಕಳ ಕಲ್ಯಾಣಾಧಿಕಾರಿ ರಾಜ ಮೂರ್ತಿ.ಎಸ್ ಸೇರಿದಂತೆ ಹಲವು ಅಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ ಎಂದರು.

ಸೆಲ್ಕೋ ಫೌಂಡೇಶನ್‌ನ ಪ್ರಕಾಶ್ ಮೇತಿ ಮಾತನಾಡಿ, ಈಗಾಗಲೇ ಉತ್ತರ ಕರ್ನಾಟಕದ 16 ಜಿಲ್ಲೆಗಳಲ್ಲಿ ಸದರಿ ಕಾರ್ಯಕ್ರಮದ ಮೂಲಕ ಕೃಷಿಯಲ್ಲಿ ತೊಡಗಿಕೊಂಡ ಮಹಿಳೆಯರಿಗೆ ಸ್ವ ಉದ್ಯೋಗ ರೂಪಿಸಿ ಕೊಡಲಾಗಿದ್ದು, ಸದರಿ ಸ್ವ ಉದ್ಯೋಗ ಆಯ್ಕೆ ಮಾಡಿಕೊಳ್ಳುವ ಮಹಿಳೆಯರಿಗೆ ಯಂತ್ರಗಳ ಅಳವಡಿಕೆ, ಬಳಕೆಗೆ ಸಂಸ್ಥೆಯಿಂದ ನೆರವು ನೀಡಲಾಗುವುದು. ಹಣಕಾಸಿನ ವಿಷಯವಾಗಿ ಕೇಂದ್ರ ಸರ್ಕಾರದಿಂದ ಶೇ.35ರಷ್ಟು, ರಾಜ್ಯ ಸರ್ಕಾರದಿಂದ ಶೇ.15ರಷ್ಟು ಸೇರಿ ಒಟ್ಟು ಶೇ.50ರಷ್ಟು ಸೌರ ವಿದ್ಯುತ್ ಸೌಲಭ್ಯಕ್ಕೆ ಸಬ್ಸಿಡಿ ದೊರೆಯಲಿದೆ. ಕಾರ್ಯಕ್ರಮದಲ್ಲಿ 800ಕ್ಕೂ ಹೆಚ್ಚು ಸ್ವಸಹಾಯ ಗುಂಪುಗಳ ಸದಸ್ಯರು ಪಾಲ್ಗೊಳ್ಳುವ ನಿರೀಕ್ಷೆ ಇದೆ ಎಂದು ಮಾಹಿತಿ ನೀಡಿದರು.

ಸೌರಶಕ್ತಿ ಅಳವಡಿಕೆ ಹಾಗೂ ಯಂತ್ರಗಳ ಕುರಿತು ಮಾಹಿತಿಗಾಗಿ solutionsportal.org ವೆಬ್‌ಸೈಟ್‌ಗೆ ಭೇಟಿ ನೀಡುವಂತೆ ಮನವಿ ಮಾಡಿದರು. ಗೋಷ್ಠಿಯಲ್ಲಿ ಪುಟ್ಟಣ್ಣಯ್ಯ ಫೌಂಡೇಶನ್ ರಂಜಿತ್ ಉಪಸ್ಥಿತರಿದ್ದರು.

ಡಿಂಕಾ ಹಾಲು ಒಕ್ಕೂಟ ರಾಜ್ಯಕ್ಕೆ ಮಾದರಿ

ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಬಣ್ಣನೆ

ಪಾಂಡವಪುರ, ಜು.16– ಡಿಂಕಾ ಹಾಲು ಉತ್ಪಾದಕರ ಸಹಕಾರ ಸಂಘ ರಾಜ್ಯಕ್ಕೆ ಮಾದರಿ ಸಂಘವಾಗಿದ್ದು, ಇಲ್ಲಿನ ಮಂಗಳಮ್ಮ ಎಂಬ ರೈತ ಮಹಿಳೆ ದಕ್ಷಿಣ ಭಾರತದಲ್ಲಿಯೇ ಅಧಿಕ ಹಾಲು ಉತ್ಪಾದನೆ ಮಾಡುವ ಮೂಲಕ ಸಂಘದ ಕೀರ್ತಿ ಹೆಚ್ಚಿಸಿದ್ದಾರೆ ಎಂದು ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಬಣ್ಣಿಸಿದರು.

ತಾಲೂಕಿನ ಡಿಂಕಾ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಡಿ.ಈ.ಕಲಿಗಣೇಶ್ ಅಧ್ಯಕ್ಷತೆಯಲ್ಲಿ ನಡೆದ 2024–25ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಅವರು ಮಾತನಾಡಿದರು.



ವಾರ್ಷಿಕ ಮಹಾಸಭೆಯನ್ನು ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಉದ್ಘಾಟಿಸಿದರು.

ಡಿಂಕಾ ಹಾಲು ಉತ್ಪಾದಕರ ಸಂಘ ಅಧಿಕ ಹಾಲು ಉತ್ಪಾದನೆ ಮಾಡುವ ಜೊತೆಗೆ ಉತ್ತಮ ಆರ್ಥಿಕ ವಹಿವಾಟಿನೊಂದಿಗೆ ಲಾಭದಾಯಕವಾಗಿ ಮುನ್ನಡೆಯುತ್ತಿದ್ದು, ಉತ್ಪಾದಕರಿಗೆ ಬೋನಸ್ ಸಹ ವಿತರಣೆ ಮಾಡುತ್ತಿದೆ ಎಂದರು.

ಮನ್‌ಮುಲ್ ಒಕ್ಕೂಟವು ಹಾಲು ಉತ್ಪಾದನೆಯಲ್ಲಿ ರಾಜ್ಯಕ್ಕೆ 3ನೇ ಸ್ಥಾನದಲ್ಲಿದೆ. ಜೊತೆಗೆ ಇತ್ತೀಚಿನ ದಿನಗಳಲ್ಲಿ ಒಕ್ಕೂಟಕ್ಕೆ ಅಧಿಕ ಹಾಲು ಪೂರೈಕೆಯಾಗುತ್ತಿದೆ. ಸಂಘಗಳಲ್ಲಿ ಉತ್ಪಾದಕರಿಗೆ ಹಾಲಿನ ಬೆಣ್ಣೆ ಅಂಶದ ಆಧಾರದ ಮೇಲೆ ಉತ್ಪಾದಕರಿಗೆ ಹಣ ನೀಡಬೇಕು ಎಂದರು.

ಮನ್‌ಮುಲ್ ನಿರ್ದೇಶಕನಾಗಿ ಆಯ್ಕೆಯಾದ ಬಳಿಕ ತಾಲೂಕಿನ 70–60 ಡೇರಿಗಳಿಗೆ ಭೇಟಿ ಕೊಟ್ಟು ಅಲ್ಲಿನ ಸ್ಥಿತಿಗತಿಗಳನ್ನು ಅವಲೋಕನ ಮಾಡಿದ್ದೇನೆ. ಮುಂದಿನ ದಿನಗಳಲ್ಲಿ ಒಕ್ಕೂಟದಿಂದ ದೊರೆಯುವ ಎಲ್ಲಾ ಸೌಲಭ್ಯಗಳನ್ನು ಸಂಘಗಳಿಗೆ ಒದಗಿಸಿಕೊಡುವ ಪ್ರಯತ್ನ ನಡೆಸಲಾಗುವುದು ಎಂದರು.

ಉಪ ವ್ಯವಸ್ಥಾಪಕ ಆರ್.ಪ್ರಸಾದ್ ಮಾತನಾಡಿ, ಕಡ್ಡಾಯವಾಗಿ ಎಲ್ಲಾ ಡೇರಿಗಳು ಕಾಮನ್ ಸಾಫ್ಟ್‌ವೇರ್ ಯಂತ್ರವನ್ನು ಅಳವಡಿಕೆ ಮಾಡಿಕೊಳ್ಳಬೇಕು. ತಾಲೂಕಿನಲ್ಲಿರುವ 148 ಡೇರಿಗಳ ಪೈಕಿ ಈಗಾಗಲೇ 112 ಡೇರಿಗಳಲ್ಲಿ ಕಾಮನ್ ಸಾಫ್ಟ್‌ವೇರ್ ಅಳವಡಿಸಿಕೊಂಡಿದ್ದಾರೆ. ಜೊತೆಗೆ ಒಕ್ಕೂಟದಿಂದ ಶೀಘ್ರವೇ ಚಾಪಕ್ ಕಟ್ಟರ್, ಹಾಲು ಕರೆಯುವ ತಂತ್ರ, ರಬ್ಬರ್ ಮ್ಯಾಟ್‌ಗಳನ್ನು ವಿತರಣೆ ಮಾಡಲಾಗುವುದು ಎಂದರು.

ಪಶುಸಂಗೋಪನೆ ಸಹಾಯಕ ನಿರ್ದೇಶಕ ಮಹೇಂದ್ರ ಮಾತನಾಡಿದರು. ಅಧಿಕ ಹಾಲು ಪೂರೈಕೆ ಮಾಡಿದ ರೈತ ಮಹಿಳೆ ಮಂಗಳಮ್ಮ, ಮಂಜು, ಡಿ.ಇ.ಮಂಜು ಅವರನ್ನು ಸನ್ಮಾನಿಸಲಾಯಿತು.

ಈ ವೇಳೆ ಡೇರಿ ಅಧ್ಯಕ್ಷ ಡಿ.ಈ.ಕಲಿಗಣೇಶ್, ಉಪಾಧ್ಯಕ್ಷೆ ಸೌಮ್ಯ, ಮಾರ್ಗ ವಿಸ್ತರಣಾಧಿಕಾರಿ ಉಷಾ, ನಾಗೇಂದ್ರ, ನಿರ್ದೇಶಕರಾದ ಗಿರೀಶ್, ಡಿ.ವಿ.ಶಿವಣ್ಣ, ಮಹದೇವಪ್ಪ, ಡಿ.ಎಂ.ಇಂದ್ರೇಶ್, ಶಿವಲಿಂಗಪ್ಪ, ಮಹೇಶ್, ಪ್ರೇಮಮ್ಮ, ಕೃಷ್ಣಶೆಟ್ಟಿ, ಡಿ.ಎಂ.ಪುಟ್ಟೇಗೌಡ, ಶ್ರೀನಿವಾಸಯ್ಯ, ರಮಾದೇವಿ, ಕಾರ್ಯದರ್ಶಿ ಡಿ.ಎಂ.ಶಿವಪ್ಪ, ಪರೀಕ್ಷಕ ಜಿ.ಕೇಶವಾಚಾರ್ ಸೇರಿದಂತೆ ಹಲವರಿದ್ದರು.

ಒಂದನೇ ಪುಟದಿಂದ

ಐವರ ವಿರುದ್ಧ ಎಫ್‌ಐಆರ್

ಮಚ್ಚಿನಿಂದ ಹಲ್ಲೆ ನಡೆಸುತ್ತಿರುವುದನ್ನು ನೋಡಿರುವುದಾಗಿ ಹೇಳಿದ್ದಾರೆ. ಸ್ನೇಹಿತ ಮಧ್ಯಪ್ರವೇಶಿಸಲು ಪ್ರಯತ್ನಿಸಿದಾಗ ಅವರನ್ನೂ ಕಬ್ಬಿಣದ ರಾಡ್‌ನಿಂದ ಹೊಡೆದಿದ್ದಾರೆ. ನಾನು ಕಿರುಚುತ್ತಿದ್ದಂತೆ ಸುತ್ತಮುತ್ತ ಜನರು ಸೇರಿದರು. ಅಪರಿಚಿತ ವ್ಯಕ್ತಿಗಳು ನನ್ನ ಮಗನನ್ನು ಕೊಂದು ಬಿಳಿ ಸ್ಕಾರ್ಪಿಯೋ ವಾಹನ ಮತ್ತು ದ್ವಿಚಕ್ರ ವಾಹನದಲ್ಲಿ ಸ್ಥಳದಿಂದ ಪರಾರಿಯಾಗಿದ್ದಾರೆ. ಆರೋಪಿಗಳನ್ನು ಗುರುತಿಸಬಲ್ಲೆ ಎಂದು ವಿಜಯಲಕ್ಷ್ಮಿ ತಮ್ಮ ದೂರಿನಲ್ಲಿ ತಿಳಿಸಿದ್ದಾರೆ.

ಡಿಸಿಪಿ ದೇವರಾಜ್ ಮತ್ತು ಜಂಟಿ ಆಯುಕ್ತ ರಮೇಶ್ ಬಾನೋತ್ ಸೇರಿದಂತೆ ಉನ್ನತ ಪೊಲೀಸ್ ಅಧಿಕಾರಿಗಳು ಸ್ಥಳ ಪರಿಶೀಲಿಸಿದ್ದಾರೆ. ಶಿವಕುಮಾರ್ ಮೇಲೆ ಹಲವು ಕ್ರಿಮಿನಲ್ ದಾಖಲೆ ಇದ್ದು, 11 ಪ್ರಕರಣಗಳು ದಾಖಲಾಗಿವೆ. 2006ರಲ್ಲಿ ರೌಡಿ ಶೀಟ್ ತೆರೆಯಲಾಗಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

ಪೊಲೀಸರು ಭೈರತಿ ಬಸವರಾಜ್ ಜೊತೆಗೆ ಜಗದೀಶ್, ಕಿರಣ್, ವಿಮಲ್ ಮತ್ತು ಅನಿಲ್ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ಮಾಜಿ ಸಚಿವರನ್ನು ಎಫ್‌ಐಆರ್‌ನಲ್ಲಿ 5ನೇ ಆರೋಪಿಯನ್ನಾಗಿ ಸೇರಿಸಲಾಗಿದೆ. ಫೆ.11ರಂದು ಜಗದೀಶ್ ಮತ್ತು ಕಿರಣ್ ಕಿಟಕ್ನೂರಿನಲ್ಲಿರುವ ಶಿವಪ್ರಕಾಶ್ ಆಸ್ತಿಯನ್ನು ಅತಿ ಕ್ರಮಣ ಮಾಡಿ ಅಲ್ಲಿಂದ ಇಬ್ಬರು ಮಹಿಳಾ ಭದ್ರತಾ ಸಿಬ್ಬಂದಿಯನ್ನು ಹೊರಹಾಕಿದ್ದರು ಎಂದು ಕೂಡ ವಿಜಯಲಕ್ಷ್ಮಿ ಆರೋಪಿಸಿದ್ದಾರೆ. ಆರೋಪಿಗಳು ಅವರಿಗೆ ಫೋನ್‌ನಲ್ಲಿ ಕರೆ ಮಾಡಿ ತಮ್ಮ ಮಗನಿಗೆ ಬೆದರಿಕೆ ಹಾಕುತ್ತಿದ್ದರು ಎಂದು ಆರೋಪಿಸಿದ್ದಾರೆ.

ಬೈರತಿ ಬಸವರಾಜ್ ಪ್ರತಿಕ್ರಿಯೆ: ನನಗೂ ಕೊಲೆಗೂ ಯಾವುದೇ ಸಂಬಂಧವಿಲ್ಲ. ಉದ್ದೇಶಪೂರ್ವಕವಾಗಿ ನನ್ನನ್ನು ಪ್ರಕರಣದಲ್ಲಿ ಸಿಲುಕಿಸಲಾಗಿದೆ ಎಂದು ಮಾಜಿ ಸಚಿವ ಬೈರತಿ ಬಸವರಾಜ್ ಹೇಳಿದ್ದಾರೆ. ಕೊಲೆಯಾದವನು ಮತ್ತು ಕೊಲೆ ಮಾಡಿದ ಆರೋಪಿಗಳು ನನಗೆ ಗೊತ್ತಿಲ್ಲ. ದೂರು ನೀಡಿದವರೂ ಗೊತ್ತಿಲ್ಲ. ಯಾರೋ ಸುಮ್ಮನೆ ದೂರು ನೀಡಿದರೂ ಎಫ್‌ಎಆರ್ ದಾಖಲಿಸಬಹುದೇ ಎಂದು ಪ್ರಶ್ನಿಸಿದರು. ಮಾಧ್ಯಮಗಳಲ್ಲಿ ಸುದ್ದಿ ಪ್ರಕಟವಾದ ನಂತರ ನನಗೆ ಈ ವಿಚಾರ ಗೊತ್ತಾಯಿತು. ನನಗೆ ಸಂಬಂಧ ಇಲ್ಲದ ಪ್ರಕರಣದಲ್ಲಿ ನನ್ನ ಹೆಸರು ಬಂದಿದೆ. ಎಫ್‌ಐಆರ್‌ನಿಂದ ನನ್ನ ಹೆಸರು ತೆಗೆಯಲು ನಾನು ಕಾನೂನು ಸಮರ ಮಾಡುತ್ತೇನೆ. ಗೃಹ ಸಚಿವ ಪರಮೇಶ್ವರ್ ಅವರಿಗೂ ಮನವಿ ಮಾಡುತ್ತೇನೆ ಎಂದು ತಿಳಿಸಿದರು.

ಒಂದು ವರ್ಷ ಜೈಲೇ ಗತಿ

ಎದುರಾಗಿದೆ. ಒಂದು ವೇಳೆ ಜಾಮೀನು ನೀಡಿದರೆ ವಿದೇಶಕ್ಕೆ ಹಾರುವ ಸಾಧ್ಯತೆಗಳಿವೆ. ಜೊತೆಗೆ ಸಾಕ್ಷ್ಯಗಳ ಮೇಲೂ ಪರಿಣಾಮ ಬೀರಬಹುದು ಎಂಬ ಕಾರಣಕ್ಕೆ ರನ್ಯಾ ವಿರುದ್ಧ ಕಾಫಿಪೋಸಾ ಜಾರಿ ಮಾಡಿ ಕಾಫಿಪೋಸಾ ಅಡ್ವೈಸರಿ ಬೋರ್ಡ್ ಆದೇಶ ಹೊರಡಿಸಿದೆ.

ಏನಿದು ಕಾಫಿಪೋಸಾ ಕಾಯ್ದೆ: ಕಾಫಿಪೋಸಾ ಎಂದರೆ ವಿದೇಶಿ ವಿನಿಮಯ ನಿಯಂತ್ರಣ ಹಾಗೂ ಕಳ್ಳ ಸಾಗಾಣಿಕೆ ತಡೆ ಕಾಯ್ದೆಯಾಗಿದೆ. ಈ ಕಾಫಿಪೋಸಾ ಕಾಯ್ದೆಯನ್ನು ಕಳ್ಳಸಾಗಣೆ ಮಾಡುವವರ ವಿರುದ್ಧ ಹಾಕಲಾಗುತ್ತದೆ. ಆರೋಪಿಯು ಜಾಮೀನು ಪಡೆಯಬಾರದು ಎಂಬುದು ಇದರ ಮೂಲ ಉದ್ದೇಶ. ಆರೋಪಿಯು ಜಾಮೀನು ಪಡೆದು ಹೊರಗೆ ಬಂದರೆ ನಿರಂತರವಾಗಿ ಮತ್ತೆ ಕಳ್ಳ ಸಾಗಾಣಿಕೆ ಮಾಡುತ್ತಾರೆ. ಅಲ್ಲದೇ ಜೈಲಿನಿಂದ ಬಂದ ಬಳಿಕ ತಪ್ಪಿಸಿಕೊಳ್ಳಬಹುದು. ತನಿಖೆಗೆ ಸರಿಯಾಗಿ ಸಹಕಾರ ಕೊಡದೇ, ನಿರಂತರವಾಗಿ ಸ್ಮಗ್ಲಿಂಗ್‌ನಲ್ಲಿ ಮುಂದುವರೆಯುತ್ತಾರೆ ಎಂದು ಕಾಯ್ದೆ ಜಾರಿಗೊಳಿಸಲಾಗುತ್ತದೆ.

ರಾಜ್ಯಾದ್ಯಂತ ಭಾರಿ ಮಳೆ ಸಾಧ್ಯತೆ

ಗಂಟೆಗೆ 40–50 ಕಿ.ಮೀ. ತಲುಪಿ ಗಂಟೆಗೆ 60 ಕಿ.ಮೀ. ವೇಗದಲ್ಲಿ ಬೀಸುವ ಸಾಧ್ಯತೆ ಇರುವುದರಿಂದ ಮೀನುಗಾರರು ಸಮುದ್ರಕ್ಕೆ ಇಳಿಯುವ ಕುರಿತು ಎಚ್ಚರದಿಂದಿರಬೇಕು ಎಂದು ಹೇಳಿದೆ.

ಜುಲೈ 15 ರಿಂದ 21 ರವರೆಗೆ ದಕ್ಷಿಣ ಒಳನಾಡಿನಲ್ಲಿ ಭಾರೀ ಮಳೆಯಾಗುವ ಸಾಧ್ಯತೆ ಇದೆ. ದಕ್ಷಿಣ ಒಳನಾಡಿನ ಚಿಕ್ಕಮಗಳೂರು, ಹಾಸನ, ಶಿವಮೊಗ್ಗ ಮತ್ತು ಕೊಡಗು ಮುಂತಾದ ಜಿಲ್ಲೆಗಳಲ್ಲಿ ಜುಲೈ 20 ಮತ್ತು 21ರಂದು ಭಾರೀ ಮಳೆಯಾಗುವ ನಿರೀಕ್ಷೆಯಿದೆ. ಬೆಂಗಳೂರು (ಗ್ರಾಮೀಣ ಮತ್ತು ನಗರ), ಮೈಸೂರು ಮತ್ತು ಮಂಡ್ಯ ಸೇರಿದಂತೆ ಇತರ ಜಿಲ್ಲೆಗಳಲ್ಲಿ ಹಗುರದಿಂದ ಮಧ್ಯಮ ಮಳೆಯಾಗುವ ನಿರೀಕ್ಷೆಯಿದೆ.

ಜುಲೈ 16 ರಂದು ಕರ್ನಾಟಕದ ಉತ್ತರ ಒಳನಾಡಿನಲ್ಲಿ ಭಾರೀ ಮಳೆಯಾಗುವ ನಿರೀಕ್ಷೆಯಿದೆ. ಪ್ರಮುಖವಾಗಿ ಬಾಗಲಕೋಟೆ, ಬೀದರ್ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಗಂಟೆಗೆ 40–50 ಕಿ.ಮೀ ವೇಗದಲ್ಲಿ ಗಾಳಿ ಬೀಸುವ ಮೂಲಕ ಹಗುರದಿಂದ ಮಧ್ಯಮ ಮಳೆಯಾಗಬಹುದು ಎಂದು ಹವಾಮಾನ ಇಲಾಖೆ ಹೇಳಿದೆ.

ಇಬ್ಬರು ಸಿಬ್ಬಂದಿ ಅಮಾನತಿಗೆ ಸೂಚನೆ

ಪರೀಕ್ಷೆ ನಂತರ ಕ್ರಿಮಿನಲ್ ಮೊಕದ್ದಮೆ: ಚೆಲುವಾಂಬ ಮಕ್ಕಳ ಆಸ್ಪತ್ರೆಯಲ್ಲಿ ಅಪೌಷ್ಠಿಕತೆಯಿಂದ ಬಳಲುವ ಮಕ್ಕಳ ವಾರ್ಡ್‌ನಲ್ಲಿ 13 ಮಕ್ಕಳು ಇವೆ. ಇವರೆಲ್ಲರಿಗೂ ಕೆಟ್ಟಿರುವ ಆಹಾರ ಪದಾರ್ಥಗಳನ್ನು ನೀಡಿರುವುದು ಕ್ರಿಮಿನಲ್ ಪ್ರಕರಣವಾಗಿದೆ. ಹಾಗಾಗಿ ಈ ಪದಾರ್ಥಗಳನ್ನು ಪರೀಕ್ಷೆಗೆ ಕಳುಹಿಸಿ ಕೊಡುತ್ತೇವೆ. ಬಳಿಕ ಬರುವ ವರದಿಯ ಆಧಾರದಲ್ಲಿ ಸಂಬಂಧಿಸಿ ದವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗುವುದು ಎಂದು ಎಚ್ಚರಿಸಿದರು.

ಮೇನು ನಲ್ಲಿರುವಂತೆ ಆಹಾರ ನೀಡುತ್ತಿಲ್ಲ: ಕೆ.ಆರ್.ಆಸ್ಪತ್ರೆ, ಚೆಲುವಾಂಬ, ಪಿಕೆಟಿಬಿ, ಟ್ರಾಮಾಕೇರ್ ಹಾಗೂ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿನ ಒಳರೋಗಿಗಳಿಗೆ ಆಹಾರ ಪೂರೈಸುವ ಜವಾಬ್ದಾರಿ ಹೊತ್ತ ಟೆಂಡರ್‌ದಾರರು ಮೆನುವಿ ನಲ್ಲಿರುವಂತೆ ಆಹಾರ ಪದಾರ್ಥಗಳನ್ನು ನೀಡಬೇಕು. ಕೆಲ ಆಹಾರ ಪದಾರ್ಥಗಳನ್ನು ಕೊಡದಿರುವುದಕ್ಕೆ ಬೇಸರ ವ್ಯಕ್ತಪಡಿಸಿದ ಆಯೋಗದ ಅಧ್ಯಕ್ಷರು, ಟೆಂಡರ್‌ದಾರರಿಗೆ ನೋಟಿಸ್ ನೀಡಿ, ವ್ಯವಸ್ಥಿತವಾಗಿ ಮೆನುವಿನಲ್ಲಿರುವಂತೆ ಆಹಾರ ಪೂರೈಕೆ ಮಾಡುವಂತೆ ತಾಕೀತು ಮಾಡಿದರು.

ಆಯಾ ಆಸ್ಪತ್ರೆಯಲ್ಲೇ ಆಹಾರ ತಯಾರಿಸಿ: ಮೈಸೂರು ಮೆಡಿಕಲ್ ಕಾಲೇಜು ವ್ಯಾಪ್ತಿಗೆ ಬರುವ ನಾಲ್ಕು ಆಸ್ಪತ್ರೆಯ ಒಳರೋಗಿಗಳಿಗೆ ಕೆ.ಆರ್.ಆಸ್ಪತ್ರೆಯ ಅಡುಗೆ ಮನೆಯಲ್ಲೇ ತಯಾರಿಸಿದ ಆಹಾರವನ್ನು ಹೊತ್ತೊಯ್ದು ನೀಡುವ ಅವಶ್ಯಕತೆ ಇಲ್ಲ. ಆಯಾ ಆಸ್ಪತ್ರೆಗಳಲ್ಲಿಯೇ ಆಹಾರ ತಯಾರಿಸಲೆಂದು ಅಡುಗೆ ಕೋಣೆ ಇದ್ದರೂ ಅದನ್ನು ಬಳಕೆ ಮಾಡುತ್ತಿಲ್ಲ. ಆದರೆ ನಿಯಮದ ಪ್ರಕಾರ ಆಯಾ ಆಸ್ಪತ್ರೆಗಳಲ್ಲಿಯೇ ಆಹಾರ ತಯಾರಿಸಿ ವಿತರಿಸಬೇಕೆಂದು ಗುತ್ತಿಗೆದಾರರಿಗೆ ಸೂಚಿಸಿದರು.



ಕೆ.ಆರ್.ಆಸ್ಪತ್ರೆ ಆವರಣದಲ್ಲಿರುವ ಪಾಕಶಾಲೆ(ಅಡುಗೆ ಮನೆ)ಗೆ ಭೇಟಿ ನೀಡಿದ ಕರ್ನಾಟಕ ರಾಜ್ಯ ಆಹಾರ ಆಯೋಗದ ಅಧ್ಯಕ್ಷ ಡಾ.ಹೆಚ್.ಕೃಷ್ಣ, ಒಳರೋಗಿಗಳಿಗೆ ತಯಾರಾಗಿದ್ದ ಆಹಾರ ಖಾದ್ಯಗಳನ್ನು ಪರಿಶೀಲಿಸಿದರು.

ಹೊಸ ಹಾಸಿಗೆ ಬಳಸಿ: ಆಸ್ಪತ್ರೆಯಲ್ಲಿ ಇರುವ ಹೊಸ ಹಾಸಿಗೆಯನ್ನು ಬಳಕೆ ಮಾಡದೇ ಮೂಲೆಯಲ್ಲಿಟ್ಟು ಹಾಳಾದ ಹಾಸಿಗೆಗಳನ್ನು ಬಳಕೆ ಮಾಡಲಾಗುತ್ತಿರುವುದು ಏಕೆ? ಎಂದು ಪ್ರಶ್ನಿಸಿದ ಅವರು, ಹೊಸ ಹಾಸಿಗೆಗಳನ್ನು ಬಳಸುವಂತೆಯೂ ತಿಳಿಸಿದರು. ಮೈಸೂರು ಮೆಡಿಕಲ್ ಕಾಲೇಜು–ಸಂಶೋಧನಾ ಸಂಸ್ಥೆ ಡೀನ್ ಹಾಗೂ ನಿರ್ದೇಶಕಿ ಕೆ.ಆರ್.ದಾಕ್ಷಾಯಣಿ, ಕರ್ನಾಟಕ ರಾಜ್ಯ ಆಹಾರ ಆಯೋಗದ ಸದಸ್ಯರಾದ ಸುಮಂತ್‌ರಾವ್, ರೋಹಿಣಿ ಪ್ರಿಯಾ, ವಿಜಯಲಕ್ಷ್ಮಿ, ಆಹಾರ–ನಾಗರಿಕ ಪೂರೈಕೆ ಜಂಟಿ ನಿರ್ದೇಶಕ ಮಂಟೇಸ್ವಾಮಿ ಇದ್ದರು.

ನಾಡದೇವತೆ ಚಾಮುಂಡೇಶ್ವರಿ ವರ್ಧಂತಿ ಉತ್ಸವ

ದೇವಿಯ ಉತ್ಸವ ಮೂರ್ತಿಯನ್ನು ಚಿನ್ನದ ಪಲ್ಲಕ್ಕಿಯಲ್ಲಿ ಇಟ್ಟು ದೇವಾಲಯದ ಸುತ್ತ ಪ್ರದಕ್ಷಿಣೆ ಹಾಕಲಾಗುತ್ತದೆ. ಬೆಳಗಿನ ಜಾವ 4 ಗಂಟೆಯಿಂದಲೇ ಪೂಜಾ ಕೈಂಕರ್ಯಗಳು ಆರಂಭಗೊಳ್ಳಲಿದ್ದು, ಮಹಾನ್ಯಾಸ ರುದ್ರಾಭಿಷೇಕ, ಪಂಚಾಮೃತಾಭಿಷೇಕ, ಕುಂಕುಮಾರ್ಚನೆ, ಏಕದಶ ಪುಷ್ಪಾರ್ಚನೆ, ಸಹಸ್ರನಾಮಾರ್ಚನೆ ಸೇರಿದಂತೆ ವಿವಿಧ ಪೂಜೆಗಳನ್ನು ಕೈಗೊಳ್ಳಲಾಗುತ್ತದೆ. ವರ್ಧಂತಿಗೆ ಚಾಮುಂಡೇಶ್ವರಿ ಅಭಿವೃದ್ಧಿ ಪ್ರಾಧಿಕಾರ ಸಕಲ ಸಿದ್ಧತೆ ಮಾಡಿಕೊಂಡಿದೆ. ಭದ್ರತೆಗಾಗಿ ಹೆಚ್ಚುವರಿ ಪೊಲೀಸರನ್ನು ನಿಯೋಜಿಸಲಾಗಿದೆ.

ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್, ಸಂಸದ ಯದುವೀರ್ ಒಡೆಯರ್ ಹಾಗೂ ತ್ರಿಷಿಕಾ ಕುಮಾರಿ ಒಡೆಯರ್ ತಾಯಿ ಚಾಮುಂಡೇಶ್ವರಿಗೆ ವಿಶೇಷ ಪೂಜೆ ಸಲ್ಲಿಸಿದ ಬಳಿಕ ಮಹಾ ಮಂಗಳಾರತಿ ನಡೆಯಲಿದೆ. ನಂತರ ದೇವಿಯ ಉತ್ಸವಮೂರ್ತಿಯನ್ನು ಚಿನ್ನದ ಪಲ್ಲಕ್ಕಿಯಲ್ಲಿ ಇರಿಸಿ, ದೇವಸ್ಥಾನದ ಆವರಣದಲ್ಲಿ ಪ್ರದಕ್ಷಿಣೆ ಹಾಕಲಾಗುತ್ತದೆ. ಅರಮನೆ ಪೊಲೀಸ್ ಬ್ಯಾಂಡ್ ಜೊತೆಗೆ ಮಂಗಳವಾದ್ಯ, ಛತ್ರಿ–ಚಾಮರಗಳೊಂದಿಗೆ ಮೆರವಣಿಗೆ ನಡೆಯಲಿದೆ. ರಾತ್ರಿ 8.30ಕ್ಕೆ ಉತ್ಸವ ಪೂಜೆ, ದರ್ಬಾರ್ ಉತ್ಸವ, ಮಂಟಪೋತ್ಸವ ಹಾಗೂ ರಾಷ್ಟ್ರಾಶೀರ್ವಾದದೊಂದಿಗೆ ವರ್ಧಂತಿ ಉತ್ಸವ ಸಂಪನ್ನಗೊಳ್ಳಲಿದೆ ಎಂದು ಪ್ರಧಾನ ಅರ್ಚಕರಾದ ಶಶಿಶೇಖರ್ ದೀಕ್ಷಿತ್ ಮಾಹಿತಿ ನೀಡಿದ್ದಾರೆ.

ಬಸ್ ವ್ಯವಸ್ಥೆ: ಚಾಮುಂಡಿ ತಾಯಿಯ ವರ್ಧಂತಿ ಉತ್ಸವದ ಹಿನ್ನಲೆ ಭಕ್ತಾದಿಗಳಿಗೆ ಬೆಳಗ್ಗೆ 8 ಗಂಟೆಯಿಂದ ಕೆಎಸ್‌ಆರ್‌ಟಿಸಿ ಬಸ್ ವ್ಯವಸ್ಥೆ ಕಲ್ಪಿಸಲಾಗಿದೆ. ಅಲ್ಲದೆ, ಮೆಟ್ಟಿಲುಗಳ ಮೂಲಕ ಬರುವ ಭಕ್ತಾದಿಗಳಿಗೂ ಬೆಳಗ್ಗೆ 8 ಗಂಟೆಯಿಂದ ಪ್ರವೇಶ ಕಲ್ಪಿಸಲಾಗಿದೆ ಎಂದು ಶ್ರೀ ಚಾಮುಂಡೇಶ್ವರಿ ಅಭಿವೃದ್ಧಿ ಪ್ರಾಧಿಕಾರದ ಪ್ರಕಟಣೆಯಲ್ಲಿ ತಿಳಿಸಿದೆ.

ವಿವಿಧೆಡೆ ಪ್ರಸಾದ ವಿನಿಯೋಗ: ಚಾಮುಂಡೇಶ್ವರಿ ವರ್ಧಂತಿ ಅಂಗವಾಗಿ ನಗರದ ವಿವಿಧ ದೇಗುಲಗಳಲ್ಲಿ ವಿಶೇಷ ಪೂಜೆಗಳ ಜೊತೆಗೆ ಹಲವೆಡೆ ಪ್ರಸಾದ ವಿನಿಯೋಗವೂ ನಡೆಯಲಿದೆ. ನಗರದ ಪ್ರಮುಖ ಬಡಾವಣೆ, ಬೆಟ್ಟದ ಪಾದದ ಕೆಳಗೆ, ಆಟೋ ನಿಲ್ದಾಣಗಳು, ವೃತ್ತಗಳಲ್ಲಿ ಕೂಡ ಶಾಮಿಯಾನ ಹಾಕಿ, ಚಾಮುಂಡೇಶ್ವರಿ ವರ್ಧಂತಿ ಉತ್ಸವ ಆಚರಿಸಲಾಗುತ್ತದೆ.

ಮುಳ್ಳಯ್ಯನಗಿರಿ ಪ್ರವಾಸಿಗರಿಗೆ ಅಡ್ವಾನ್ಸ್ ಬುಕಿಂಗ್ ಆರಂಭ

ಮೊದಲ 600 ವಾಹನಗಳಿಗಷ್ಟೇ ಪ್ರವೇಶ

ಚಿಕ್ಕಮಗಳೂರು, ಜು.16: ಕಾಫಿನಾಡು ಮುಳ್ಳಯ್ಯನಗಿರಿ ಭಾಗಕ್ಕೆ ಪ್ರವಾಸಿಗರ ದಂಡು ಹಿನ್ನೆಲೆಯಲ್ಲಿ ಪ್ರವಾಸಿಗರ ನಿಯಂತ್ರಣಕ್ಕೆ ಚಿಕ್ಕಮಗಳೂರು ಜಿಲ್ಲಾಡಳಿತ ಮುಂದಾಗಿದೆ. ಬೆಳಿಗ್ಗೆ 600 ಮಧ್ಯಾಹ್ನ 600 ವಾಹನಗಳಿಗೆ ಮಾತ್ರ ಮುಳ್ಳಯ್ಯನಗಿರಿ ಬೆಟ್ಟದ ಪ್ರದೇಶಕ್ಕೆ ಹೋಗಲು ಅವಕಾಶ ನೀಡಲು ತೀರ್ಮಾನ ಕೈಗೊಂಡಿದೆ.



ಚೆಕ್ ಪೋಸ್ಟ್ ಬಳಿಯೇ ಖಾಸಗಿ ವಾಹನ ನಿಲುಗಡೆ: ಗಿರಿ ಪ್ರವಾಸಕ್ಕೆ ಹೋಗುವವರಿಗೆ ಚೆಕ್ ಪೋಸ್ಟ್ ಬಳಿಯೇ ಪ್ರವಾಸಿಗರ ಖಾಸಗಿ ವಾಹನಗಳಿಗೆ ಬ್ರೇಕ್ ಹಾಕಲಾಗಿದೆ. ಇಲ್ಲಿಂದ ಮುಂದಕ್ಕೆ ಹೋಗಲು ಜಿಲ್ಲಾಡಳಿತದಿಂದ ವಾಹನ ವ್ಯವಸ್ಥೆ ಮಾಡಲಾಗುತ್ತದೆ. ಆನ್‌ಲೈನ್ ಮೂಲಕ ಬುಕ್ ಮಾಡಿ ಸ್ವಂತ ವಾಹನದಲ್ಲಿ ಹೋಗೋಕೆ ಹಣ ಪಾವತಿ ಮಾಡಬೇಕು. ಹಣ ಪಾವತಿ ಮಾಡಲ್ಲ ಎಂದರೆ ಚೆಕ್‌ಪೋಸ್ಟ್ ಬಳಿ ಗಾಡಿ ನಿಲ್ಲಿಸಿ ಜಿಲ್ಲಾಡಳಿತದ ವಾಹನದಲ್ಲಿ ಹೋಗಬೇಕು. ಇನ್ನು ಟ್ರೆಕಿಂಗ್ ಮಾಡುವವರಿಗೆ ಮುಕ್ತ ಅವಕಾಶ ನೀಡಲಾಗುತ್ತದೆ.

ಈ ಮೂಲಕ ಒಂದು ದಿನಕ್ಕೆ 1200 ವಾಹನಗಳಿಗೆ ಮಾತ್ರ ಪ್ರವೇಶಾವಕಾಶ ನೀಡಲಿದ್ದು, ಮುಗಿಬೀಳುವ ಪ್ರವಾಸಿಗರಿಗೆ ಕಡಿವಾಣ ಹಾಕಲು ಮುಂದಾಗಿದೆ. ಇನ್ನು ಇಲ್ಲಿಗೆ ಹೋಗುವವರು ಅಡ್ವಾನ್ಸ್ ಬುಕಿಂಗ್ ಮಾಡಿಕೊಂಡು ಹೋಗಬೇಕು.


ಮುಳ್ಳಯ್ಯನಗಿರಿ ಸೇರಿದಂತೆ ದತ್ತಪೀಠ, ಗಾಳಿಕೆರೆಗೆ ಹೋಗುವ ಭಕ್ತರು ಹಣ ಪಾವತಿಸಿಯೇ ಹೋಗಬೇಕು. ಒಂದು ಟಿ.ಟಿ. ವಾಹನಕ್ಕೆ 200, ಕಾರಿಗೆ 100, ಬೈಕು–ಆಟೋಗೆ 50 ರೂಪಾಯಿ ಕೊಡಬೇಕು.

ಚಿಕ್ಕಮಗಳೂರು ಜಿಲ್ಲಾಡಳಿತವು ಪ್ರವಾಸಿಗರ ಹಿತದೃಷ್ಟಿಯಿಂದ ಅವರ ನಿಯಂತ್ರಣಕ್ಕೆ ಮುಂದಾಗಿದೆ. ಮಳೆಯಿಂದ ಗಿರಿ ಪ್ರದೇಶದಲ್ಲಿ ಭೂಕುಸಿತ ಉಂಟಾಗುವ ಸಾಧ್ಯತೆ ಹೆಚ್ಚಾಗಿದೆ ಎಂದು ತಜ್ಞರು ತಿಳಿಸಿದ್ದಾರೆ.

ಜಿಲ್ಲಾಡಳಿತ ಸಿದ್ಧಪಡಿಸಿರುವ ಅಪಾಯಕಾರಿ ಪ್ರದೇಶಗಳ ಪಟ್ಟಿಯಲ್ಲಿ ಮುಳ್ಳಯ್ಯನಗಿರಿ ರಸ್ತೆಯೂ ಸೇರಿದೆ. ಈ ಹಿನ್ನೆಲೆಯಲ್ಲಿ ಪ್ರವಾಸಿಗರ ಹೆಚ್ಚಳದಿಂದ ಗಿರಿಯಲ್ಲಿ ಅಪಾಯಕ್ಕೆ ಆಹ್ವಾನವೆಂದು ಪ್ರವಾಸಿಗರ ನಿಯಂತ್ರಣಕ್ಕೆ ಜಿಲ್ಲಾಡಳಿತ ಕ್ರಮ ಕೈಗೊಂಡಿದೆ.

ಟ್ರಾಫಿಕ್, ಭೂಕುಸಿತ ತಡೆಯಲು ಕ್ರಮ: ಚಿಕ್ಕಮಗಳೂರು ತಾಲೂಕಿನ ಮುಳ್ಳಯ್ಯನಗಿರಿ, ದತ್ತಪೀಠ ಭಾಗಕ್ಕೆ ಹೋಗಲು ಇನ್ನು ಮುಂದೆ ಜಿಲ್ಲಾಡಳಿತದ ಅನುಮತಿ ಪಡೆಯುವುದು ಕಡ್ಡಾಯ ಆಗಲಿದೆ. ಇದರಿಂದ ಈ ಭಾಗದಲ್ಲಿ ಉಂಟಾಗುತ್ತಿದ್ದ ವಾಹನಗಳ ಟ್ರಾಫಿಕ್ ಜಾಮ್, ಭೂ ಕುಸಿತದ ಆತಂಕವನ್ನು ತಡೆಗಟ್ಟಲು ನೆರವಾಗಲಿದೆ.

ಸನ್ಮಾನ...



ಮೈಸೂರು ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಸಮಿತಿಯ ನೂತನ ಹಿರಿಯ ಕಾರ್ಯದರ್ಶಿಯಾಗಿ ನೇಮಕಗೊಂಡ ಜಯಪುರ ಹೋಬಳಿ ಕಡಕೊಳ ಭರತ್ ಹಾಗೂ ಕಾರ್ಯದರ್ಶಿ ಮಾವಿನಹಳ್ಳಿ ನಾಗೇಶ್, ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಕೆಪಿಸಿಸಿ ಕಾರ್ಯಾಧ್ಯಕ್ಷ ತನ್ವೀರ್ ಸೇಠ್, ಮೈಸೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್, ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ ಅವರನ್ನು ಸನ್ಮಾನಿಸಿದರು. ಈ ವೇಳೆ ಡಾ.ಹೆಚ್.ಸಿ.ಮಹದೇವಪ್ಪ ಅಭಿಮಾನಿ ಬಳಗ ರಾಜ್ಯಾಧ್ಯಕ್ಷ ಹಿನಕಲ್ ನಂಜುಂಡ, ಕೆಪಿಸಿಸಿ ಸದಸ್ಯರಾದ ನಜರ್ ಬಾದ್ ನಟರಾಜ್, ಮೈಸೂರು ಡಿಸಿಸಿ ಕಾರ್ಮಿಕ ವಿಭಾಗ ಜಿಲ್ಲಾಧ್ಯಕ್ಷ ಮಂಜುನಾಥ್ ಕೋಟೆ, ಉಪಾಧ್ಯಕ್ಷ ಹರದನಹಳ್ಳಿ ಮಹೇಶ್ ಇನ್ನಿತರರು ಉಪಸ್ಥಿತರಿದ್ದರು.

ಮಹಾರಾಜ ಕಾಲೇಜು ಮೈದಾನದಲ್ಲಿ ಜು.19ರಂದು ರಾಜ್ಯ ಸರ್ಕಾರದ ಸಾಧನಾ ಸಮಾವೇಶ

● ಸಿದ್ಧತೆಗಳ ಪರಿಶೀಲನೆ ನಡೆಸಿದ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ● 2,569 ಕೋಟಿ ಯೋಜನೆಯ ಉದ್ಘಾಟನೆ, ಶಂಕುಸ್ಥಾಪನೆ ● ಲಕ್ಷಕ್ಕೂ ಹೆಚ್ಚು ಜನ ಸೇರುವ ಸಾಧ್ಯತೆ ● ಕಾಂಗ್ರೆಸ್‌ನ ಕೇಂದ್ರ ನಾಯಕರಿಗೂ ಆಹ್ವಾನ

ಇಲಾಖಾವಾರು ಯೋಜನೆ; ಮೀಸಲಿಟ್ಟ ಹಣ

- ಲೋಕೋಪಯೋಗಿ ಇಲಾಖೆಗೆ 502 ಕೋಟಿ
- ಜಲಸಂಪನ್ಮೂಲ ಇಲಾಖೆಗೆ 419 ಕೋಟಿ
- ಚೆಸ್ಕಾಂನಿಂದ ಭೂಗತ ಕೇಬಲ್ ಅಳವಡಿಕೆಗೆ 408 ಕೋಟಿ
- ಸಣ್ಣ ಕೈಗಾರಿಕೆಗೆ 120 ಕೋಟಿ
- ಜಿಲ್ಲಾ ಕೋಶದಿಂದ 120 ಕೋಟಿ
- ವೈದ್ಯಕೀಯ ಶಿಕ್ಷಣ ಇಲಾಖೆಗೆ 100 ಕೋಟಿ ರೂ.



ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಜು.19ರಂದು ನಡೆಯುವ ರಾಜ್ಯ ಸರ್ಕಾರದ ಸಾಧನಾ ಸಮಾವೇಶದ ಸಿದ್ಧತೆ ಕಾರ್ಯವನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರು ಬುಧವಾರ ಉದ್ಘಾಟಿಸಿದರು.

ಮೈಸೂರು, ಜು.16(ಬಿಎಲ್‌ಯು)– ರಾಜ್ಯ ಕಾಂಗ್ರೆಸ್ ಸರ್ಕಾರ ಎರಡು ವರ್ಷ ಪೂರೈಸಿರುವ ಹಿನ್ನೆಲೆಯಲ್ಲಿ ಜುಲೈ 19ರಂದು ಮೈಸೂರಿನಲ್ಲಿ ಸರ್ಕಾರದ ಸಾಧನಾ ಸಮಾವೇಶ ಆಯೋಜಿಸಲಾಗಿದೆ.

ನಗರದ ಮಹಾರಾಜ ಕಾಲೇಜು ಮೈದಾನದಲ್ಲಿ ನಡೆಯಲಿರುವ ಸಾಧನಾ ಸಮಾವೇಶದ ಸಿದ್ಧತೆಗಳನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಇಂದು ಪರಿಶೀಲನೆ ನಡೆಸಿದರು.

ಸಮಾವೇಶದ ಕಾರ್ಯಕ್ರಮಗಳ ಬಗ್ಗೆ ಅಧಿಕಾರಿಗಳಿಂದ ಸಮಗ್ರ ಮಾಹಿತಿ ಪಡೆದ ಡಾ.ಮಹದೇವಪ್ಪ ಅವರು, ಕೆಲವು ಸಲಹೆ, ಸೂಚನೆ ಹಾಗೂ ಮಾರ್ಗದರ್ಶನ ನೀಡಿದರು. ಈ ವೇಳೆ ಶಾಸಕ ಕೆ.ಹರೀಶ್ ಗೌಡ, ಜಿಲ್ಲಾಧಿಕಾರಿ ಜಿ.ಲಕ್ಷ್ಮಿ ಕಾಂತರೆಡ್ಡಿ, ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಡಿಸಿಪಿಗಳಾದ ಬಿಂದುಮಣಿ, ಸುಂದರ್‌ರಾಜ್, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ ವಿಜಯಕುಮಾರ್, ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ಸೇರಿದಂತೆ ಹಲವರು ಹಾಜರಿದ್ದರು.

ಬಳಿಕ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಡಾ.ಮಹದೇವಪ್ಪ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಾಳೆಯಿಂದ ಮೂರು ದಿನಗಳ ಕಾಲ ಮೈಸೂರು ಜಿಲ್ಲಾ ಪ್ರವಾಸ ಕೈಗೊಳ್ಳಲಿದ್ದಾರೆ. ಜುಲೈ 19ರಂದು ಇದೇ ಮಹಾರಾಜ ಕಾಲೇಜು ಮೈದಾನದಲ್ಲಿ ನಡೆಯುವ ಸರ್ಕಾರದ ಸಾಧನಾ ಸಮಾವೇಶದಲ್ಲಿ ಭಾಗವಹಿಸಲಿದ್ದಾರೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೆವಾಲ ಸೇರಿದಂತೆ ಕೇಂದ್ರ ನಾಯಕರಿಗೆ ಆಹ್ವಾನ ನೀಡಲಾಗಿದೆ. ಅಂದಿನ ಕಾರ್ಯಕ್ರಮದಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕೂಡ ಪಾಲ್ಗೊಳ್ಳಲಿದ್ದಾರೆ ಎಂದರು.

ಮೈಸೂರು ಜಿಲ್ಲೆಯಲ್ಲಿ ಅನುಷ್ಠಾನ ಮಾಡುತ್ತಿರುವ 2,569 ಕೋಟಿಯ ಯೋಜನೆಗಳಿಗೆ ಸರ್ಕಾರ ಮಂಜೂರಾತಿ ನೀಡಿದೆ. ಅಂದು ನಡೆಯುವ ಸಾಧನಾ ಸಮಾವೇಶದಲ್ಲಿ ಕೆಲವು ಯೋಜನೆಗಳನ್ನು ಉದ್ಘಾಟನೆ ಮಾಡಿದರೆ, ಕೆಲವು ಯೋಜನೆಗಳಿಗೆ ಶಂಕುಸ್ಥಾಪನೆ ನೆರವೇರಿಸಲಾಗುತ್ತಿದೆ. ಒಂದು ಲಕ್ಷಕ್ಕೂ ಹೆಚ್ಚು ಜನರು ಸಮಾವೇಶದಲ್ಲಿ ಭಾಗವಹಿಸುತ್ತಾರೆ ಎಂದು ಮಾಹಿತಿ ನೀಡಿದರು.

ಸೆಪ್ಟೆಂಬರ್‌ನಲ್ಲಿ ನಿಜವಾಗಿಯೂ ಕ್ರಾಂತಿ ಆಗುತ್ತದೆ!

ಸೆಪ್ಟೆಂಬರ್‌ನಲ್ಲಿ ನಿಜವಾಗಿಯೂ ಕ್ರಾಂತಿ ಆಗುತ್ತದೆ ಎಂದು ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅಚ್ಚರಿ ಹೇಳಿಕೆ ನೀಡಿದ್ದಾರೆ.

ವಿರೋಧ ಪಕ್ಷದವರ ಬದಲು, ನಿಮ್ಮ ಪಕ್ಷದ ಸಚಿವ, ಶಾಸಕರೇ ಸೆಪ್ಟೆಂಬರ್ ಕ್ರಾಂತಿ ಆಗಲಿದೆ ಎಂದು ಹೇಳುತ್ತಿದ್ದಾರಲ್ಲ ಎಂಬ ಪ್ರಶ್ನೆಗೆ, ಅವರು ಹೇಳಿರುವುದರಲ್ಲಿ ತಪ್ಪಿಲ್ಲ. ಸೆಪ್ಟೆಂಬರ್‌ನಲ್ಲಿ ನಿಜವಾಗಿಯೂ ಕ್ರಾಂತಿ ಆಗುತ್ತದೆ. ಆದರೆ ಅದು ಸಂಕ್ರಾಂತಿ ಎಂದು ಹೇಳುವ ಮೂಲಕ ಹಾಸ್ಯ ಚಟಾಕಿ ಹಾರಿಸಿದರು. ಸೆಪ್ಟೆಂಬರ್‌ನಲ್ಲಿ ಕ್ರಾಂತಿ ಆಗುತ್ತದೆ ಎಂದು ಭವಿಷ್ಯ ನುಡಿದವರಿಗೂ ಈ ಮೂಲಕ ಡಾ.ಮಹದೇವಪ್ಪ ತಿರುಗೇಟು ನೀಡಿದರು. ರಣದೀಪ್‌ಸಿಂಗ್ ಸುರ್ಜೇವಾಲ ಅವರೇ ರಾಜ್ಯದ ಸೂಪರ್ ಸಿಎಂ ಎಂಬ ನಿಖಿಲ್ ಕುಮಾರಸ್ವಾಮಿ ಟ್ವೀಟ್‌ಗೆ ಪ್ರತಿಕ್ರಿಯೆ ನೀಡಿದ ಡಾ.ಮಹದೇವಪ್ಪ, ರಾಜ್ಯದಲ್ಲಿ ಯಾವ ಸೂಪರ್ ಸಿಎಂಗಳು ಇಲ್ಲ. ರಾಜ್ಯದಲ್ಲಿ ಇರುವುದು ಒಬ್ಬರೇ ಸಿಎಂ ಅದು ಸಿದ್ದರಾಮಯ್ಯ ಮಾತ್ರ ನಮ್ಮಲ್ಲಿ ಅಸಂವಿಧಾನಿಕವಾಗಿ ಯಾವ ಹುದ್ದೆಗಳು ಇಲ್ಲ ಎಂದರು.

ಇದು ಶಕ್ತಿ ಪ್ರದರ್ಶನವಲ್ಲ, ಸರ್ಕಾರದ ಸಾಧನೆ

ಮೈಸೂರಿನಲ್ಲಿ ಜುಲೈ 19ರಂದು ನಡೆಯುವ ಸರ್ಕಾರದ ಸಾಧನಾ ಸಮಾವೇಶ ಯಾರ ಶಕ್ತಿ ಪ್ರದರ್ಶನವಲ್ಲ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಸ್ಪಷ್ಟಪಡಿಸಿದರು. ಶಕ್ತಿ ಪ್ರದರ್ಶನ ಮಾಡುವ ಯಾವ ಅಗತ್ಯವೂ ನಮಗಿಲ್ಲ. 2023ರಲ್ಲೇ ಸ್ಪಷ್ಟ ಬಹುಮತ ನೀಡುವ ಮೂಲಕ ಕರ್ನಾಟಕ ರಾಜ್ಯದ ಜನರು ನಮಗೆ ಶಕ್ತಿ ನೀಡಿದ್ದಾರೆ. ಇದರಿಂದ ಮತ್ತೆ ಮತ್ತೆ ಶಕ್ತಿ ಪ್ರದರ್ಶನ ಮಾಡುವ ಅವಶ್ಯಕತೆ ಇಲ್ಲ. ನಮ್ಮ ಸರ್ಕಾರಕ್ಕೆ ಎರಡು ವರ್ಷ ತುಂಬಿದೆ. ಇದರಿಂದ ನಮ್ಮ ಸಾಧನೆಯನ್ನು ಜನರಿಗೆ ಹೇಳುವ ಕಾಲವಿದು. ನಾವು ಇಲ್ಲಿ ತನಕ ಏನೇನು ಅಭಿವೃದ್ಧಿ ಮಾಡಿದ್ದೇವೆ, ಭವಿಷ್ಯತ್ತಿನಲ್ಲಿ ಏನು ಅಭಿವೃದ್ಧಿ ಮಾಡುತ್ತೇವೆ ಎಂದು ಸಾಧನಾ ಸಮಾವೇಶದಲ್ಲಿ ವಿವರಿಸುತ್ತೇವೆ ಎಂದರು.

ಮೈಸೂರಿನಲ್ಲಿ ಸಿದ್ದರಾಮಯ್ಯ ಅವರ ಕಾಲದಲ್ಲಿ ಆದಷ್ಟು ಅಭಿವೃದ್ಧಿ ಪ್ರಾಯಶಃ ಯಾರ ಅಧಿಕಾರದಲ್ಲೂ ಆಗಿಲ್ಲ. ವೈಟ್ ಮ್ಯಾಪಿಂಗ್ ಸೇರಿದಂತೆ ಮೈಸೂರು ನಗರದ ಅಭಿವೃದ್ಧಿಗಾಗಿ 2,569 ಕೋಟಿ ನೀಡಲಾಗಿದೆ. ಇದು ಸರ್ಕಾರದ ಸಾಧನೆ ಅಲ್ಲವೇ ಎಂದು ಪ್ರಶ್ನಿಸಿದ ಅವರು, ಗ್ಯಾರಂಟಿ ಯೋಜನೆಯಿಂದ ರಾಜ್ಯದ ಅಭಿವೃದ್ಧಿ ಆಗುತ್ತಿಲ್ಲ ಎಂದು ಟೀಕೆ ಮಾಡುವ ವಿರೋಧ ಪಕ್ಷದವರಿಗೆ ಇದು ತಕ್ಕ ಉತ್ತರ ಎಂದು ತಿರುಗೇಟು ನೀಡಿದರು. ನಾವು ಶಿಷ್ಟಾಚಾರದ ಪಾಲನೆ ಮಾಡಿದ್ದು, ವಿರೋಧ ಪಕ್ಷದ ಶಾಸಕ ಹಾಗೂ ಸಂಸದರಿಗೂ ಆಹ್ವಾನ ನೀಡಿದ್ದೇವೆ. ಆದರೆ ಅಂದಿನ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವುದು, ಬಿಡುವುದು ಅವರ ವಿವೇಚನೆಗೆ ಬಿಟ್ಟ ವಿಚಾರ ಎಂದು ಡಾ.ಮಹದೇವಪ್ಪ ಸ್ಪಷ್ಟನೆ ನೀಡಿದರು.

ಮತ್ತೊಂದು ಕ್ರೆಡಿಟ್ ವಾರ್ ಆರಂಭವಾಗಿದೆ

ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ಹೈವೆಯಂತೆ ಸಿಗಂದೂರು ಸೇತುವೆ ನಿರ್ಮಾಣ ವಿಚಾರದಲ್ಲೂ ಕ್ರೆಡಿಟ್ ವಾರ್ ಆರಂಭವಾಗಿದೆ ಎಂದು ಸಚಿವ ಡಾ.ಹೆಚ್.ಸಿ. ಮಹದೇವಪ್ಪ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ನಾನು ಲೋಕೋಪಯೋಗಿ ಸಚಿವನಾಗಿದ್ದಾಗ 2013 ರಲ್ಲಿ ಸೇತುವೆ ನಿರ್ಮಾಣಕ್ಕೆ ಡಿಪಿಆರ್ ಸಿದ್ದಪಡಿಸಲಾಗಿತ್ತು. ಸೇತುವೆ ನಿರ್ಮಿಸುವಂತೆ ಯಡಿಯೂರಪ್ಪ ಹಾಗೂ ಕಾಗೋಡು ತಿಮ್ಮಪ್ಪ ಅವರು ನನಗೆ ಪ್ರೀತಿಯಿಂದ ಹೇಳಿದರು ಎಂದರು.

ಸರ್ಕಾರದ ಮಟ್ಟದಲ್ಲಿ ಸೇತುವೆ ನಿರ್ಮಾಣ ಕಾರ್ಯದ ಪ್ರಕ್ರಿಯೆ ಆರಂಭಿಸಲಾಗಿತ್ತು. ಇದು ಕಾಂಗ್ರೆಸ್ ಸರ್ಕಾರದ ಯೋಜನೆ ಎಂಬುದರಲ್ಲಿ ಯಾವುದೇ ಅನುಮಾನ ಬೇಡ. ಆದರೆ ಸೇತುವೆ ಉದ್ಘಾಟನೆಯಲ್ಲಿ ರಾಜ್ಯದ ಪ್ರತಿನಿಧಿಗಳನ್ನು ಆಹ್ವಾನಿಸದೆ ಶಿಷ್ಟಾಚಾರ ಉಲ್ಲಂಘನೆ ಮಾಡಿದ್ದಾರೆ. ಇದು ಆರೋಗ್ಯಕರ ಬೆಳವಣಿಗೆಯಲ್ಲ. ಕೇಂದ್ರ ಮತ್ತು ರಾಜ್ಯ ಸರ್ಕಾರ ಪ್ರತಿನಿಧಿಸುವವರು ಅಲ್ಲಿ ಇದ್ದಿದ್ದರೆ ಕಾರ್ಯಕ್ರಮದ ಮೆರಗು ಮತ್ತಷ್ಟು ಹೆಚ್ಚಾಗುತ್ತಿತ್ತು ಎಂದರು.

ಆದರೆ ಮುಂದಿನ ದಿನಗಳಲ್ಲಿ ಇಂತಹ ಸಂಘರ್ಷಕ್ಕೆ ಕೇಂದ್ರ ಸರ್ಕಾರ ಅವಕಾಶ ಮಾಡಿಕೊಡಬಾರದು ಎಂದು ಸಲಹೆ ನೀಡಿದ ಡಾ.ಮಹದೇವಪ್ಪ, ನಾ ಮಾಡಿದೆ, ನಾ ಮಾಡಿದೆ ಎಂದು ಮೈಸೂರು– ಬೆಂಗಳೂರು ಎಕ್ಸ್ ಪ್ರೆಸ್ ಹೈವೆಯಂತೆ ಮತ್ತೊಂದು ಕ್ರೆಡಿಟ್ ವಾರ್ ಆರಂಭವಾಗಿದೆ ಎಂದು ಡಾ.ಹೆಚ್.ಸಿ.ಮಹದೇವಪ್ಪ ಅಸಮಾಧಾನ ವ್ಯಕ್ತಪಡಿಸಿದರು.

ಸ್ಪರ್ಧಾತ್ಮಕ ಪರೀಕ್ಷೆ ಬರೆಯುವವರು ಅತಿಯಾಗಿ ಮೊಬೈಲ್ ಬಳಸಬಾರದು!

ಹಿರಿಯ ಐಎಎಸ್ ಅಧಿಕಾರಿ ಅಕ್ರಂ ಪಾಷ ಸಲಹೆ



ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿವಿ ಸಭಾಂಗಣದಲ್ಲಿ ಕೆ–ಸೆಟ್ ಮತ್ತು ಯುಜಿಸಿ–ನೆಟ್ ಪರೀಕ್ಷೆಗಳ ತರಬೇತಿ ಶಿಬಿರವನ್ನು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಅಕ್ರಂ ಪಾಷ ಬುಧವಾರ ಉದ್ಘಾಟಿಸಿದರು.

ಮೈಸೂರು, ಜು.16(ಬಿಎಲ್‌ಯು)– ಸ್ಪರ್ಧಾತ್ಮಕ ಪರೀಕ್ಷೆಗೆ ತಹಾರಾಗುವ ಅಭ್ಯರ್ಥಿಗಳು ಅತಿಯಾದ ಮೊಬೈಲ್ ಬಳಕೆಯಿಂದ ಮುಕ್ತರಾಗಬೇಕು ಎಂದು ಹಿರಿಯ ಐಎಎಸ್ ಅಧಿಕಾರಿ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ (ಕೆಎಸ್‌ಆರ್‌ಟಿಸಿ) ವ್ಯವಸ್ಥಾಪಕ ನಿರ್ದೇಶಕ ಅಕ್ರಂ ಪಾಷ ಸಲಹೆ ನೀಡಿದರು.

ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸಭಾಂಗಣದಲ್ಲಿ ಇಂದು ಆರಂಭವಾದ ಕೆ–ಸೆಟ್ ಮತ್ತು ಯುಜಿಸಿ–ನೆಟ್ ಪರೀಕ್ಷೆಗಳ ತರಬೇತಿ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ಮೊಬೈಲ್‌ನಲ್ಲಿ ಸ್ಕ್ರಾಲ್ ಮಾಡುವ ಕೆಟ್ಟ ಚಾಳಿ ನಿಮ್ಮನ್ನು ದಾರಿ ತಪ್ಪಿಸುತ್ತದೆ. ಇದರಿಂದ ನಿದ್ರೆ ಇಲ್ಲದೆ, ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರುತ್ತದೆ ಎಂದು ಎಚ್ಚರಿಸಿದರು.

ಗೆಲುವು ಸಾಧಿಸುವ ತನಕ ಮೊಬೈಲ್ ಸೇರಿದಂತೆ ಮನೋರಂಜನಾತ್ಮಕ ಚಟುವಟಿಕೆಗಳಿಂದ ಅಂತರ ಕಾಯ್ದುಕೊಳ್ಳಿ ಎಂದು ಅಕ್ರಂ ಪಾಷ ಸಲಹೆ ನೀಡಿದರು.

ಸ್ಪರ್ಧಾತ್ಮಕ ಜಗತ್ತಿನ ಮ್ಯಾರಥಾನ್‌ನಲ್ಲಿ ಗೆಲುವು ಸಾಧಿಸುವ ನಿಮ್ಮ ಪ್ರಯತ್ನ ಗಟ್ಟಿಯಾಗಿರಬೇಕು. ಛಲ ಬಿಡದೆ ಓದುವ ಮೂಲಕ ಗೆಲವು ಸಾಧಿಸಬೇಕು ಎಂದು ಹಿತ ನುಡಿದರು.

ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಗೆಲುವು ಸಾಧಿಸುವುದು ಅಷ್ಟು ಸುಲಭದ ಸಂಗತಿಯಲ್ಲ. ಈ ಭಯ ನಿಮ್ಮನ್ನು ಸದಾ ಎಚ್ಚರಿಸಲಿದ್ದು, ಗೆಲುವಿನ ಹಾದಿ ತೋರಿಸುತ್ತದೆ. ಕೆ–ಸೆಟ್ ಮತ್ತು ಯುಜಿಸಿ–ನೆಟ್ ಪರೀಕ್ಷೆಯು ಯುಪಿಎಸ್‌ಸಿ ಮತ್ತು ಕೆಪಿಎಸ್‌ಸಿ ಪರೀಕ್ಷೆಗಿಂತಲೂ ಕಠಿಣವಾಗಿದೆ. ನನ್ನ ಅನುಭವದಿಂದ ಈ ಮಾತು ಹೇಳುತ್ತಿದ್ದೇನೆ ಎಂದು ಹೇಳಿದರು.

ಸಮಯ ವ್ಯರ್ಥ ಮಾಡದೆ ಪಠ್ಯಕ್ರಮದ ಬಗ್ಗೆ ಗಮನಹರಿಸಿ. ಈ ಮೊದಲು ತಂತ್ರಜ್ಞಾನದ ಸೌಲಭ್ಯವಿಲ್ಲದ ಕಾರಣ ಇಂತಹ ಪರೀಕ್ಷೆಗಳಲ್ಲಿ ಉತ್ತೀರ್ಣವಾಗುವುದು ಬಹಳ ಕಷ್ಟ, ಆದರೆ ಈಗ ಆಧುನಿಕ ಮಾಹಿತಿ ತಂತ್ರಜ್ಞಾನ ನಿಮ್ಮ ನೆರವಿಗೆ ಬರುತ್ತದೆ. ಚಾಟ್ ಜಿಪಿಟಿ ಮತ್ತು ಎಐನಂತಹ ಡಿಜಿಟಲ್ ಸಾಧನಗಳು ನಿಮ್ಮ ಓದಿಗೆ ಸಹಕಾರಿಯಾಗಲಿದೆ. ನೀವು 10 ಪ್ರಶ್ನೆ ಕೇಳಿದರೆ 20 ಕ್ಕೂ ಹೆಚ್ಚು ವಿವಿಧ ರೀತಿಯ ಉತ್ತರ ದೊರೆಯುತ್ತದೆ. ಇದನ್ನು ಸಕರಾತ್ಮಕವಾಗಿ ಬಳಸಿಕೊಂಡು ಗುರಿ ಸಾಧಿಸಿ ಎಂದು ಸಲಹೆ ನೀಡಿದರು.

ಸ್ಪರ್ಧಾತ್ಮಕ ಪರೀಕ್ಷೆ ಎಂಬುದು ಟ್ರಬಲ್ ಶೂಟರ್ ಇದ್ದ ಹಾಗೆ, ವರ್ಷ ಪೂರ್ತಿ ಓದಿದ ಜ್ಞಾನವನ್ನು ಕೇವಲ ಮೂರು ಗಂಟೆ ಅವಧಿಯಲ್ಲಿ ತೋರಿಸಬೇಕು. ಆದ ಕಾರಣ ಓದುವುದರ ಬಗ್ಗೆ ಶಿಸ್ತು ಕಂಡುಕೊಳ್ಳಿ. ಏನನ್ನು ಓದಬೇಕು, ಎಷ್ಟು ಓದಬೇಕು, ಯಾವ ಸಮಯದಲ್ಲಿ ಓದಬೇಕು ಎಂಬ ಬಗ್ಗೆ ಸ್ಪಷ್ಟತೆ ಕಂಡುಕೊಳ್ಳಿ ಎಂದು ಅಕ್ರಂ ಪಾಷ ತಿಳಿಸಿದರು.

ಇದೇ ವೇಳೆ ಮಾತನಾಡಿದ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಅವರು, ಇಲ್ಲಿ 45 ದಿನಗಳ ತರಬೇತಿ ನೀಡಲಾಗುವುದು. ಇದರಿಂದ ನಿಮ್ಮ ಜ್ಞಾನ ದ್ವಿಗುಣಗೊಂಡು ಗುರಿ ಮುಟ್ಟಲು ಸಹಕಾರಿಯಾಗಲಿದೆ ಎಂದು ಹೇಳಿದರು.

ಕುಲಸಚಿವ ಪ್ರೊ.ಎಸ್.ಕೆ.ನವೀನ್ ಕುಮಾರ್ ಮಾತನಾಡಿ, ನಿಮ್ಮ ಓದಿನಲ್ಲಿ ಏನಾದರೂ ಸಂಶಯಗಳಿದ್ದರೆ ಅದನ್ನು ಶಿಕ್ಷಕರಿಂದ ಪರಿಹರಿಸಿಕೊಳ್ಳಿ ಎಂದು ಕಿವಿಮಾತು ಹೇಳಿದರು.

ಪರೀಕ್ಷಾಂಗ ಕುಲಸಚಿವ ಡಾ.ಸಿ.ಎಸ್. ಆನಂದಕುಮಾರ್, ಶೈಕ್ಷಣಿಕ ಡೀನ್ ರಾಮನಾಥಂ ನಾಯ್ಡು, ಅಧ್ಯಯನ ಕೇಂದ್ರಗಳ ಡೀನ್ ಡಾ.ಎನ್.ಆರ್. ಚಂದ್ರೇಗೌಡ, ಹಣಕಾಸು ಅಧಿಕಾರಿ ಡಾ.ಎಸ್. ನಿರಂಜನರಾಜ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಅಲ್ಲದೆ ಶಿಬಿರದ ಸಂಯೋಜನಾಧಿಕಾರಿ ಜೈನಹಳ್ಳಿ ಸತ್ಯನಾರಾಯಣ ಗೌಡ, ಸಿದ್ದೇಶ್ ಹೊನ್ನೂರ್, ಬಿ.ಗಣೇಶ್, ರಾಮಚಂದ್ರ, ಭಾರ್ಗವಿ, ಪ್ರೊ.ಕುಶಾಲ್ ಕುಮಾರ್, ಸಿದ್ದೇಗೌಡ ಕೂಡ ಹಾಜರಿದ್ದರು.

ಆನ್‌ಲೈನ್ ಜೂಜಿಗೆ ದಾಸನಾಗಿದ್ದ ಹೆಡ್ ಕಾನ್‌ಸ್ಟೇಬಲ್ ನೇಣು ಬಿಗಿದುಕೊಂಡು ಆತ್ಮಹತ್ಯೆ

ಚಿಕ್ಕಬಳ್ಳಾಪುರ, ಜು.16– ಹೆಡ್ ಕಾನ್ಸ್‌ಟೇಬಲ್ ಒಬ್ಬರು ಪೊಲೀಸ್ ಠಾಣೆ ಆವರಣದಲ್ಲೇ ಇರುವ ಕ್ವಾಟ್ರಸ್‌ನಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಚಿಕ್ಕಬಳ್ಳಾಪುರದಲ್ಲಿ ನಡೆದಿದೆ. ಮಂಚೇನಹಳ್ಳಿ ಪೊಲೀಸ್ ಠಾಣೆಯ ಹೆಡ್ ಕಾನ್ಸ್‌ಟೇಬಲ್ ರಾಜಶೇಖರ್ (45) ಆತ್ಮಹತ್ಯೆ ಮಾಡಿಕೊಂಡವರು. ಸ್ಥಳಕ್ಕೆ ಚಿಕ್ಕಬಳ್ಳಾಪುರ ಎಸ್ಪಿ ಕುಶಲ್ ಚೌಕ್ಸೆ ಭೇಟಿ ನೀಡಿ ಪರಿಶೀಲಿಸಿದ್ದಾರೆ.

ಮೊಬೈಲ್ ಆನ್‌ಲೈನ್ ಜೂಜಾಟಗಳಿಗೆ ದಾಸನಾಗಿದ್ದ ಕಾನ್ಸ್‌ಟೇಬಲ್ ಲಕ್ಷಾಂತರ ರೂಪಾಯಿ ಸಾಲ ಮಾಡಿಕೊಂಡಿದ್ದರು. ಹಲವರ ಬಳಿ ಬಡ್ಡಿಗೆ ಕೈಸಾಲ ಮಾಡಿಕೊಂಡಿದ್ದರು. ಈ ಬಗ್ಗೆ ತನ್ನ ಪೋಷಕರ ಬಳಿ ಕಷ್ಟ ಹೇಳಿಕೊಂಡಿದ್ದರು. ಜೊತೆಗೆ ಪತ್ನಿಯ ಚಿನ್ನಾಭರಣವನ್ನ ಸಾಲ ತೀರಿಸಲು ಅಡವಿಟ್ಟಿದ್ದರು ಎಂದು ಕುಟುಂಬದ ಮೂಲಗಳಿಂದ ತಿಳಿದುಬಂದಿದೆ.

ಕುಮಾರ ರಾಮು ಅವರಿಗೆ ಸನ್ಮಾನ...



ಕರ್ನಾಟಕ ದಲಿತ ಸಂಘರ್ಷ ಸಮಿತಿ, ದಾದಾ ಸಾಹೇಬ್ ಡಾ.ಎನ್.ಮೂರ್ತಿ ಸ್ಥಾಪಿತ ಮೈಸೂರು ಜಿಲ್ಲಾ ಸಮಿತಿ ವತಿಯಿಂದ ಕರ್ನಾಟಕ ರಾಜ್ಯ ಆದಿ ಜಾಂಬವ ಅಭಿವೃದ್ಧಿ ನಿಗಮದ ನೂತನ ನಿರ್ದೇಶಕ ಕುಮಾರ ರಾಮು ಅವರನ್ನು ಜಿಲ್ಲಾಧ್ಯಕ್ಷ ಶ್ರೀನಿವಾಸ್ ಸನ್ಮಾನಿಸಿದರು. ಚಿತ್ರದಲ್ಲಿ ರಾಯನಹಳ್ಳಿ ಸ್ವಾಮಿ, ಹುಣಸೂರು ಶ್ರೀನಿವಾಸ್ ಟಿ.ನರಸೀಪುರ ಬಲ್ಲಯ್ಯ, ಪುಟ್ಟಯ್ಯ, ಸಿಡಿ ವೆಂಕಟೇಶ್, ಹಡಜನ ಸ್ವಾಮಿ, ಹುಣಸೂರು ಶಿವಮ್ಮ, ರವಿ ಇತರರು ಉಪಸ್ಥಿತರಿದ್ದರು.

ಇಂದು ಚಾಮುಂಡೇಶ್ವರಿ ವರ್ಧಂತಿ ಅಂಗವಾಗಿ ಮಹಿಳೆಯರಿಗೆ ಬಾಗಿನ

ಮೈಸೂರು,ಜು.16–ದುರ್ಗಾ ಫೌಂಡೇಶನ್ ಹಾಗೂ ಕೆವಿಕೆ ಫೌಂಡೇಶನ್ ವತಿಯಿಂದ ಚಾಮುಂಡೇಶ್ವರಿ ವರ್ಧಂತಿ ಮಹೋತ್ಸವದ ಅಂಗವಾಗಿ ಚಾಮುಂಡಿ ಬೆಟ್ಟದ ಸ್ವಚ್ಛತಾ ಸಿಬ್ಬಂದಿಗೆ ಸೀರೆ ಹಾಗೂ ಬಾಗಿನ ವಿತರಣಾ ಕಾರ್ಯಕ್ರಮವನ್ನು ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ಜು.17ರಂದು ಬೆಳಗ್ಗೆ 8 ಗಂಟೆಗೆ ಹಮ್ಮಿಕೊಳ್ಳಲಾಗಿದೆ. ಮುಖ್ಯ ಅತಿಥಿಗಳಾಗಿ ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮಿ ಆಗಮಿಸಲಿದ್ದಾರೆ ಎಂದು ಶ್ರೀ ದುರ್ಗಾ ಫೌಂಡೇಶನ್ ಅಧ್ಯಕ್ಷೆ ರೇಖಾ ಶ್ರೀನಿವಾಸ್ ತಿಳಿಸಿದ್ದಾರೆ.

ಉಚಿತ ಮೂಳೆ ಖನಿಜ ಸಾಂದ್ರತೆ ತಪಾಸಣಾ ಶಿಬಿರ

ಮೈಸೂರು, ಜು. 16– ಮೈಸೂರಿನ ವಿದ್ಯಾರಣ್ಯಪುರಂ, ಶ್ರೀ ಕರುಮಾರಮ್ಮ ದೇವಸ್ಥಾನದ ಸಮೀಪವಿರುವ ಸ್ವಸ್ತಿ ಆರ್ಥೋ ಮತ್ತು ಇಎನ್‌ಟಿ ಕ್ಲಿನಿಕ್‌ನಲ್ಲಿ ಜು.19ರಂದು ಬೆಳಗ್ಗೆ 10ರಿಂದ ಮಧ್ಯಾಹ್ನ 2ರವರೆಗೆ ಉಚಿತ ಮೂಳೆ ಖನಿಜ ಸಾಂದ್ರತೆ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 8884842600, 9110252212 ಸಂಪರ್ಕಿಸಬಹುದು.

ಉಪನ್ಯಾಸಕರಿಂದ ವಿದ್ಯಾರ್ಥಿನಿ ಮೇಲಿನ ಅತ್ಯಾಚಾರ ಖಂಡಿಸಿ ಪ್ರತಿಭಟನೆ



ವಿದ್ಯಾರ್ಥಿನಿಯ ಮೇಲೆ ಅತ್ಯಾಚಾರವೆಸಗಿರುವ ಉಪನ್ಯಾಸಕರ ಕೃತ್ಯವನ್ನು ಖಂಡಿಸಿ, ಮೈಸೂರಿನ ಹಳೇ ಜಿಲ್ಲಾಧಿಕಾರಿ ಕಚೇರಿ ಬಳಿ ಎಐಡಿಎಸ್‌ಒ ವಿದ್ಯಾರ್ಥಿ ಸಂಘಟನೆ ನೇತೃತ್ವದಲ್ಲಿ ಬುಧವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಜು.16(ಜಿಎ)–ವಿದ್ಯಾರ್ಥಿನಿಯ ಮೇಲೆ ಅತ್ಯಾಚಾರವೆಸಗಿ, ಬೆದರಿಕೆಯೊಡ್ಡಿರುವ, ಇಬ್ಬರು ಉಪನ್ಯಾಸಕರ ಹೇಯ ಕೃತ್ಯವನ್ನು ಖಂಡಿಸಿ, ಮೈಸೂರಿನ ಹಳೇ ಜಿಲ್ಲಾಧಿಕಾರಿ ಕಚೇರಿ ಬಳಿ ಎಐಡಿಎಸ್‌ಒ ವಿದ್ಯಾರ್ಥಿ ಸಂಘಟನೆ ನೇತೃತ್ವದಲ್ಲಿ ಬುಧವಾರ ಪ್ರತಿಭಟನೆ ನಡೆಸಲಾಯಿತು.

ಈ ವೇಳೆಯಲ್ಲಿ ಎಐಡಿಎಸ್‌ಓ ರಾಜ್ಯ ಖಜಾಂಚಿ ಸುಭಾಷ್ ಮಾತನಾಡಿ, ಬೆಂಗಳೂರಿನ ವಿದ್ಯಾರ್ಥಿನಿಯ ಮೇಲೆ ಅತ್ಯಾಚಾರವೆಸಗಿ, ಬೆದರಿಕಯೊಡ್ಡಿರುವ ಇಬ್ಬರು ಉಪನ್ಯಾಸಕರಿಗೆ ಕಠಿಣ ಶಿಕ್ಷೆ ವಿಧಿಸಬೇಕೆಂದು ಅಗ್ರಹಿಸಿ, ಹೆಣ್ಣು ಮಕ್ಕಳಿನ ಮೇಲಿನ ದೌರ್ಜನ್ಯ ದಿನೇ ದಿನೇ ಹೆಚ್ಚುತ್ತಿದೆ, ಒರಿಸ್ಸಾದಲ್ಲಿ ಕಾಲೇಜಿನ ಉಪನ್ಯಾಸಕರು ನೀಡಿರುವ ಲೈಂಗಿಕ ಕಿರುಕುಳದಿಂದ ಬೇಸತ್ತು, ಒಬ್ಬ ವಿದ್ಯಾರ್ಥಿನಿ ಬೆಂಕಿ ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಆರೋಪಿಗಳಿಗೆ ಕಠಿಣ ಶಿಕ್ಷೆ ನೀಡದಿದ್ದರೆ, ಇಂತಹ ಪ್ರಕರಣಗಳು ಹೆಚ್ಚಾಗುತ್ತವೆ ಎಂದು ಕಿಡಿಕಾರಿದರು.

ಈ ಘೋರ ಘಟನೆಯು ಶಿಕ್ಷಣ ಸಂಸ್ಥೆಗಳಲ್ಲಿ ವ್ಯಾಪಕವಾಗಿರುವ ಲೈಂಗಿಕ ದೌರ್ಜನ್ಯ ಸಮಸ್ಯೆಗಳಿಗೆ ಹಿಡಿದ ಕನ್ನಡಿಯಾಗಿದೆ. ಯುವ ಮನಸ್ಸುಗಳನ್ನು ಸ್ವಚ್ಛಗೊಳಿಸಿ ಅವರ ಭವಿಷ್ಯವನ್ನು ಉಜ್ವಲಗೊಳಿಸಬೇಕಾದ ಪ್ರಾಧ್ಯಾಪಕರು ಇಂತಹ ಹೇಯ ಕೃತ್ಯಗಳಲ್ಲಿ ಭಾಗಿಯಾಗಿರುವುದು ದುರಂತವಾಗಿದೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಘಟನೆಯ ಬಗ್ಗೆ ತ್ವರಿತ, ನಿಷ್ಪಕ್ಷಪಾತ ಮತ್ತು ಸಂಪೂರ್ಣ ತನಿಖೆ ನಡೆಸಿ, ಎಲ್ಲಾ ಅಪರಾಧಿಗಳನ್ನು ಕೂಡಲೇ ಕಾನೂನಿನ ಮುಂದೆ ತರಬೇಕು.ಆರೋಪಿ ಉಪನ್ಯಾಸಕರನ್ನು ತಕ್ಷಣವೇ ಅಮಾನತುಗೊಳಿಸಬೇಕು. ಇದರಲ್ಲಿ ಪ್ರಬಲ ಕುಂದು ಕೊರತೆ ನಿವಾರಣಾ ಕಾರ್ಯಸಮಿತಿ ಸ್ಥಾಪಿಸುವುದು ಸೇರಿದಂತೆ, ಲೈಂಗಿಕ ಕಿರುಕುಳ ಮತ್ತು ದೌರ್ಜನ್ಯದಿಂದ ವಿದ್ಯಾರ್ಥಿಗಳನ್ನು ರಕ್ಷಿಸಲು ಶಿಕ್ಷಣ ಸಂಸ್ಥೆಗಳಲ್ಲಿ ಕಠಿಣ ಕ್ರಮಗಳನ್ನು ಜಾರಿಗೊಳಿಸಬೇಕು ಸಂತ್ರಸ್ತೆಗೆ ಸಂಪೂರ್ಣ ಬೆಂಬಲ ನೀಡಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾಧ್ಯಕ್ಷೆ ಚಂದ್ರಕಲಾ, ಕಾರ್ಯದರ್ಶಿ ನಿತಿನ್, ಉಪಾಧ್ಯಕ್ಷೆ ಸ್ವಾತಿ, ಪದಾಧಿಕಾರಿಗಳಾದ ಹೇಮ, ಚಂದ್ರಿಕಾ, ದಿಶ, ಅಂಜಲಿ, ಅಭಿಷೇಕ್, ಮಹಾರಾಜ ಮತ್ತು ಮಹಾರಾಣಿ ಕಾಲೇಜಿನ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ದೇಶ – ವಿದೇಶ

ಗಾಜಾದಲ್ಲಿ ನೆರವು ಕೇಂದ್ರದ ಬಳಿ ಕಾಲ್ತುಳಿತ: 20 ಮಂದಿ ಸಾವು

ಟೆಲ್‌ಅವೀವ್: ಗಾಜಾಪಟ್ಟಿಯಲ್ಲಿರುವ ನಿರಾಶ್ರಿತರ ನೆರವು ವಿತರಣಾ ಕೇಂದ್ರದ ಬಳಿ ಕಾಲ್ತುಳಿತ ಸಂಭವಿಸಿ 20 ಮಂದಿ ಪ್ಯಾಲೆಸ್ಟೀನಿಯರು ಮೃತಪಟ್ಟಿದ್ದಾರೆಂದು ಗಾಜಾದಲ್ಲಿ ನೆರವು ಕಾರ್ಯಾಚರಣೆ ನಡೆಸುತ್ತಿರುವ ಇಸ್ರೇಲ್ ಬೆಂಬಲಿತ ಅಮೆರಿಕ ಮೂಲದ ಸಂಸ್ಥೆ ತಿಳಿಸಿದೆ.



ಖಾನ್ ಯೂನಿಸ್ ಪ್ರದೇಶದಲ್ಲಿರುವ ಕೇಂದ್ರದ ಬಳಿ ಕಾಲ್ತುಳಿತ ಸಂಭವಿಸಿ 19 ಮಂದಿ ಮೃತಪಟ್ಟಿದ್ದಾರೆ. ಅದೇ ಪ್ರದೇಶದಲ್ಲಿ ನಡೆದ ಸಂಘರ್ಷದ ವೇಳೆ ಚೂರಿ ಇರಿತದಿಂದ ಮತ್ತೊಬ್ಬ ವ್ಯಕ್ತಿ ಮೃತಪಟ್ಟಿದ್ದಾರೆ ಎಂದು ಸಂಸ್ಥೆಯ ಅಧಿಕಾರಿಗಳು ಹೇಳಿದ್ದಾರೆ. ಅಲ್ಲದೇ, ನೆರವು ವಿತರಣಾ ಕೇಂದ್ರಗಳ ಬಳಿ ಪ್ರಕ್ಷುಬ್ಧತೆ ಸೃಷ್ಟಿಯಾಗುತ್ತಿದೆ. ಜನರನ್ನು ಬೆದರಿಸುವಂತಹ, ಹಾದಿತಪ್ಪಿಸುವಂತ ಸುಳ್ಳು ಮಾಹಿತಿಗಳನ್ನು ಹಮಾಸ್ ಹರಡುತ್ತಿರುವುದರಿಂದ ಜನರು ಗಾಬರಿಗೊಳ್ಳುತ್ತಿದ್ದಾರೆ. ಇದರಿಂದ ಕಾಲ್ತುಳಿತ, ಸಂಘರ್ಷದಂತಹ ಘಟನೆಗಳು ನಡೆಯುತ್ತಿವೆ ಎಂದೂ ಸಂಸ್ಥೆ ಆರೋಪಿಸಿದೆ.

ಪಾಕ್ ಮೂಲದ ಜೆಇಎಂ ಉಗ್ರ ಸಂಘಟನೆಯ ಟಾಪ್ ಕಮಾಂಡರ್ ಹೈದರ್ ಹತ್ಯೆ

ಜಮ್ಮು: ಜಮ್ಮು–ಕಾಶ್ಮೀರದಲ್ಲಿ ಪಾಕಿಸ್ತಾನ ಮೂಲದ ಜೈಶ್–ಎ–ಮೊಹಮ್ಮದ್ (ಎಇಎ) ಭಯೋತ್ಪಾದಕರ ಸಂಘಟನೆಯ ಟಾಪ್ ಕಮಾಂಡರ್‌ನನ್ನು ಭದ್ರತಾ ಪಡೆಗಳು ಹೊಡೆದುರುಳಿಸಿವೆ. ಉಧಮ್ ಪುರ ಜಿಲ್ಲೆಯ ದುಡು–ಬಸಂತಗಢ ಅರಣ್ಯದಲ್ಲಿ ನಡೆದ ಎನ್‌ಕೌಂಟರ್‌ನಲ್ಲಿ ಭಯೋತ್ಪಾದಕ ಪಾಕಿಸ್ತಾನ ಮೂಲದ ಜೈಶ್–ಎ–ಮೊಹಮ್ಮದ್ (ಜೆಇಎಂ) ಸಂಘಟನೆಯ ಓರ್ವ ಟಾಪ್ ಕಮಾಂಡರ್ ನನ್ನು ಹತ್ಯೆ ಮಾಡಲಾಗಿದೆ. ಆತ ಕಳೆದ 4 ವರ್ಷಗಳಿಂದ ಈ ಪ್ರದೇಶದಲ್ಲಿ ಸಕ್ರಿಯನಾಗಿದ್ದ ಎಂದು ಜಮ್ಮು ಮತ್ತು ಕಾಶ್ಮೀರ ಪೊಲೀಸ್ ಮಹಾನಿರ್ದೇಶಕ ನಳಿನ್ ಪ್ರಭಾತ್ ಬುಧವಾರ ತಿಳಿಸಿದ್ದಾರೆ. ಭಯೋತ್ಪಾದಕರನ್ನು ಸದೆಬಡಿಯಲು ಭದ್ರತಾ ಪಡೆಗಳು ತಮ್ಮ ಕಾರ್ಯಾಚರಣೆಯನ್ನು ಮುಂದುವರೆಸುತ್ತಿದ್ದು, ಜನರ ಬೆಂಬಲವಿಲ್ಲದೆ ಪೊಲೀಸರು ಯಶಸ್ವಿಯಾಗಲು ಸಾಧ್ಯವಿಲ್ಲ ಎಂದರು. ಅಖ್ನೂರ್ ಪೊಲೀಸ್ ಠಾಣೆಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಭಯೋತ್ಪಾದನಾ ವಿರೋಧಿ ಕಾರ್ಯಾಚರಣೆಗಳು ನಿರಂತರವಾಗಿ ನಡೆಯುತ್ತಿವೆ. ಇತ್ತೀಚೆಗೆ, ದುಡು–ಬಸಂತಗಢ ಅರಣ್ಯದಲ್ಲಿ ದೊಡ್ಡ ಯಶಸ್ಸನ್ನು ಪಡೆದಿದ್ದೇವೆ. ಅಲ್ಲಿ ಕಳೆದ ನಾಲ್ಕು ವರ್ಷಗಳಿಂದ ಸಕ್ರಿಯರಾಗಿದ್ದ ಜೈಶ್–ಎ–ಮೊಹಮ್ಮದ್ ಸಂಘಟನೆಯ ಟಾಪ್ ಕಮಾಂಡರ್‌ನನ್ನು ಹತ್ಯೆ ಮಾಡಲಾಗಿದೆ ಎಂದರು.



ಇರಾಕ್‌ನ ತೈಲೋತ್ಪಾದನಾ ಘಟಕದ ಮೇಲೆ ಡ್ರೋನ್ ದಾಳಿ

ಬಾಗ್ದಾದ್: ಇರಾಕ್‌ನ ಮತ್ತೊಂದು ತೈಲೋತ್ಪಾದನಾ ಘಟಕದ ಮೇಲೆ ಡ್ರೋನ್ ದಾಳಿ ನಡೆದಿದೆ.



ಝಾಕೋ ಜಿಲ್ಲೆಯಲ್ಲಿನ ತೈಲೋತ್ಪಾದನಾ ಘಟಕದ ಮೇಲೆ ಎರಡು ಡ್ರೋನ್‌ಗಳ ಮೂಲಕ ದಾಳಿ ನಡೆಸಲಾಗಿದೆ. ಘಟಕಕ್ಕೆ ಹಾನಿಯಾಗಿದೆ ಆದರೆ ಯಾರಿಗೂ ಗಾಯಗಳಾಗಿಲ್ಲ ಎಂದು ಕುರ್ದಿಶ್ ಭಾಗದ ಭಯೋತ್ಪಾದನಾ ನಿಗ್ರಹ ಇಲಾಖೆ ತಿಳಿಸಿದೆ. ಯಾವುದೇ ಸಂಘಟನೆಯೂ ಈವರೆಗೆ ದಾಳಿಯ ಹೊಣೆಯನ್ನು ಹೊತ್ತುಕೊಂಡಿಲ್ಲ. ಕುರ್ದಿಸ್ತಾನ ಆರ್ಥಿಕತೆಯನ್ನು ಅಸ್ಥಿರಗೊಳಿಸಲು ಮತ್ತು ನೌಕರರ ಸುರಕ್ಷತೆಗೆ ಬೆದರಿಕೆ ಒಡ್ಡಲು ದಾಳಿಗಳನ್ನು ನಡೆಸಲಾಗುತ್ತಿದೆ ಎಂದು ಕುರ್ದಿಶ್ ಪ್ರದೇಶದ ನೈಸರ್ಗಿಕ ಸಂಪನ್ಮೂಲ ಸಚಿವರು ತಿಳಿಸಿದ್ದಾರೆ.

ಇರಾಕ್‌ನ ದೋಹುಕ್ ಪ್ರಾಂತ್ಯದಲ್ಲಿ ಅಮೆರಿಕ ಕಂಪನಿಯ ತೈಲೋತ್ಪಾದನಾ ಘಟಕದ ಮೇಲೆ ದಾಳಿ ನಡೆದ ಬೆನ್ನಲ್ಲೇ ಝಾಕೋ ಜಿಲ್ಲೆಯಲ್ಲಿಯೂ ದಾಳಿ ನಡೆದಿದೆ.

ಅಮರನಾಥ ಯಾತ್ರೆಗೆ ತೆರಳಿದ 6,064 ಯಾತ್ರಿಕರ ತಂಡ

ಜಮ್ಮು: ಹಿಮಾಲಯದ ತಪ್ಪಲಿನಲ್ಲಿರುವ ಅಮರನಾಥನ ದರ್ಶನ ಪಡೆಯಲು 6,064 ಯಾತ್ರಿಕರ ತಂಡವೊಂದು ಬುಧವಾರ ತೆರಳಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಜುಲೈ 3ರಿಂದ ಈ ಬಾರಿಯ ಅಮರನಾಥ ಯಾತ್ರೆ ಆರಂಭವಾಗಿದೆ.



ಅನಂತನಾಗ್‌ನ ನುನ್ವಾನ್–ಪಹಲ್ಗಾಮ್ ಹಾಗೂ ಗಂದರ್ಬಲ್ ಬಳಿಯ ಬಾಲ್ಟಾಲ್ ಬೇಸ್ ಕ್ಯಾಂಪ್ ಮೂಲಕ ಎರಡು ಬೇರೆ ಬೇರೆ ಯಾತ್ರಿಕರ ತಂಡ ತೆರಳಿದ್ದು, ಅದರಲ್ಲಿ 1,511 ಮಹಿಳೆಯರಿದ್ದಾರೆ. ಭಯೋತ್ಪಾದಕರ ಬೆದರಿಕೆಯಿರುವ ಕಾರಣ ಸೂಕ್ತ ಭದ್ರತಾ ವ್ಯವಸ್ಥೆಯನ್ನು ಮಾಡಲಾಗಿದೆ. ಪಹಲ್ಗಾಮ್‌ನಿಂದ 139 ವಾಹನಗಳಲ್ಲಿ 3,593 ಯಾತ್ರಿಕರು ತೆರಳಿದ್ದಾರೆ. ಬಾಲ್ಟಾಲ್ ಬೇಸ್ ಕ್ಯಾಂಪ್‌ನಿಂದ 95 ವಾಹನಗಳಲ್ಲಿ 2,471 ಭಕ್ತಾದಿಗಳು ಯಾತ್ರೆಗೆ ತೆರಳಿದ್ದಾರೆ. 38 ದಿನಗಳ ವಾರ್ಷಿಕ ಅಮರನಾಥ ಯಾತ್ರೆಗೆ ಎರಡು ಮಾರ್ಗದಲ್ಲಿ ಯಾತ್ರಿಕರು ತೆರಳಲಿದ್ದಾರೆ. ಈ ಬಾರಿಯ ಯಾತ್ರೆಯು ಆಗಸ್ಟ್ 9ಕ್ಕೆ ಸಂಪೂರ್ಣಗೊಳ್ಳಲಿದೆ. ಇದುವರೆಗೂ 2.35 ಲಕ್ಷ ಭಕ್ತಾದಿಗಳು ಅಮರನಾಥನ ದರ್ಶನ ಪಡೆದುಕೊಂಡಿದ್ದಾರೆ.

ಮಾದಕವಸ್ತುಗಳ ಕಳ್ಳಸಾಗಣೆ: ಕೆನಡಾದ ಒಪಿಂದರ್ ಸಿಂಗ್ ಸಿಯಾನ್ ಬಂಧನ

ಒಟ್ಟಾವಾ: ಅಂತರರಾಷ್ಟ್ರೀಯ ಮಟ್ಟದಲ್ಲಿ ಮಾದಕ ವಸ್ತುಗಳ ಕಳ್ಳಸಾಗಣೆ ಮಾಡುತ್ತಿದ್ದ ಆರೋಪದಲ್ಲಿ ಒಪಿಂದರ್ ಸಿಂಗ್ ಸಿಯಾನ್ ಎಂಬಾತನನ್ನು ಅಮೆರಿಕದಲ್ಲಿ ಬಂಧಿಸಲಾಗಿದೆ. ಬಂಧಿತ ವ್ಯಕ್ತಿಯು ಭಾರತ ಸಂಜಾತ ಕೆನಡಾ ಪ್ರಜೆಯಾಗಿದ್ದು, ಐರಿಶ್ ಗ್ಯಾಂಗ್‌ನ ಪಾತಕಿಗಳ ಜತೆ ಸೇರಿ ಕೃತ್ಯ ಎಸಗುತ್ತಿದ್ದ ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ.



ಅಮೆರಿಕದ ಮಾದಕವಸ್ತು ನಿಯಂತ್ರಣ ಪ್ರಾಧಿಕಾರವು (ಡಿಇಎ) ನೆವಾಡದಲ್ಲಿ ಕಳೆದ ತಿಂಗಳು ಒಪಿಂದರ್‌ನನ್ನು ಬಂಧಿಸಿದೆ. ಈತ ಚೀನಾದಿಂದ ಮಾದಕವಸ್ತುಗಳನ್ನು ಪಡೆದು ಅದನ್ನು ಲಾಸ್ ಏಂಜಲೀಸ್‌ನ ಬಂದರಿನ ಮೂಲಕ ಆಸ್ಟ್ರೇಲಿಯಾಗೆ ತಲುಪಿಸಲು ಟರ್ಕಿ ಹಾಗೂ ಅಮೆರಿಕದ ಕ್ರಿಮಿನಲ್ ತಂಡಗಳಿಗೆ ಸಹಾಯ ಮಾಡುತ್ತಿದ್ದ ಎಂದು ತಿಳಿಸಿದೆ. ಮಾದಕವಸ್ತು ಸಾಗಣೆಯಲ್ಲಿ ನಿರತವಾಗಿರುವ ಐರಿಶ್ ಗ್ಯಾಂಗ್ ಜತೆಗೆ ಮಾತ್ರವಲ್ಲದೇ, ಕೆನಡಾದ ಬ್ರಿಟಿಷ್ ಕೊಲಂಬಿಯಾದಲ್ಲಿರುವ 'ಬ್ರದರ್ಸ್ ಕೀಪರ್ಸ್' ಎಂಬ ಪಾತಕಿಗಳ ಸಂಘಟನೆಯೊಂದಿಗೂ ಒಪಿಂದರ್ ನಂಟು ಹೊಂದಿದ್ದಾನೆಂದೂ ವರದಿಗಳಿಂದ ತಿಳಿದುಬಂದಿದೆ.

ತೊರೆನೂರಲ್ಲಿ ಶುಂಠಿ ಕೃಷಿ ಕ್ಷೇತ್ರೋತ್ಸವ



ತೊರೆನೂರು ಗ್ರಾಮದಲ್ಲಿ ಬುಧವಾರ ಶುಂಠಿ ಕೃಷಿ ಕ್ಷೇತ್ರೋತ್ಸವ ನಡೆಸಲಾಯಿತು.

ಕುಶಾಲನಗರ, ಜು.16–ರೈತರು ಕೃಷಿಯಲ್ಲಿ ನಾವಿಣ್ಯತೆಯನ್ನು ಅಳವಡಿಸಿಕೊಂಡು ಹೆಚ್ಚು ಲಾಭಗಳಿಸಬೇಕು. ಯಾವುದೇ ಬೆಳೆಯಲ್ಲಿ ಸಮಸ್ಯೆ ಉದ್ಭವಿಸಿದರೂ ಕೃಷಿ ವಿಜ್ಞಾನ ಕೇಂದ್ರದಿಂದ ನೆರವು ಪಡೆಯಬಹುದು ಎಂದು ಗೋಣಿಕೊಪ್ಪಲು ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿ ಡಾ. ವೀರೇಂದ್ರ ಕುಮಾರ್ ತಿಳಿಸಿದರು.

ಸಮೀಪದ ತೊರೆನೂರು ಗ್ರಾಮದಲ್ಲಿ ಬುಧವಾರ ಗೋಣಿಕೊಪ್ಪಲು ಕೃಷಿ ವಿಜ್ಞಾನ ಕೇಂದ್ರ, ಕೃಷಿ ಇಲಾಖೆ ಹಾಗೂ ಪ್ರಗತಿಪರ ರೈತ ಒಕ್ಕೂಟದಿಂದ ಏರ್ಪಡಿಸಿದ್ದ ಶುಂಠಿ ಕೃಷಿ ಕ್ಷೇತ್ರೋತ್ಸವ ಹಾಗೂ ರೈತರಿಗೆ ಶುಂಠಿ ಬೆಳೆ ಕುರಿತು ಜಾಗೃತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಶುಂಠಿ ಬೆಳೆಯಲ್ಲಿ ಅಧಿಕ ಇಳುವರಿ ಪಡೆಯಲು ಲಘು ಪೋಷಕಾಂಶಗಳು ಸಹಕಾರಿಯಾಗಿದೆ. ರೈತರು ಕೃಷಿ ವಿಜ್ಞಾನ ಕೇಂದ್ರದಿಂದ ಕೈಗೊಳ್ಳುವ ಪ್ರಾತ್ಯಕ್ಷಿಕೆ, ತರಬೇತಿಗಳಲ್ಲಿ ಪಾಲ್ಗೊಂಡು ಅದರ ಪ್ರಯೋಜನವನ್ನು ಪಡೆಯಬೇಕು ಎಂದರು.

ತಾಲೂಕಿನಲ್ಲಿ ಕಳೆದ ನವೆಂಬರ್, ಡಿಸೆಂಬರ್‌ನಲ್ಲಿ ಶುಂಠಿ ಬೆಳೆಗೆ ಬೆಂಕಿರೋಗ ಕಾಣಿಸಿಕೊಂಡಿದ್ದು, ಈ ಅವಧಿಯಲ್ಲಿ ಹೆಚ್ಚಿನ ಇಬ್ಬನಿ ಹಾಗೂ ಸಾರಜನಕ ಗೊಬ್ಬರ ಬಳಕೆಯಿಂದ ಈ ರೋಗ ಕಾಣಿಸಿಕೊಂಡಿದೆ ಎಂದರು.

ಮಣ್ಣು ಪರೀಕ್ಷಾ ಕೇಂದ್ರದ ವಿಜ್ಞಾನಿ ಕೆ.ಟಿ.ಮೋಹನ್‌ಕುಮಾರ್ ಮಾತನಾಡಿ, ಕೃಷಿಗೆ ಮೊದಲು ಉತ್ತಮ ಜಾಮೀನು ಆಯ್ಕೆ ಮಾಡಿಕೊಳ್ಳಬೇಕು. ಶುಂಠಿ ಮಣ್ಣಿನಲ್ಲಿರುವ ಪೋಷಕಾಂಶಗಳ ಹೀರುವ ಬೆಳೆಯಾಗಿದೆ. ಆದ್ದರಿಂದ ಮಣ್ಣು ಪರೀಕ್ಷೆ ಮಾಡಿಸಬೇಕು .ಮಣ್ಣಿನಲ್ಲಿ ಅತಿಹೆಚ್ಚು ಪೋಷಕಾಂಶ, ಸಾವಯವ ಅಂಶ ಇರುವ ಭೂಮಿ ಸೂಕ್ತವಾಗಿದೆ. ಜೊತೆಗೆ ಜಮೀನಿನಲ್ಲಿ ನೀರು ನಿಲ್ಲದಂತೆ ನೋಡಿಕೊಳ್ಳಬೇಕು. ಇದು ಒಂದೇ ಜಾಗದಲ್ಲಿ ನಿರಂತರವಾಗಿ ಬೆಳೆಯುವ ಬೆಳೆ ಅಲ್ಲ ಎಂದರು.

ತೊರೆನೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಟಿ.ಬಿ.ಜಗದೀಶ್, ಗ್ರಾಪಂ ಮಾಜಿ ಅಧ್ಯಕ್ಷ ಟಿ.ಕೆ.ವಸಂತ, ಶಿರಂಗಾಲ ಗ್ರಾಪಂ ಉಪಾಧ್ಯಕ್ಷ ಬಸವರಾಜು, ತಾಲೂಕು ತಾಳೆ ಬೆಳೆ ಕ್ಷೇತ್ರ ಸಹಾಯಕ ಎಂ.ಕೆ.ಶಶಿಧರ್, ಸೋಮವಾರಪೇಟೆ ರೈತ ಉತ್ಪಾದಕರ ಕಂಪನಿ ನಿರ್ದೇಶಕ ಎಚ್.ಪಿ. ಮಂಜುನಾಥ್, ಎಚ್.ಎಸ್.ಸುಂದರ, ಪ್ರಗತಿಪರ ರೈತರಾದ ಚಂದ್ರಶೇಖರ್, ಟಿ.ಜೆ.ಶೇಷಪ್ಪ, ಮಹೇಶ್ ಮರೂರು. ಟಿ.ಸಿ.ರಘುನಾಥ, ಶುಂಠಿ ವ್ಯಾಪಾರಿ ಮಲ್ಲಿಕಾರ್ಜುನ, ನಿವೃತ್ತ ಸೈನಿಕ ಎಂ.ಎಸ್. ಶ್ರೀಧರ್ ಮುಖಂಡರಾದ ಡಿ.ಆರ್.ಶ್ರೀನಿವಾಸ್ ಮಣಜೂರು ಪಾಲ್ಗೊಂಡಿದ್ದರು.

ನಂತರ ನಡೆದ ಸಂವಾದದಲ್ಲಿ ಶುಂಠಿ ಬೆಳೆಗೆ ಮಹಾಮಾರಿ, ಗೆಡ್ಡೆ ಕೊಳೆರೋಗ ಹಾಗೂ ಮಣ್ಣಿನ ಫಲವತ್ತತೆ, ರೋಗ ನಿಯಂತ್ರಣ, ಔಷಧಗಳ ಬಳಕೆ ಕುರಿತು ವಿಜ್ಞಾನಿಗಳು ರೈತರಿಗೆ ಜಾಗೃತಿ ಮೂಡಿಸಿದರು. ಇದೇ ಸಂದರ್ಭ ವಿಜ್ಞಾನಿಗಳು ಹಾಗೂ ಪ್ರಗತಿಪರ ರೈತರನ್ನು ಸನ್ಮಾನಿಸಿ ಗೌರವಿಸಲಾಯಿತು.

ಕಾಡಾನೆ ಹಾವಳಿ : ತೆಂಗಿನ ಮರ ಬೀಳಿಸಿ ಮನೆ ಧ್ವಂಸ



ಕಾಡಾನೆ ದಾಳಿಯಿಂದ ಕುಡಿಯರ ಗಣೇಶ್ ಮನೆಯ ಮೇಲೆ ತೆಂಗಿನ ಮರಬಿದ್ದಿದ್ದರಿಂದ ಒಂದು ಭಾಗ ಸಂಪೂರ್ಣ ಹಾನಿಯಾಗಿದೆ.

ನಾಪೋಕ್ಲು,ಜು.16– ಯವಕ ಪಾಡಿ ಗ್ರಾಮದಲ್ಲಿ ಕಾಡಾನೆ ತೆಂಗಿನ ಮರ ಬೀಳಿಸಿ ಮನೆಗೆ ಅಪಾರ ಹಾನಿಯಾಗಿರುವ ಘಟನೆ ಜರುಗಿದೆ.

ಕಕ್ಕಬೆ ಕುಂಜಿಲ ಗ್ರಾಮ ಪಂಚಾಯಿತಿಯ ಯವಕಪಾಡಿ ಗ್ರಾಮದ ಕುಡಿಯರ ಕಾಲೋನಿಯಲ್ಲಿ ದಾಂಧಲೆ ನಡೆಸಿ ಗ್ರಾಮದ ನಿವಾಸಿ ಕುಡಿಯರ ಗಣೇಶ್ ಮನೆಯ ಮೇಲೆ ತೆಂಗಿನ ಮರವನ್ನು ಬೀಳಿಸಿ ಮನೆಯ ಒಂದು ಭಾಗ ಸಂಪೂರ್ಣ ಹಾನಿಯುಂಟು ಮಾಡಿದ್ದಲ್ಲದೆ ಮನೆಯ ಸುತ್ತಮುತ್ತ ಅಡ್ಡಾಡಿ ಕೃಷಿ ಗಿಡಗಳನ್ನು ತಿಂದು ನಷ್ಟ ಮಾಡಿದೆ. ಮನೆಯಲ್ಲಿ ಯಾರೂ ಇಲ್ಲದ ಕಾರಣ ಪ್ರಾಣಾಪಾಯದಿಂದ ಪಾರಾಗಿದ್ದು ಯಾವುದೇ ಹಾನಿ ಆಗಿಲ್ಲ

ಬಿರುಸಿನ ಮಳೆಯಿದ್ದುದರಿಂದ ಕುಟುಂಬದ ಮಂದಿ ಕೆಲಸದ ನಿಮಿತ್ತ ಬೇರೆಡೆ ತೆರಳಿದ್ದರಿಂದ ಮನೆ ಖಾಲಿ ಇತ್ತು. ಮುತ್ತಜ್ಜನ ಕಾಲದಿಂದ ವಾಸವಿದ್ದ ಮನೆ ರಾತ್ರಿ ಧ್ವಂಸವಾಗಿದೆ. ಸರಕಾರ ಕಾಲೋನಿಗೆ ರಸ್ತೆ ನಿರ್ಮಿಸಿದ್ದು ಬಿಟ್ಟರೆ ಕಾಡುಪ್ರಾಣಿಗಳಿಂದ ಉಂಟಾಗುವ ಉಪಟಳದ ಬಗ್ಗೆ ಯಾವುದೇ ಪರಿಹಾರ ನೀಡುತ್ತಿಲ್ಲ. ಕಾಡುಪ್ರಾಣಿಗಳಿಂದ ಬಡವರು ಸಮಸ್ಯೆ ಅನುಭವಿಸುತ್ತಿದ್ದು ಸರ್ಕಾರಕ್ಕೆ ಕಾಳಜಿ ಇಲ್ಲ ಎಂದು ಸಂತ್ರಸ್ಥ ಕುಡಿಯರ ಗಣೇಶ್ ಸಹೋದರ ಕುಡಿಯರ ಬಿದ್ದಪ್ಪ ಆರೋಪಿಸಿದರು. ಕಾಡು ಪ್ರಾಣಿ ಗಳಿಂದ ಸಂಕಷ್ಟಕ್ಕೊಳಗಾದವರಿಗೆ ಸೂಕ್ತ ಪರಿಹಾರ ನೀಡಬೇಕೆಂದರು. ಬುಡಕಟ್ಟು ಕೃಷಿಕರ ಸಂಘದ ಅಧ್ಯಕ್ಷ ಕುಡಿಯರ ಮುತ್ತಪ್ಪ ಮಾತನಾಡಿ, ಯವಕಪಾಡಿ, ಮರಂದೋಡ, ಕುಂಜಿಲ ಗ್ರಾಮಗಳಲ್ಲಿನ ಕಾಫಿ ತೋಟಗಳು ಹಾನಿಯಾಗಿವೆ. ಇಲ್ಲಿ ಒಂಟಿ ಸಲಗ ಅಡ್ಡಾಡುತ್ತಿದ್ದು ಪ್ರತಿ ವರ್ಷ ಸಮಸ್ಯೆ ಆಗುತ್ತಿದೆ. ಸಲಗವನ್ನು ಹಿಡಿಯಲು ಕೇಂದ್ರದಿಂದ ಆದೇಶವಾಗಿದ್ದರೂ ಅರಣ್ಯ ಇಲಾಖೆ ವಿಫಲವಾಗಿದೆ. ದಾಳಿಯಿಂದ ಹಾನಿಗೊಳಗಾದ ಮನೆಯನ್ನು ಪುನಃ ನಿರ್ಮಿಸಲು ಕುಟುಂಬಕ್ಕೆ ಹತ್ತು ಲಕ್ಷ ಪರಿಹಾರಕ್ಕೆ ಒತ್ತಾಯಿಸಿದರು.

ಕಕ್ಕಬೆ ಕುಂಜಿಲ ಗ್ರಾಪಂ ಸದಸ್ಯ ಕುಡಿಯರ ಭರತ್‌ಚಂದ್ರ ದೇವಯ್ಯ ಮನೆ ಮೇಲೆ ಮರ ಬಿದ್ದು ನಷ್ಟ ಸಂಭವಿಸಿದೆ. ಕಾಡಾನೆಗಳ ದಾಳಿ ಸಂಕಷ್ಟ ಅರಿಯಲು ಸಿಬ್ಬಂದಿ ಯಾರೂ ಆಗಮಿಸಿಲ್ಲ. ಸಂತ್ರಸ್ಥರಿಗೆ ಪರಿಹಾರ ನೀಡುವ ಕಾರ್ಯವಾಗಬೇಕೆಂದು ಒತ್ತಾಯಿಸಿದ್ದಾರೆ.

ಇಂದು ಶಾಲಾ ಕಾಲೇಜುಗಳಿಗೆ ರಜೆ

ಮಡಿಕೇರಿ, ಜು.16– ಜಿಲ್ಲೆಯಾದ್ಯಂತ ಮಳೆಯ ಅಬ್ಬರ ಮುಂದುವರೆದ ಹಿನ್ನಲೆಯಲ್ಲಿ ನಾಳೆ ಜಿಲ್ಲೆಯ ಎಲ್ಲ ಶಾಲಾ ಕಾಲೇಜುಗಳಿಗೆ ರಜೆ ನೀಡುವಂತೆ ಜಿಲ್ಲಾಧಿಕಾರಿ ವೆಂಕಟರಾಜ ಆದೇಶಿಸಿದ್ದಾರೆ.

ಜಾರ್‌ಧಾಮ್ ಯಾತ್ರೆ ಅನುಭವ ಮೆಲುಕು ಹಾಕಿದ ವೈದ್ಯ



ಹೊಂಬೆಳಕು ಕಿರಣ 233 ಮಾಸಿಕ ತತ್ತ್ವ ಚಿಂತನಾಗೋಷ್ಠಿಯನ್ನು ಡಾ, ಕೆ.ಎನ್.ಚಂದ್ರಶೇಖರ್ ಉದ್ಘಾಟಿಸಿದರು. ಶಾಂತಮಲ್ಲಿಕಾರ್ಜುನ ಸ್ವಾಮೀಜಿ ಡಾ,ಶಿವಪ್ಪ ಉಪಸ್ಥಿತರಿದ್ದರು.

ವಿರಾಜಪೇಟೆ, ಜು.16–ಹಿಮಾಲಯ ಪರ್ವತದಲ್ಲಿ ಪವಿತ್ರವಾದ ನಾಲ್ಕು ನದಿಗಳು ಹುಟ್ಟಿ ಹರಿಯುತ್ತಿರುವ ಉತ್ತರಖಂಡ ಕ್ಷೇತ್ರ ಯತ್ರಾರ್ಥಿಗಳಿಗೆ ಪುಣ್ಯ ಕ್ಷೇತ್ರವಾಗಿದೆ ಎಂದು ವಿರಾಜಪೇಟೆ ವೈದ್ಯ ಪಕ್ಷಿತಜ್ಞರಾದ ಡಾ,ಎಸ್.ವಿ.ನರಸಿಂಹನ್ ಹೇಳಿದರು.

ಸಮೀಪದ ಅರಮೇರಿ ಕಳಂಚೇರಿ ಮಠದ ಶ್ರೀ ಲಿಂಗರಾಜೇಂದ್ರ ಭವನದಲ್ಲಿ ನಡೆದ ಹೊಂಬೆಳಕು ಕಿರಣ 233 ಮಾಸಿಕ ತತ್ತ್ವ ಚಿಂತನಾಗೋಷ್ಠಿ ಕಾರ್ಯಕ್ರಮದಲ್ಲಿ 'ಜಾರ್‌ಧಾಮ್ ಯಾತ್ರೆ' ಹಿಮಾಲಯ ಚಾರಣದ ರೋಮಾಂಚಕ ಅನುಭವ' ಎಂಬ ವಿಷಯದ ಬಗ್ಗೆ ತಮ್ಮ ಉಪನ್ಯಾಸ ನೀಡಿದ ಅವರು, ಜಾರ್‌ಧಾಮ್ ಯಾತ್ರೆಯು ಏಪ್ರಿಲ್ ಕೊನೆ ವಾರದಿಂದ ಸೆಪ್ಟೆಂಬರ್ ತಿಂಗಳ ಕೊನೆಯ ವಾರದವರೆಗೂ ಪ್ರತಿದಿನ ಲಕ್ಷಕ್ಕೂ ಹೆಚ್ಚು ಯಾತಿಕರು ಬಂದು ಹೋಗುತ್ತಾರೆ, ವರ್ಷದಲ್ಲಿ ಆರು ತಿಂಗಳು ಮಾತ್ರ ಈ ಪುಣ್ಯ ಕ್ಷೇತ್ರಕ್ಕೆ ಪ್ರವೇಶ ಇರುವುದಾಗಿ ಪ್ರಾತ್ಯಕ್ಷಿಕೆ [ಸಾಕ್ಷಚಿತ್ರವನ್ನು] ತೋರಿಸಿದರು.

ಕಾರ್ಯಕ್ರಮ ಉದ್ಘಾಟಿಸಿದ ಗೋಣಿಕೊಪ್ಪಲು ವಿವೇಕಾನಂದ ಆರೋಗ್ಯ ಕೇಂದ್ರದ ಡಾ, ಕೆ.ಎನ್.ಚಂದ್ರಶೇಖರ್ ಮಾತನಾಡಿ ಸಮಾಜದಲ್ಲಿ ಸಿಗುವಂಥ ಅವಕಾಶಗಳನ್ನು ವಿದ್ಯಾರ್ಥಿಗಳು ಸದುಪಯೋಗಪಡಿಸಿಕೊಂಡು ದೇಶದ ಏಳಿಗೆಗೆ ಯುವಕರು ಮುಂದಾಗಬೇಕು. ಎಂದರು.

ಕಾರ್ಯಕ್ರಮದ ಸಾನಿಧ್ಯ ವಹಿಸಿದ್ದ ಅರಮೇರಿ ಕಳಂಚೇರಿ ಶ್ರೀಮಠದ ಪೀಠಾಧಿಪತಿ ಶಾಂತಮಲ್ಲಿಕಾರ್ಜುನ ಸ್ವಾಮೀಜಿ ಮಾತನಾಡಿ ಪುಣ್ಯ ಕ್ಷೇತ್ರಗಳ ಯಾತ್ರೆಗಳು ಮನುಷ್ಯನಿಗೆ ಜೀವನದಲ್ಲಿ ಉತ್ತಮವಾದ ಅನುಭವ ದೊರಕಿದಂತಾಗುತ್ತದೆ. ಹಿಮಾಲಯ ಪರ್ವತವನ್ನು ಇನ್ನೂ ಅಧ್ಯಯನ ಮಾಡಲು ಸಾಧ್ಯವಾಗಿಲ್ಲ. 11 ಸಾವಿರದ 755 ಅಡಿಗಳಷ್ಟು ಎತ್ತರದಲ್ಲಿದೆ. ಅಲ್ಲಿನ ದೇವಾಲಯಗಳಿಗೆ 5 ಸಾವಿರದ 500 ವರ್ಷಗಳಿಗೂ ಹೆಚ್ಚು ಇತಿಹಾಸವಿದ್ದು ದೇವಾಲಯಗಳ, ಪುಣ್ಯ ನದಿಗಳ ಕ್ಷೇತ್ರವಾಗಿದೆ ಎಂದು ನುಡಿದರು. ಗೋಣಿಕೊಪ್ಪದ ಕಾಳಿಮಡ ಡಾ,ಶಿವಪ್ಪ ಅವರಿಂದ ಗೀತ ಗಾಯನ ನಡೆಯಿತು. ವಿದ್ಯಾರ್ಥಿ ಜ್ಞಾನ ಲಕ್ಷ್ಮೀ ಸ್ವಾಗತಿಸಿ, ಕೆ.ಬಿ.ಹಿಂಪನ ನಿರೂಪಿಸಿದರೆ, ಸುಸ್ಮಿತಾ ಪ್ರಕಾಶ್ ವಂದಿಸಿದರು.

ದಸರಾ ಸಮಿತಿ ರಚಿಸಲು ಮಾಜಿ ಅಧ್ಯಕ್ಷರ ಆಗ್ರಹ



ಮಡಿಕೇರಿ,ಜು.16– ಐತಿಹಾಸಿಕ ಮಡಿಕೇರಿ ದಸರಾ ಜನೋತ್ಸವಕ್ಕೆ ಇನ್ನು ಕೇವಲ ಎರಡೂವರೆ ತಿಂಗಳು ಮಾತ್ರ ಬಾಕಿ ಉಳಿದಿದ್ದು, ಶೀಘ್ರ ನೂತನ ಮಡಿಕೇರಿ ದಸರಾ ಸಮಿತಿಯನ್ನು ರಚಿಸಬೇಕೆಂದು ದಶ ಮಂಟಪ ಸಮಿತಿಯ ಮಾಜಿ ಅಧ್ಯಕ್ಷ ಬಿ.ಎಂ. ರಾಜೇಶ್ ಒತ್ತಾಯಿಸಿದ್ದಾರೆ.

ಪ್ರತಿ ವರ್ಷ ತರಾತುರಿಯಲ್ಲಿ ಸಮಿತಿ ರಚನೆ ಮಾಡಿ ಸಭೆ ನಡೆಸುವುದರಿಂದ ಗೊಂದಲಗಳು ಏರ್ಪಡುತ್ತಿತ್ತು. ಈ ಬಾರಿ ದಸರಾ ಹಬ್ಬವನ್ನು ಸುಸೂತ್ರವಾಗಿ ಆಚರಿಸಲು ವಿಳಂಬವಿಲ್ಲದೆ ನೂತನ ಸಮಿತಿಯನ್ನು ರಚಿಸಬೇಕು. ಕಳೆದ ಬಾರಿಯ ಲೆಕ್ಕಪತ್ರವನ್ನು ಸಾರ್ವಜನಿಕವಾಗಿ ಮಂಡಿಸುವ ಮೂಲಕ ಪ್ರಸ್ತುತ ವರ್ಷ ಹೆಚ್ಚಿನ ಅನುದಾನಕ್ಕೆ ಪ್ರಸ್ತಾವನೆ ಸಲ್ಲಿಸಬೇಕು ಎಂದು ಪತ್ರಿಕಾ ಹೇಳಿಕೆಯಲ್ಲಿ ಜಿಲ್ಲಾಡಳಿತವನ್ನು ಒತ್ತಾಯಿಸಿದ್ದಾರೆ.

ಜಿಲ್ಲೆಯಲ್ಲಿ ಅತ್ಯಧಿಕ ಮಳೆಯಾಗಿರುವುದರಿಂದ ವಾಣಿಜ್ಯ ಮತ್ತು ಕೃಷಿ ಕ್ಷೇತ್ರ ಸಂಕಷ್ಟಕ್ಕೆ ಸಿಲುಕಿದೆ. ಆದ್ದರಿಂದ ಈ ಬಾರಿಯ ಮಡಿಕೇರಿ ದಸರಾ ಜನೋತ್ಸವಕ್ಕೆ ಸರ್ಕಾರದಿಂದ ರೂ.5 ಕೋಟಿ ಬಿಡುಗಡೆ ಮಾಡಿಸುವ ಮೂಲಕ ಕ್ಷೇತ್ರದ ಶಾಸಕರು ಆರ್ಥಿಕ ಸಬಲೀಕರಣಕ್ಕೆ ಉತ್ತೇಜನ ನೀಡಬೇಕೆಂದು ಬಿ.ಎಂ. ರಾಜೇಶ್ ಮನವಿ ಮಾಡಿದ್ದಾರೆ.

ಕಳೆದ ವರ್ಷ ಬಿಡುಗಡೆಯಾದ ದಸರಾ ಅನುದಾನದಲ್ಲಿ ಶೇ.30ರಷ್ಟನ್ನು ಮಾತ್ರ ಕರಗಗಳು ಹಾಗೂ ದಶ ಮಂಟಪಗಳಿಗೆ ಹಂಚಿಕೆ ಮಾಡಲಾಗಿದೆ. ಇಷ್ಟು ಕಡಿಮೆ ಮೊತ್ತದಲ್ಲಿ ದಶಮಂಟಪಗಳ ತಯಾರಿ ಸಾಧ್ಯವಾಗದೆ ಇರುವುದರಿಂದ ಈ ಬಾರಿಯ ಅನುದಾನದಲ್ಲಿ ಶೇ.60ರಷ್ಟನ್ನು ಕರಗಗಳು ಹಾಗೂ ದಶ ಮಂಟಪಗಳಿಗೆ ಮೀಸಲಿಡಬೇಕೆಂದು ಒತ್ತಾಯಿಸಿದ್ದಾರೆ.

ಜು.19, ಮಾದಾಪುರದಲ್ಲಿ ಸಿಎನ್‌ಸಿಯಿಂದ ಮಾನವ ಸರಪಳಿ ಜನಜಾಗೃತಿ ಕಾರ್ಯಕ್ರಮ



ಎನ್.ಯು.ನಾಚಪ್ಪ

ಮಡಿಕೇರಿ,ಜು.16– ಕೊಡವಲ್ಯಾಂಡ್ ಭೂ ರಾಜಕೀಯ ಸ್ವಾಯತ್ತೆ ಮತ್ತು ಎಸ್‌ಟಿ ವರ್ಗೀಕರಣವು ಸೇರಿದಂತೆ 2026ರ ರಾಷ್ಟ್ರೀಯ ಜನಗಣತಿಯೊಂದಿಗೆ ಜನಾಂಗವಾರು ಮಾಹಿತಿ ಕಲೆಹಾಕುವ ಸಂದರ್ಭ ಕೊಡವರಿಗಾಗಿ ಪ್ರತ್ಯೇಕ ಕೋಡ್ ಮತ್ತು ಕಾಲಮ್ ಅನ್ನು ಸೇರಿಸಬೇಕು. ಸಂಸತ್ ಹಾಗೂ ವಿಧಾನಸಭೆಯಲ್ಲಿ ಕೊಡವರಿಗೆ ವಿಶೇಷ ರಾಜಕೀಯ ಪ್ರಾತಿನಿಧ್ಯ ನೀಡಬೇಕು ಎಂದು ಒತ್ತಾಯಿಸಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆಯಿಂದ ಜು.19 ರಂದು ಮಾದಾಪುರದಲ್ಲಿ 8ನೇ ಮಾನವ ಸರಪಳಿ ಜನಜಾಗೃತಿ ಕಾರ್ಯಕ್ರಮ ನಡೆಯಲಿದೆ ಎಂದು ಸಿಎನ್‌ಸಿ ಅಧ್ಯಕ್ಷ ಎನ್.ಯು. ನಾಚಪ್ಪ ತಿಳಿಸಿದ್ದಾರೆ.

ಶನಿವಾರ ಬೆಳಿಗ್ಗೆ 10.30 ಗಂಟೆಗೆ ಮಾದಾಪುರದಲ್ಲಿ ಮಾನವ ಸರಪಳಿ ನಿರ್ಮಿಸಿ ವಿವಿಧ ಸಾಂವಿಧಾನಿಕ ಬೇಡಿಕೆಗಳ ಕುರಿತು ಹಕ್ಕೊತ್ತಾಯ ಮಂಡಿಸಲಾಗುವುದು. ಜನಗಣತಿಯ ಸಂದರ್ಭ ಪ್ರತ್ಯೇಕ ಕಾಲಮ್ ಮತ್ತು ಕೋಡ್ ಸೇರಿಸುವುದರಿಂದ ಕೊಡವ ಸಮುದಾಯಕ್ಕೆ ಆಗಬಹುದಾದ ಲಾಭಗಳನ್ನು ವಿವರಿಸಲಾಗುವುದು ಎಂದು ಪತ್ರಿಕಾ ಹೇಳಿಕೆಯಲ್ಲಿ ಹೇಳಿದ್ದಾರೆ.

ಕೊಡವ ಸಮುದಾಯದ ಹಕ್ಕೊತ್ತಾಯಗಳಿಗೆ ಮತ್ತು ಜಾಗೃತಿ ಮೂಡಿಸುವುದಕ್ಕಾಗಿ ಮಾದಾಪುರದಲ್ಲಿ ಶಾಂತಿಯುತವಾಗಿ ಮಾನವ ಸರಪಳಿ ಕಾರ್ಯಕ್ರಮ ನಡೆಯಲಿದೆ. ಸೂರ್ಲಬ್ಬಿ ನಾಡ್, ಗಡಿನಾಡ್, ಬದಿಗೇರಿನಾಡ್ ಭಾಗದ ಕೊಡವ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಎನ್.ಯು. ನಾಚಪ್ಪ ಮನವಿ ಮಾಡಿದ್ದಾರೆ.

ಸೇನೆಗೆ ಸೇರುವಂತೆ ವಿದ್ಯಾರ್ಥಿಗಳಿಗೆ ಯೋಧ ಕರೆ

ನಾಪೋಕ್ಲು: ದೇಶ ಕಾಯೋಣ ಬನ್ನಿ ಎಂದು ವಿದ್ಯಾರ್ಥಿಗಳಿಗೆ ಯೋಧ ಎಂ.ಬಿ ಬೆಳ್ಳಿಯಪ್ಪ ಕರೆ ನೀಡಿದ್ದಾರೆ. ಚೇರಂಬಾಣೆ ಅರುಣ ಪಪೂ ಕಾಲೇಜು ಪ್ರಥಮ ಪಿಯುಸಿ ವಿದ್ಯಾರ್ಥಿಗಳಿಗೆ ಸ್ವಾಗತ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದರು.

ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟು ಮಣ್ಣುಪಾಲಾಗಿದೆ: ಮಾಜಿ ಸಚಿವ ಮಹೇಶ್



ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಬಿಜೆಪಿ ರಾಜ್ಯ ಉಪಾಧ್ಯಕ್ಷ ಎನ್. ಮಹೇಶ್ ಮಾತನಾಡಿದರು

ಚಾಮರಾಜನಗರ, ಜು.16–ರಾಜ್ಯ ಕಾಂಗ್ರೆಸ್ ಸರ್ಕಾರ ಭ್ರಷ್ಟಾಚಾರದಲ್ಲಿ ಮುಳುಗಿದ್ದು, ಆಡಳಿತ ಮಾಡುವ ಸರ್ಕಾರವಾಗದೆ ವಿರೋಧ ಪಕ್ಷವಾಗಿ ಕೆಲಸ ಮಾಡುತ್ತಿದೆ ಎಂದು ಬಿಜೆಪಿ ರಾಜ್ಯ ಉಪಾಧ್ಯಕ್ಷ ಎನ್. ಮಹೇಶ್ ಮೂದಲಿಸಿದ್ದಾರೆ.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ಸರ್ಕಾರ ಕಾನೂನು ವ್ಯವಸ್ಥೆಯನ್ನು ಸುಗಮವಾಗಿಟ್ಟು ಕೊಳ್ಳುವುದರಲ್ಲಿ ವಿಫಲವಾಗಿದೆ. ಪರಪ್ಪನ ಅಗ್ರಹಾರದ ಜೈಲಲ್ಲಿ ಉಗ್ರಗಾಮಿಗಳಿಗೆ ಡ್ರಗ್ಸ್, ಮೊಬೈಲ್ ಕೊಡುತ್ತಾರೆ. ಅದಕ್ಕೆ ಜೈಲು ಅಧಿಕಾರಿಗಳು ಶಾಮೀಲಾಗಿದ್ದಾರೆ. ಇದನ್ನು ಕಂಡು ಹಿಡಿದಿರುವುದು ರಾಜ್ಯದ ಗುಪ್ತಚಾರ ಇಲಾಖೆ ಅಲ್ಲ. ಜೈಲು ಸೂಪರಿಡೆಂಟೂ ಅಲ್ಲ. ಎನ್‌ಐನವರು. ಹಾಗಾದರೆ ಗೃಹ ಸಚಿವರಿಗೆ ಇದರ ಬಗ್ಗೆ ಏನು ಗೊತ್ತಿಲ್ಲ. ಎಂದರೆ ಅವರೇನು ಮಾಡುತ್ತಿದ್ದಾರೆ ಎಂದು ಪ್ರಶ್ನಿಸಿದರು.

ಕಾನೂನು ಸುವ್ಯವಸ್ಥೆ ಸಂಪೂರ್ಣ ಹಾಳಾಗಿದೆ. 7 ತಿಂಗಳಲ್ಲಿ 340 ಅತ್ಯಾಚಾರ ಪ್ರಕರಣಗಳು ದಾಖಲಾಗಿದೆ. ಪ್ರಿಯಾಂಕ ಖರ್ಗೆ ಕ್ಷೇತ್ರದಲ್ಲಿ ಡ್ರಗ್ ಮಾಫಿಯಾ, ಮರಳು ಮಾಫಿಯಾ ನಡೆಯುತ್ತಿದೆ. ಲೋಕಾಯುಕ್ತ ವಿಚಾರಣೆ ಮುಖ್ಯಮಂತ್ರಿಗಳ ಮೂಗಿನ ಕೆಳಗಡೆ ನಡೆಯುತ್ತದೆ. ಇದರಿಂದ ತಪಿತಸ್ಥರಿಗೆ ಯಾವುದೇ ಕ್ರಮವಾಗಲ್ಲ ಹಾಗಾಗಿ ಡ್ರಗ್, ಮರಳು ಮಾಫಿಯಾ ಎಲ್ಲವನ್ನೂ ಸಿಬಿಐಗೆ ವಹಿಸಬೇಕು ಎಂದು ಒತ್ತಾಯಿಸಿದರು.

ಕರ್ನಾಟಕದಲ್ಲಿ ಅಸ್ತಿತ್ವದಲ್ಲಿರುವ ಕಾಂಗ್ರೆಸ್ ಸರ್ಕಾರ ಒಂದು ಸರ್ಕಾರವಾಗಿ ನಡೆದು ಕೊಳ್ಳುತ್ತಿಲ್ಲ. ಮುಖ್ಯ ಮಂತ್ರಿಗಳಿಂದ ಹಿಡಿದು ಮಂತ್ರಿಗಳವರೆಗೆ ಎಲ್ಲರೂ ಒಂದು ರೀತಿ ವಿರೋಧ ಪಕ್ಷದ ಪಾತ್ರ ವಹಿಸುತ್ತಿದ್ದಾರೆ ಎಂದರು. ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೂಡ್ನಾಕೂಡು ಪ್ರಕಾಶ್, ಮಾಜಿ ಅಧ್ಯಕ್ಷ ನಾರಾಯಣ ಪ್ರಸಾದ್, ಓಬಿಸಿ ಮೋರ್ಚಾದ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯ ನೂರೊಂದು ಶೆಟ್ಟಿ, ಜಿಲ್ಲಾವಕ್ತಾರ ಕಾಡಹಳ್ಳಿ ಕುಮಾರ್ ಪತ್ರಿಕಾಗೋಷ್ಠಿಯಲ್ಲಿದ್ದರು.

ತಳ ಸಮುದಾಯಗಳ ಅಭಿವೃದ್ಧಿಗೆ ಎಂದೆಂದಿಗೂ ಬದ್ಧ : ಎಆರ್‌ಕೆ



ಪಟ್ಟಣದ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ಸವಿತ ಸಮಾಜದ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಶಾಸಕ ಎ.ಆರ್.ಕೃಷ್ಣಮೂರ್ತಿ ಸನ್ಮಾನಿಸಿದರು.

ಯಳಂದೂರು ಜು 16 (ವಿ.ನಾಗರಾಜು)– ತಳ ಸಮುದಾಯಗಳ ಅಭಿವೃದ್ಧಿಗೆ ನಾನು ಎಂದೆಂದಿಗೂ ಬದ್ಧನಾಗಿದ್ದು ಇವರಿಗೆ ಬೇಕಾದ ನೆರವು ನೀಡುವಲ್ಲಿ ನಾನು ನನ್ನ ಶಕ್ತಿ ಮೀರಿ ಪ್ರಯತ್ನ ಮಾಡುತ್ತೇನೆ ಎಂದು ಶಾಸಕ ಎ.ಆರ್. ಕೃಷ್ಣಮೂರ್ತಿ ಭರವಸೆ ನೀಡಿದರು.

ಪಟ್ಟಣದ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ವತಿಯಿಂದ ಹಮ್ಮಿಕೊಂಡಿದ್ದ ಶಿವಶರಣ ಹಡಪದ ಅಪ್ಪಣ್ಣ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಅಪ್ಪಣ್ಣ 12ನೇ ಶತಮಾನದ ಮಹಾನ್ ಶರಣರಾಗಿದ್ದರು. 250ಕ್ಕೂ ವಚನಗಳನ್ನು ರಚಿಸಿದ್ದಾರೆ. ಇವರ ವಚನಗಳಲ್ಲಿ ಸಮಾಜವನ್ನು ತಿದ್ದುವಂಥ ಅನೇಕ ಅಂಶಗಳಿದ್ದು ಇವರ ಪತ್ನಿ ಲಿಂಗಮ್ಮ ಕೂಡ ವಚನಕಾರ್ತಿಯಾಗಿದ್ದರು ಎನ್ನುವುದು ವಿಶೇಷವಾಗಿದ್ದು ಇವರ ತತ್ವಾದರ್ಶಗಳು ನಮಗೆ ಆದರ್ಶವಾಗಬೇಕು ಎಂದರು. ಪಟ್ಟಣದಲ್ಲಿ ಸವಿತಾ ಸಮಾಜದ ಸಮುದಾಯ ಭವನ ಅಪೂರ್ಣವಾಗಿದೆ. ಇದಕ್ಕೆ ಇನ್ನೂ 27 ಲಕ್ಷ ರೂ. ಹಣದ ನೆರವು ಬೇಕೆಂದು ಬೇಡಿಕೆ ಇಟ್ಟಿದ್ದರು. ಈಗ 10 ಲಕ್ಷ ರೂ. ನೀಡಿದ್ದು ಮುಂದಿನ ದಿನಗಳಲ್ಲಿ ನನ್ನ ಅನುದಾನದಲ್ಲಿ ಹಣ ನೀಡಿ ಇದನ್ನು ಪೂರ್ಣಗೊಳಿಸಿ ಮುಂದಿನ ವರ್ಷ ಇದನ್ನು ಉದ್ಘಾಟಿಸಲು ನೆರವಾಗುವುದಾಗಿ ಭರವಸೆ ನೀಡಿದರು.

ಮುಖ್ಯ ಭಾಷಣಕಾರ ಗುಂಬಳ್ಳಿ ಬಸವರಾಜು ಮಾತನಾಡಿ, ಹಡಪದ ಅಪ್ಪಣ್ಣ ಬಸವಣ್ಣನವರ ಆಪ್ತ ಕಾರ್ಯದರ್ಶಿಯಾಗಿದ್ದರು. ಮಿತಭಾಷಿಯಾಗಿದ್ದ ಇವರು ಅತ್ಯಂತ ಪ್ರಾಮಾಣಿಕ ಕಾಯಕನಿಷ್ಠೆಯುಳ್ಳ ವಚನಕಾರರಾಗಿದ್ದರು. ಬಂಡಾಯದ ನೆಲೆಯಲ್ಲಿ ಗುರುತಿಸಿಕೊಂಡ ಇವರು ಸಾಮಾಜಿಕ ಸಮಾನತೆ ಸಾರಿದ ಮಹಾನ್ ಸಾಧಕರಾಗಿದ್ದರು. ಅನುಭವ ಮಂಟಪದ ಮುಖ್ಯ ಸಚೇತಕಾಗಿ ಇವರ ಸೇವೆ ಗಣನೀಯವಾಗಿದ್ದು ಇವರ ತತ್ವಾದರ್ಶಗಳು ನಮಗೆ ಮಾದರಿಯಾಗಿವೆ ಎಂದರು.

ಸವಿತಾ ಸಮಾಜದ ಅಧ್ಯಕ್ಷ ಪಿ.ಸಿ. ಶ್ರೀಕಂಠ ಸ್ವಾಮಿ ಮಾತನಾಡಿ, ನಮಗೆ ಸಂಗೀತ ಶಾಲೆ, ಬ್ಯೂಟಿಷಿಯನ್ ತರಬೇತಿ ನೀಡಲು ಸ್ಥಳಾವಕಾಶ ನೀಡ ಬೇಕು, ಬಿಳಿಗಿರಿರಂಗನಬೆಟ್ಟದ ಮುಡಿಕಟ್ಟೆಯಲ್ಲಿ ತಾಲೂಕಿನ ಸವಿತ ಬಂಧುಗಳಿಗೆ ಅವಕಾಶ ನೀಡಬೇಕು, ನಮ್ಮನ್ನು ಪರಿಶಿಷ್ಟ ಜಾತಿ ಅಥವಾ ಪಂಗಡಕ್ಕೆ ಸೇರಿಸಬೇಕು, ಶವಸಂಸ್ಕಾರಕ್ಕಾಗಿ ಪ್ರತ್ಯೇಕ ಜಾಗವನ್ನು ನೀಡಬೇಕು. ಪ್ರತ್ಯೇಕ ವಿದ್ಯಾರ್ಥಿ ವೇತನ ನೀಡಬೇಕು, ಸವಿತಾ ಅಭಿವೃದ್ಧಿ ನಿಗಮದ ವತಿಯಿಂದ ಕ್ಷೌರಿಕ ಕಿಟ್‌ಗಳನ್ನು ವಿತರಣೆ ಮಾಡುವುದೂ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಮನವಿ ಪತ್ರ ಸಲ್ಲಿಸುವುದಾಗಿ ಹೇಳಿದರು.

ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಎಚ್.ವಿ. ಚಂದ್ರು ಮಾತನಾಡಿದರು. ಪಪಂ ಅಧ್ಯಕ್ಷೆ ಲಕ್ಷ್ಮಿಮಲ್ಲು, ಸದಸ್ಯ ಮುನವ್ವರ್ ಬೇಗ್, ಲಿಂಗರಾಜಮೂರ್ತಿ ಜಿಪಂ ಮಾಜಿ ಉಪಾಧ್ಯಕ್ಷ ಜೆ. ಯೋಗೇಶ್, ತಹಸೀಲ್ದಾರ್ ಎಸ್.ಎಲ್.ನಯನ, ಬಿಇಒ ಎಂ. ಮಾರಯ್ಯ, ಸಿಪಿಐ ಕೆ.ಶ್ರೀಕಾಂತ್, ದುಗ್ಗಹಟ್ಟಿ ಪಿ.ವೀರಭದ್ರಪ್ಪ, ಆರ್.ಐ.ಯಧುಗಿರಿ ಗ್ರಾಮ ಸೇವಕ ಚಂಗಚಹಳ್ಳಿ ಮಹದೇವಸ್ವಾಮಿ ಹಾಜರಿದ್ದರು.

ಮಾಸ್ಟರ್ ಕರಾಟೆ ಅಕಾಡೆಮಿಯ 13 ಮಕ್ಕಳಿಗೆ 23 ಬಹುಮಾನ



ಮಾಸ್ಟರ್ ಕರಾಟೆ ಅಕಾಡೆಮಿಯ 13 ವಿದ್ಯಾರ್ಥಿಗಳು ಇತ್ತೀಚೆಗೆ ನಡೆದ ಮೈಸೂರಿನ ಒಪನ್ ಕರಾಟೆ ಸ್ಪರ್ಧೆಯಲ್ಲಿ 23 ಬಹುಮಾನಗಳಿಸಿ ಸಾಧನೆಗೈದಿದ್ದಾರೆ.

ಕೊಳ್ಳೇಗಾಲ, ಜು.16 (ನಾಗೇಂದ್ರ)– ಮೈಸೂರು ಮಹಾರಾಜ ಕಾಲೇಜ್ ಮೈದಾನದಲ್ಲಿ ಯಾತ್ ಮಾರ್ಟಿಯಲ್ ಆರ್ಟ್ ಅಕಾಡೆಮಿ ಆಯೋಜಿಸಿದ್ದ ಓಪನ್ ನ್ಯಾಷನಲ್ ಕರಾಟೆ ಮಟ್ಟದ ಸ್ಪರ್ಧೆಯಲ್ಲಿ ಪಟ್ಟಣದ ಮಾಸ್ಟರ್ ಕರಾಟೆ ಅಕಾಡೆಮಿಯ 13 ವಿದ್ಯಾರ್ಥಿಗಳು ಒಟ್ಟು 23 ಬಹುಮಾನ ಗಳಿಸಿ ಸಾಧನೆಗೈದಿದ್ದಾರೆ

ಭೃತ್ವಕಣ್ವ, ನೂತನ್, ಅನುಶ್ರೀ, ನಕುಲ್ ಎಂಬ ವಿದ್ಯಾರ್ಥಿಗಳು ಕಟ ಮತ್ತು ಕುಮಿತೆ ವಿಭಾಗಗಳಲ್ಲೂ ಪ್ರಥಮ ಸ್ಥಾನಗಳಿಸಿ ಸಾಧನೆಗೈದಿದ್ದಾರೆ. ಉಳಿದಂತೆ ನಯನ ಕುಕ್ಕೂರ್, ಕಟ ಪ್ರಥಮ ಸ್ಥಾನ, ಕುಮಿತೆ ದ್ವಿತೀಯ ಸ್ಥಾನ. ಸನ್ನಿಧಿ, ಕಟ ಪ್ರಥಮ ಸ್ಥಾನ, ಕುಮಿತೆ ದ್ವಿತೀಯ ಸ್ಥಾನ. ಭೂಮಿಕಾ, ಕಟ ಪ್ರಥಮ ಸ್ಥಾನ, ಕುಮಿತೆ ದ್ವಿತೀಯ ಸ್ಥಾನ. ಶ್ರೇಯ, ಕಟಾದಲ್ಲಿ ದ್ವಿತೀಯ ಸ್ಥಾನ. ಮಹಮ್ಮದ್ ಅಲಿ, ಕಟ ಪ್ರಥಮ, ಕುಮಿತೆ ತೃತೀಯ ಸ್ಥಾನ.

ನವ್ಯಶ್ರೀ, ಕಟ ಮತ್ತು ಕುಮಿತೆ ಎರಡರಲ್ಲೂ ತೃತೀಯ ಸ್ಥಾನ. ನವನೀತ್, ಕಟ ಮತ್ತು ಕುಮಿತೆ ಎರಡರಲ್ಲೂ ತೃತೀಯ ಸ್ಥಾನ.

ಹರ್ಷಿತ್, ಕಟದಲ್ಲಿ ದ್ವಿತೀಯ ಸ್ಥಾನ. ಪ್ರಜ್ವಲ್, ಕಟ ವಿಭಾಗದಲ್ಲಿ ತೃತೀಯ ಸ್ಥಾನ ಪಡೆದು ಕೀರ್ತಿ ತಂದಿದ್ದಾರೆ. ಸಾಧಕ ವಿದ್ಯಾರ್ಥಿಗಳನ್ನು ಸ್ಪರ್ಧಾ ಆಯೋಜಕ ಮಾದೇಶ್ ಮತ್ತು ಸಿದ್ದರಾಜ್, ಕರಾಟೆ ಮಾಸ್ಟರ್ ಕೆ ನಂಜುಂಡಸ್ವಾಮಿ , ತರಬೇತುದಾರ ಪ್ರತ್ಯೂಷ್ ಅಭಿನಂದಿಸಿ ಬಹುಮಾನ ನೀಡಿ ಗೌರವಿಸಿದ್ದಾರೆ.

ಕುಡಿಯುವ ನೀರಿನ ಸಮಸ್ಯೆಗೆ ಸಹಾಯವಾಣಿ

ಚಾಮರಾಜನಗರ, ಜು.16– ಜಿಲ್ಲೆಯ ಗ್ರಾಮೀಣ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆಗಳು ಕಂಡುಬಂದಲ್ಲಿ ಇದನ್ನು ಬಗೆಹರಿಸುವ ಉದ್ದೇಶದಿಂದ ನಗರದ ಜಿಲ್ಲಾ ಪಂಚಾಯತ್ ಕಚೇರಿಯಲ್ಲಿ ಸಹಾಯವಾಣಿ ಕೇಂದ್ರ ತೆರೆಯಲಾಗಿದೆ.

ಗ್ರಾಮೀಣ ಭಾಗದಲ್ಲಿ ಸಂಭವಿಸಬಹುದಾದ ಕುಡಿಯುವ ನೀರಿನ ಸಮಸ್ಯೆಗಳಿಗೆ ಸಾರ್ವಜನಿಕರು ಜಿಲ್ಲಾ ಪಂಚಾಯತ್ ಸಹಾಯವಾಣಿ ಸಂಖ್ಯೆ 08226–224015 ಸಂಪರ್ಕಿಸುವಂತೆ ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸೇವೆ ಖಾಯಂಗೊಳಿಸಲು ಆಗ್ರಹ

ಚಾಮರಾಜನಗರ: ಕೇಂದ್ರ ಸರ್ಕಾರ ಗೃಹರಕ್ಷಕರನ್ನು ಖಾಯಂ ಮಾಡಬೇಕು ಹಾಗೂ ರಾಜ್ಯ ಸರ್ಕಾರ ವರ್ಷಪೂರ್ತಿ ಕರ್ತವ್ಯ, ಸಮಾನ ವೇತನ ನೀಡಬೇಕು ಎಂದು ಎಂದು ಲೇಬರ್ ರೈಟ್ಸ್ ಫೋರಂ ಸಂಸ್ಥಾಪಕರು, ಹೈಕೋರ್ಟ್ ವಕೀಲ ಪಾವಗಡ ಶ್ರೀರಾಮ್ ಒತ್ತಾಯಿಸಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಲೇಬರ್ ರೈಟ್ಸ್ ಫೋರಂ (ಗೃಹ ರಕ್ಷಕರ ಪೋಷಕರ ಹಕ್ಕು ಸಂರಕ್ಷಣಾ ಸಮಿತಿ) ಪದ್ಮಶ್ರೀ ಪ್ರಶಸ್ತಿ ಪುರಸ್ಕೃತೆ ಸೂಲುಗತ್ತಿ ನರಸಮ್ಮನವರ 105 ನೇ ಜನ್ಮ ದಿನಾಚರಣೆ ಪ್ರಯುಕ್ತ ಸಂವಿಧಾನ ಮತ್ತು ಕಾನೂನು ಅರಿವು ಕಾರ್ಯಕ್ರಮದಲ್ಲಿ ಮಾತನಾಡಿ, ಯಾವುದೇ ಗೃಹ ರಕ್ಷಕ ನಿವೃತ್ತಿಯಾದರೆ ರಾಜ್ಯ ಸರ್ಕಾರ 10 ಲಕ್ಷ ರೂ ಕೊಡಬೇಕು. ವರ್ಷಪೂರ್ತಿ ಕರ್ತವ್ಯ ಕೊಡಬೇಕು. ಸಮಾನ ವೇತನ ನೀಡಬೇಕು ಎಂದು ಒತ್ತಾಯಿಸಿದರು.

ಶಕ್ತಿ ಯೋಜನೆ ಮಹಿಳೆಯರಿಂದ ಸದ್ಬಳಕೆ: ಶಾಸಕ



ಗುಂಡ್ಲುಪೇಟೆ ಪಟ್ಟಣದ ಸಾರಿಗೆ ಬಸ್ ನಿಲ್ದಾಣದಲ್ಲಿ ಶಾಸಕ ಹೆಚ್.ಎಂ. ಗಣೇಶ್ ಪ್ರಸಾದ್ ಶಕ್ತಿ ಸಂಭ್ರಮಾಚರಣೆ ಕಾರ್ಯಕ್ರಮಕ್ಕೆ ಹಸಿರು ನಿಶಾನೆ ತೋರಿ ಚಾಲನೆ ನೀಡಿದರು. ಡಿಪೋ ವ್ಯವಸ್ಥಾಪಕ ತ್ಯಾಗರಾಜು ಇತರರು ಇದ್ದರು.

ಗುಂಡ್ಲುಪೇಟೆ, ಜು–16 (ಸೋಮ್.ಜಿ)– ರಾಜ್ಯ ಸರ್ಕಾರದ ಮಹತ್ವದ ಯೋಜನೆಯಾದ ಶಕ್ತಿ ಯೋಜನೆ ಎರಡು ವರ್ಷ ಪೂರೈಸಿದ್ದು ಕೋಟ್ಯಾಂತರ ಮಹಿಳೆಯರು ಇದರ ಸದುಪಯೋಗ ಪಡೆದುಕೊಂಡಿದ್ದಾರೆ ಎಂದು ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ಹೇಳಿದರು.

ಪಟ್ಟಣದ ಸಾರಿಗೆ ಬಸ್ ನಿಲ್ದಾಣದಲ್ಲಿ ನಡೆದ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು ಶಕ್ತಿ ಯೋಜನೆ ಅಡಿಯಲ್ಲಿ ರಾಜ್ಯಾದ್ಯಂತ 500 ಕೋಟಿ ಮಹಿಳೆಯರು ಉಚಿತ ಪ್ರಯಾಣ ಮಾಡಿದ್ದಾರೆ. ಪಟ್ಟಣದ ಸಾರಿಗೆ ಬಸ್ಸುಗಳಲ್ಲಿ 3.7 ಕೋಟಿ ಮಹಿಳೆಯರು ಪ್ರಯಾಣಿಸಿದ್ದಾರೆ. ಮಹಿಳೆಯರು ಈ ಯೋಜನೆಯನ್ನು ಸದ್ಬಳಕೆ ಮಾಡಿಕೊಳ್ಳುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಡಿಪೋ ಮ್ಯಾನೇಜರ್ ತ್ಯಾಗರಾಜು, ಪುರಸಭೆ ಅಧ್ಯಕ್ಷ ಮಧುಸೂದನ್, ಉಪಾಧ್ಯಕ್ಷ ಅಣ್ಣಯ್ಯ ಸ್ವಾಮಿ, ಚಾಮುಲ್ ನಿರ್ದೇಶಕ ಹೆಚ್.ಎಸ್. ನಂಜುಂಡ ಪ್ರಸಾದ್, ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಉಮಾಪತಿ, ಸಮಿತಿ ಸದಸ್ಯರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಾಜಶೇಖರ್, ಮುಖಂಡರಾದ ಬಿ.ಕುಮಾರಸ್ವಾಮಿ, ಹೆಚ್.ಎನ್.ಬಸವರಾಜು, ಮಡಿವಾಳಪ್ಪ, ಕಣ್ಣಪ್ಪ, ಸುರೇಶ್‌ಕಾರ್‍ಗಳ್ಳಿ, ಕೆಎಸ್‌ಆರ್‌ಟಿಸಿಯ ಸಿಬ್ಬಂದಿ ಭಾಗವಹಿಸಿದ್ದರು.

ಉದ್ಯೋಗಿಗಳಿಗೆ ಸಂತಸದ ಸುದ್ದಿ; ಇಪಿಎಫ್‌ಓ, ಪಿಂಚಣಿ ಹಣಕ್ಕೆ 58 ವರ್ಷ ಕಾಯಬೇಕಿಲ್ಲ!

ಬೆಂಗಳೂರು, ಜು.16: ಉದ್ಯೋಗಿಗಳ ಭವಿಷ್ಯ ನಿಧಿ ಸಂಸ್ಥೆ (ಇಪಿಎಫ್‌ಓ) ಪ್ರಸ್ತಾವನೆ ಅಂಗೀಕಾರವಾದರೆ, ಸಂಬಳ ಪಡೆಯುವ ನೌಕರರು ತಮ್ಮ ಉದ್ಯೋಗ ಕಳೆದುಕೊಳ್ಳುವವರೆಗೆ ಅಥವಾ ನಿವೃತ್ತರಾಗುವವರೆಗೆ ಪಿಂಚಣಿ ಹಣ ವಾಪಾಸ್ ಪಡೆಯಲು ಕಾಯಬೇಕಾಗಿಲ್ಲ. ನಿವೃತ್ತಿ ನಿಧಿಯಿಂದ ಹಣವನ್ನು ಹಿಂಪಡೆಯಲು ಇರುವ ಕಠಿಣ ನಿಯಮಗಳನ್ನು ಸಡಿಲಿಸಲು ಕೇಂದ್ರವು ನಿರ್ಧರಿಸಿದೆ. ಇದು ಉದ್ಯೋಗಿಗಳಿಗೆ ಪ್ರತಿ 10 ವರ್ಷಗಳಿಗೊಮ್ಮೆ ಸಂಪೂರ್ಣ ನಿಧಿಯನ್ನು ಅಥವಾ ಅದರ ಒಂದು ಭಾಗವನ್ನು ಹಿಂಪಡೆಯಲು ಅವಕಾಶ ನೀಡಬಹುದು ಎಂದು ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ.

ಉದ್ಯೋಗಿಗಳಿಗೆ ತಮ್ಮ ಹಣಕಾಸು ಪರಿಸ್ಥಿತಿ ನಿರ್ವಹಿಸಲು ಮತ್ತು ನಿವೃತ್ತಿಯನ್ನು ಯೋಜಿಸಲು ಫ್ಲೆಕ್ಸಿಬಿಲಿಟಿ ಹೊಂದಿರಬೇಕು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಪ್ರತಿ 10 ವರ್ಷಗಳಿಗೊಮ್ಮೆ, ಪ್ರತಿಯೊಬ್ಬ ಇಪಿಎಫ್‌ಓ ಸದಸ್ಯರ ಸಂಗ್ರಹವಾದ ಕಾರ್ಪಸ್‌ಗೆ ಸ್ವಲ್ಪ ಸೇರ್ಪಡೆ ಇರುತ್ತದೆ. ಅವರು ಈ ಹಣವನ್ನು ಏನು ಮಾಡಬೇಕೆಂದು ನಿರ್ಧರಿಸಬೇಕು ಎಂದು ತಿಳಿಸಿದ್ದಾರೆ.

ಪ್ರಸ್ತುತ, ಉದ್ಯೋಗಿ ಕೆಲಸದಿಂದ ನಿವೃತ್ತರಾದ ನಂತರ, ಸಾಮಾನ್ಯವಾಗಿ 58 ನೇ ವಯಸ್ಸಿನಲ್ಲಿ ಅಥವಾ ಎರಡು ತಿಂಗಳಿಗಿಂತ ಹೆಚ್ಚು ಕಾಲ ನಿರುದ್ಯೋಗಿಯಾಗಿದ್ದರೆ ಮಾತ್ರ ಪೂರ್ಣ ಹಿಂಪಡೆಯುವಿಕೆಯನ್ನು ಅನುಮತಿಸಲಾಗುತ್ತದೆ.

ಶೀಘ್ರದಲ್ಲೇ ಬದಲಾವಣೆ: ಬದಲಾವಣೆಗಳನ್ನು ಜಾರಿಗೆ ತಂದರೆ, ಉದ್ಯೋಗಿಗಳು ತಮ್ಮ 30 ರ ಹರೆಯದಲ್ಲಿ ಇಪಿಎಫ್‌ಓ ನಿಧಿಯನ್ನು ಸಂಪೂರ್ಣವಾಗಿ ಹಿಂಪಡೆಯಲು ಸಾಧ್ಯವಾಗಬಹುದು. ಇದು ಸದಸ್ಯರಿಗೆ ತಮ್ಮ ಇಪಿಎಫ್ ಉಳಿತಾಯದೊಂದಿಗೆ ಏನು ಮಾಡಬೇಕೆಂಬುದನ್ನು ಆಯ್ಕೆ ಮಾಡಲು ಫ್ಲೆಕ್ಸಿಬಿಲಿಟಿ ನೀಡುತ್ತದೆ ಎಂದು ಅಧಿಕಾರಿ ಹೇಳಿದರು. ಪೂರ್ಣ ಮೊತ್ತವನ್ನು ಹಿಂಪಡೆಯಲು ಅನುಮತಿ ನೀಡದೇ ಇದ್ದಲ್ಲಿ, ಸರ್ಕಾರವು ಪ್ರತಿ 10 ವರ್ಷಗಳಿಗೊಮ್ಮೆ ಸಂಗ್ರಹವಾದ ನಿಧಿಯ ಕೇವಲ 60 ಪ್ರತಿಶತವನ್ನು ಮಾತ್ರ ಹಿಂಪಡೆಯಲು ಅನುಮತಿಸುವ ಸಾಧ್ಯತೆಯಂತೂ ಇದೆ. ಇದು ಪರಿಗಣನೆಯಲ್ಲಿದೆ ಎಂದು ಅಧಿಕಾರಿ ಹೇಳಿದ್ದಾರೆ.

ಇಪಿಎಫ್‌ಓ 7.4 ಕೋಟಿಗೂ ಹೆಚ್ಚು ಸದಸ್ಯರನ್ನು ಹೊಂದಿದ್ದು, ನಿಧಿಯ ಮೂಲ ಮೊತ್ತ ಸುಮಾರು 25 ಲಕ್ಷ ಕೋಟಿ ರೂಪಾಯಿಗಿಂತಲೂ ಹೆಚ್ಚು ಎನ್ನಲಾಗಿದೆ. ಪ್ರಸ್ತುತ, ಭಾಗಶಃ ಹಿಂಪಡೆಯುವಿಕೆಗಳು ವಸತಿ, ವೈದ್ಯಕೀಯ ತುರ್ತುಸ್ಥಿತಿ, ಶಿಕ್ಷಣ ಅಥವಾ ಮದುವೆಯಂತಹ ವಿಶೇಷ ಅಗತ್ಯಗಳಿಗೆ ಸೀಮಿತವಾಗಿವೆ.

ಈ ತಿಂಗಳಿನಿಂದ, ಇಪಿಎಫ್ ಸದಸ್ಯರು ಭೂಮಿ ಖರೀದಿಸಲು ಅಥವಾ ಮನೆ ನಿರ್ಮಿಸಲು ತಮ್ಮ ನಿಧಿಯ 90 ಪ್ರತಿಶತದಷ್ಟು ಹಣವನ್ನು ಹಿಂಪಡೆಯಬಹುದು. ಇದಕ್ಕೂ ಮೊದಲು, ಸತತ ಐದು ವರ್ಷಗಳ ಕಾಲ ನಿರಂತರವಾಗಿ ಉಳಿತಾಯವನ್ನು ಕಂಡವರು ಮಾತ್ರ ವಸತಿ ಅಗತ್ಯಗಳಿಗಾಗಿ 90 ಪ್ರತಿಶತದಷ್ಟು ಹಣವನ್ನು ಹಿಂಪಡೆಯಲು ಅರ್ಹರಾಗಿದ್ದರು, ಆದರೆ ಈಗ ಮಿತಿಯನ್ನು ಮೂರು ವರ್ಷಗಳಿಗೆ ಸಡಿಲಿಸಲಾಗಿದೆ.

ವಿಪಕ್ಷ ನಾಯಕನಾದ ನನಗೆ 2 ವರ್ಷಗಳಿಂದ ಸರ್ಕಾರ ಅಧಿಕೃತ ನಿವಾಸ ನೀಡಿಲ್ಲ, ನಮಗೆ ಪ್ರೋಟೋಕಾಲ್ ಪಾಠ ಮಾಡುತ್ತಾರೆ

ವಿಪಕ್ಷ ನಾಯಕ ಆರ್. ಅಶೋಕ್ ಕಿಡಿ



ಬೆಂಗಳೂರು, ಜು.16– ಶಿವಮೊಗ್ಗ ಜಿಲ್ಲೆಯ ಸಿಗಂದೂರು ಸೇತುವೆ ಉದ್ಘಾಟನೆಯ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಶಿಷ್ಟಾಚಾರ ಪಾಲಿಸಿಲ್ಲ ಎಂದು ಆರೋಪಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಅವರ ಸಂಪುಟ ಸಚಿವರನ್ನು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್. ಅಶೋಕ ತರಾಟೆಗೆ ತೆಗೆದುಕೊಂಡಿದ್ದಾರೆ.

ಸೇತುವೆ ನಿರ್ಮಾಣದ ಕೀರ್ತಿ ಬಿಜೆಪಿಗೆ ಸಲ್ಲುತ್ತಿದೆ ಎಂದು ಹತಾಶೆಗೊಂಡ ಮುಖ್ಯಮಂತ್ರಿಗಳು ಗೊಂದಲ ಸೃಷ್ಟಿಸಲು ಪ್ರಯತ್ನಿಸುತ್ತಿದ್ದಾರೆ ಎಂದು ಆರ್.ಅಶೋಕ್ ಆರೋಪಿಸಿದ್ದಾರೆ. ತಾವು ವಿರೋಧ ಪಕ್ಷದ ನಾಯಕನಾಗಿ ಎರಡು ವರ್ಷಗಳ ನಂತರವೂ ರಾಜ್ಯ ಸರ್ಕಾರ ತಮಗೆ ಅಧಿಕೃತ ಸರ್ಕಾರಿ ನಿವಾಸವನ್ನು ಇನ್ನೂ ನೀಡಿಲ್ಲ. ಕಾಂಗ್ರೆಸ್ ಪಕ್ಷ ಶಿಷ್ಟಾಚಾರವನ್ನು ಗೌರವಿಸುವ ರೀತಿ ಇದೇನಾ ಎಂದು ಅಶೋಕ್ ಸರ್ಕಾರವನ್ನು ಪ್ರಶ್ನಿಸಿದ್ದಾರೆ.

ಮುಖ್ಯಮಂತ್ರಿಯವರನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಲಾಗಿತ್ತು. ಶಿಷ್ಟಾಚಾರದ ಪ್ರಕಾರ ಅವರ ಹೆಸರನ್ನು ಸೇರಿಸಲಾಗಿದೆ. ಮುಖ್ಯಮಂತ್ರಿಯವರು ಬೇರೆ ಪೂರ್ವ ನಿಗದಿತ ಕಾರ್ಯಕ್ರಮಗಳನ್ನು ಹೊಂದಿದ್ದರೆ, ಯಾವುದಕ್ಕೆ ಆದ್ಯತೆ ನೀಡಬೇಕು ಎಂಬುದನ್ನು ಅವರೇ ನಿರ್ಧರಿಸಬೇಕು. ಕಾರ್ಯಕ್ರಮದ ದಿನಾಂಕ ಮತ್ತು ಸಮಯವನ್ನು ಮುಖ್ಯಮಂತ್ರಿಯೊಂದಿಗೆ ಸಮಾಲೋಚಿಸಿ ನಿಗದಿಪಡಿಸಲಾಗುತ್ತದೆ ಎಂದು ನಿರೀಕ್ಷಿಸುವುದು ಅಸಮಂಜಸವಾಗಿದೆ ಎಂದರು,

ರಾಜ್ಯ ಸರ್ಕಾರವು ಎಂದಾದರೂ ವಿಪಕ್ಷದ ನಾಯಕರು ಮತ್ತು ಶಾಸಕರ ಸಲಹೆ ಅಥವಾ ಅವರ ಕಾರ್ಯಕ್ರಮಗಳಲ್ಲಿ ಅವರ ಪಾಲ್ಗೊಳ್ಳುವಿಕೆಯನ್ನು ಖಚಿತಪಡಿಸಿಕೊಂಡಿದ್ದಾರೆಯೇ ಎಂದು ಸಿಎಂ ಅವರನ್ನು ಪ್ರಶ್ನಿಸಿದರು. ಕಳೆದ ಎರಡು ವರ್ಷಗಳಲ್ಲಿ, ವಿಪಕ್ಷದ ನಾಯಕನಾಗಿ, ನನ್ನನ್ನು ಯಾವುದೇ ಒಂದು ಕಾರ್ಯಕ್ರಮಕ್ಕೂ ಸರ್ಕಾರದ ಮಟ್ಟದಿಂದ ನನ್ನನ್ನು ಸಮಾಲೋಚಿಸಲೂ ಇಲ್ಲ, ಆಹ್ವಾನಿಸಲೂ ಇಲ್ಲ, ಬೆಂಗಳೂರಿನಲ್ಲಿ ನಡೆದ ಕಾರ್ಯಕ್ರಮಗಳಿಗೂ ಸಹ ಎಂದು ಅಶೋಕ್ ಹೇಳಿದರು.

ಸಿರಿಯಾ ಮೇಲೆ ಮುಗಿಬಿದ್ದ ಇಸ್ರೇಲ್: ಮಿಲಿಟರಿ ಪ್ರಧಾನ ಕಚೇರಿ ಮೇಲೆ ವಾಯುದಾಳಿ

ಲೈವ್ ಟಿವಿ ಕಾರ್ಯಕ್ರಮ ಬಿಟ್ಟು ಓಡಿದ ನಿರೂಪಕಿ



ಟೆಲ್ ಅವೀವ್: ಸಿರಿಯಾ ಮೇಲಿನ ತನ್ನ ವಾಯುದಾಳಿಯನ್ನು ಮತ್ತಷ್ಟು ಹೆಚ್ಚಿಸಿರುವ ಇಸ್ರೇಲ್ ವಾಯುಸೇನೆ ಇದೀಗ ಸಿರಿಯಾ ಮಿಲಿಟರಿ ಪ್ರಧಾನ ಕಚೇರಿಯ ಮೇಲೆ ದಾಳಿ ಮಾಡಿದ್ದು, ಇದೇ ಸಂದರ್ಭದಲ್ಲಿ ಸುದ್ದಿ ಓದುತ್ತಿದ್ದ ಟಿವಿ ನಿರೂಪಕಿ ಜೀವ ಉಳಿಸಿಕೊಳ್ಳಲು ಲೈವ್ ಕಾರ್ಯಕ್ರಮ ಬಿಟ್ಟು ಓಡಿದ ವಿಡಿಯೋ ವೈರಲ್ ಆಗುತ್ತಿದೆ.

ಸಿರಿಯಾ ಮಿಲಿಟರಿ ಪ್ರಧಾನ ಕಚೇರಿ ಮೇಲೆ ಇಸ್ರೇಲ್ ವಾಯುದಾಳಿ ನಡೆಸಿದ್ದು ಈ ವೇಳೆ ಸಂಭವಿಸಿದ ಭೀಕರ ಸ್ಫೋಟದಿಂದಾಗಿ ಇಡೀ ಕಟ್ಟಡ ಧರೆಗುರುಳಿದೆ. ದಕ್ಷಿಣ ನಗರವಾದ ಸ್ವೀಡಾದಲ್ಲಿ ಸರ್ಕಾರಿ ಭದ್ರತಾ ಪಡೆಗಳು ಮತ್ತು ಸ್ಥಳೀಯ ಹೋರಾಟಗಾರರ ನಡುವೆ ಉದ್ವಿಗ್ನತೆ ಹೆಚ್ಚುತ್ತಿರುವಾಗ ಇಸ್ರೇಲ್ ಸಿರಿಯಾವನ್ನು ಗುರಿಯಾಗಿಸಿಕೊಂಡು ಸತತ ಮೂರನೇ ದಿನ ದಾಳಿ ನಡೆಸಿದೆ.

ರಾಜಧಾನಿ ಡಮಾಸ್ಕಸ್‌ನ ಮಧ್ಯಭಾಗದಲ್ಲಿರುವ ರಕ್ಷಣಾ ಸಚಿವಾಲಯದ ಕಟ್ಟಡದ ಮೇಲೆ ಇಸ್ರೇಲ್ ಆಕ್ರಮಣ ವೈಮಾನಿಕ ದಾಳಿ ನಡೆದಿದೆ.

ಲೈವ್ ಕಾರ್ಯಕ್ರಮ ಬಿಟ್ಟು ಓಡಿದ ನಿರೂಪಕಿ: ಇಸ್ರೇಲ್ ದಾಳಿ ಸುದ್ದಿ ಪ್ರಸ್ತುತಪಡಿಸುತ್ತಿರುವಾಗಲೇ ಸ್ಫೋಟ ಸಂಭವಿಸಿದ ಘಟನೆ ಕೂಡ ನಡೆದಿದೆ. ಸಿರಿಯಾ ಮಿಲಿಟರಿ ಪ್ರಧಾನ ಕಚೇರಿಯ ಮೇಲೆ ಇಸ್ರೇಲ್ ವಾಯುದಾಳಿ ನಡೆಸಿದ ನಾಟಕೀಯ ಕ್ಷಣವನ್ನು ಲೈವ್ ಟಿವಿಯಲ್ಲಿ ವೀಕ್ಷಿಸಿ, ಪತ್ರಕರ್ತರು ಭಯಭೀತರಾಗಿ ಸ್ಥಳದಿಂದ ಓಡಿಹೋಗಿದ್ದಾರೆ.

ಸುದ್ದಿ ನಿರೂಪಕಿ ಇಸ್ರೇಲ್ ದಾಳಿ ಸುದ್ದಿ ಪ್ರಸ್ತುತಪಡಿಸುತ್ತಿರುವಂತೆಯೇ ದೊಡ್ಡ ಸ್ಫೋಟ ಸಂಭವಿಸಿದೆ. ಈ ವೇಳೆ ನಿರೂಪಕಿ ತನ್ನ ಜೀವ ಉಳಿಸಿ ಕೊಳ್ಳಲು ಲೈವ್ ಕಾರ್ಯಕ್ರಮ ಬಿಟ್ಟು ಓಡಿದ್ದಾರೆ. ವರದಿಗಾರ್ತಿ ತನ್ನ ಆಸನ ದಿಂದ ಸುರಕ್ಷಿತವಾಗಿ ಹೊರಬರುವ ಮೊದಲು ಸ್ಫೋಟದ ಪರಿಣಾಮವಾಗಿ ಕ್ಯಾಮೆರಾ ಅಲುಗಾಡುತ್ತದೆ. ಈ ವಿಡಿಯೋ ಇದೀಗ ವ್ಯಾಪಕ ವೈರಲ್ ಆಗುತ್ತಿದೆ.

ದಿಢೀರ್ ಉಲ್ಬಣಗೊಂಡ ಇಸ್ರೇಲ್–ಸಿರಿಯಾ ಸಂಘರ್ಷ: ಕೆಲವು ದಿನಗಳ ಹಿಂದೆ ಇಸ್ರೇಲ್ ಮತ್ತು ಸಿರಿಯಾ ನಡುವೆ ಸಂಘರ್ಷ ದಿಢೀರ್ ಉಲ್ಬಣಗೊಂಡಿತು. ಉಭಯ ದೇಶಗಳ ಘರ್ಷಣೆಗಳು ಪ್ರಾರಂಭವಾದಾಗಿನಿಂದ ಇಸ್ರೇಲ್ ದಕ್ಷಿಣ ಸಿರಿಯಾದಲ್ಲಿ ಸರ್ಕಾರಿ ಪಡೆಗಳ ಬೆಂಗಾವಲುಗಳ ಮೇಲೆ ಸರಣಿ ವಾಯುದಾಳಿಗಳನ್ನು ಪ್ರಾರಂಭಿಸಿದೆ. ಮಂಗಳವಾರ ನಡೆದ ಕದನ ವಿರಾಮ ಒಪ್ಪಂದವನ್ನು ಉಲ್ಲಂಘಿಸಿದ್ದಕ್ಕಾಗಿ ಸಿರಿಯನ್ ರಕ್ಷಣಾ ಸಚಿವಾಲಯವು ಸ್ವೀಡಾದ ಡ್ರೂಜ್ ಬಹುಸಂಖ್ಯಾತ ಪ್ರದೇಶದಲ್ಲಿನ ಇಸ್ರೇಲ್ ಸೇನೆಯನ್ನು ದೂಷಿಸಿತ್ತು. ಅಂತೆಯೇ ಇದು ಸಿರಿಯನ್ ಸೈನ್ಯವನ್ನು ಪ್ರತಿದಾಳಿ ಮಾಡಲು ಪ್ರೇರೇಪಿಸಿತು.

ಮೈಸೂರು ಮಿತ್ರ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವು ಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಮೈಸೂರು ಮಿತ್ರ

ಗುರುವಾರ 17 ಜುಲೈ 2025

ಸೇವಾ ಕಾರ್ಯಗಳೊಂದಿಗೆ ಮುಡಾ ಮಾಜಿ ಅಧ್ಯಕ್ಷ ವಿಜಯ್ ಹುಟ್ಟುಹಬ್ಬ ಆಚರಣೆ



ಸಾಲಿಗ್ರಾಮ ತಾಲೂಕಿನ ಹರದನಹಳ್ಳಿಯಲ್ಲಿ 51ನೇ ಹುಟ್ಟುಹಬ್ಬ ಆಚರಿಸಿಕೊಂಡ ಮುಡಾ ಮಾಜಿ ಅಧ್ಯಕ್ಷ ಹೆಚ್.ಎನ್.ವಿಜಯ್ ಅವರನ್ನು ಸನ್ಮಾನಿಸಲಾಯಿತು.

ಕೆ.ಆರ್.ನಗರ, ಜು.16– ಸಾಲಿಗ್ರಾಮ ತಾಲೂಕಿನ ಹರದನಹಳ್ಳಿಯಲ್ಲಿ ಭಗೀರಥ ಪೀಠದ ಶ್ರೀಪುರುಷೋತ್ತಮನಂದಪುರಿ ಸ್ವಾಮೀಜಿ ಅವರ ಸಾನಿಧ್ಯದಲ್ಲಿ ವಿವಿಧ ಸೇವಾ ಕಾರ್ಯಗಳೊಂದಿಗೆ ಮುಡಾ ಮಾಜಿ ಅಧ್ಯಕ್ಷ ಹೆಚ್.ಎನ್.ವಿಜಯ್ ಅವರ 51ನೇ ಹುಟ್ಟುಹಬ್ಬ ವಿಜೃಂಭಣೆಯಿಂದ ನಡೆದು ಹತ್ತು ಹಲವು ವೈಶಿಷ್ಟ್ಯಗಳಿಗೆ ಸಾಕ್ಷಿಯಾಯಿತು.

ನಾಡಿನ ವಿವಿಧ ಮೂಲೆಗಳಿಂದ ಆಗಮಿಸಿದ್ದ 51 ಮಠಗಳ ಸ್ವಾಮೀಜಿಗಳ ಪಾದ ಪೂಜೆಯೊಂದಿಗೆ ಕಾರ್ಯಕ್ರಮ ಆರಂಭಿಸಲಾಯಿತು. ನಂತರ 51 ಗರ್ಭಿಣಿಯರಿಗೆ ಮಡಿಲು ತುಂಬಿ ಸೀಮಂತ ಶಾಸ್ತ್ರ, 51 ಮುತ್ತೈದೆಯರಿಗೆ ಬಾಗಿನ ಅರ್ಪಿಸಿದ ಬಳಿಕ 51 ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಅಭಿನಂದಿಸಲಾಯಿತು. ಅಲ್ಲದೇ ಆರೋಗ್ಯ ಮತ್ತು ಕಣ್ಣಿನ ತಪಾಸಣಾ ಶಿಬಿರ, ರಕ್ತದಾನ ಶಿಬಿರಗಳು ನಡೆದವು. ಈ ವೇಳೆ ನೂರಾರು ಮಂದಿ ತಪಾಸಣೆಗೊಳಪಟ್ಟರು.

ಹೆಚ್.ಎನ್.ವಿಜಯ್ ಅವರನ್ನು ವಿವಿಧ ರಾಜಕೀಯ ಪಕ್ಷಗಳ ಮುಖಂಡರು, ಮಠಾಧೀಶರು, ಜನಪ್ರತಿನಿಧಿಗಳು, ರೈತರು, ಸರ್ಕಾರಿ ನೌಕರರು ಹಾಗೂ ಜನಸಾಮಾನ್ಯರು ಸೇರಿದಂತೆ ರಾಜ್ಯದ ವಿವಿಧ ಭಾಗಗಳಿಂದ ಆಗಮಿಸಿದ್ದ ಪ್ರಮುಖರು, ಕೇರಳ ಮತ್ತು ತಮಿಳುನಾಡು ರಾಜ್ಯದ ಉದ್ಯಮಿಗಳೊಂದಿಗೆ 20 ಸಾವಿರಕ್ಕೂ ಅಧಿಕ ಮಂದಿ ಹಾರೈಸಿದರು.

ಇದೇ ವೇಳೆ ಮೈಸೂರಿನ ಆದಿಚುಂಚನಗಿರಿ ಶಾಖಾ ಮಠದ ಶ್ರೀಸೋಮನಾಥ ಸ್ವಾಮೀಜಿ, ಕಾಗಿನೆಲೆ ಮಠದ ಶ್ರೀಶಿವನಂದಾಪುರಿಸ್ವಾಮೀಜಿ, ಬೇಬಿ ಮಠದ ತ್ರಿನೇತ್ರ ಸ್ವಾಮೀಜಿ, ಗಾವಡಗೆರೆ ಗುರುಲಿಂಗ ಜಂಗಮ ಮಠದ ಶ್ರೀನಟರಾಜ ಸ್ವಾಮೀಜಿ, ರಾವಂದೂರು ಮೋಕ್ಷಪತಿ ಸ್ವಾಮೀಜಿ, ಲಾಲನಹಳ್ಳಿ ಮಠದ ಶರಣೆ ಜಯದೇವಿತಾಯಿ ಸೇರಿದಂತೆ 51 ಸ್ವಾಮೀಜಿಗಳಿಗೆ ಪಾದ ಪೂಜೆ ಸಲ್ಲಿಸಿ ಗೌರವ ಸಮರ್ಪಿಸಲಾಯಿತು. ಚನ್ನರಾಯಪಟ್ಟಣದ ಮಾತೃಭೂಮಿ ವೃದ್ಧಾಶ್ರಮ ಸಂಸ್ಥೆಯ ನಾಗಣ್ಣ ಜೈಹಿಂದ್ ಅವರು ಗರ್ಭಿಣಿ ಮಹಿಳೆಯರಿಗೆ 51 ಹೂವಿನ ಗಿಡಗಳನ್ನು ವಿತರಿಸಿದರು.

ಕಾರ್ಯಕ್ರಮಕ್ಕೆ ಆಗಮಿಸಿದ್ದ ಎಲ್ಲರಿಗೂ ಮಾಂಸಹಾರ ಮತ್ತು ಸಸ್ಯಹಾರದ ಭೋಜನ ಊಟ ಬಡಿಸಲಾಯಿತು. ಆರ್ಥಿಕವಾಗಿ ಸಂಕಷ್ಟಕ್ಕೀಡಾದವರು, ನೊಂದವರು ಸೇರಿದಂತೆ ಆಶಕ್ತರಿಗೆ ದಾನ ಧರ್ಮ ಮಾಡಲಾಯಿತು.

ರಸಮಂಜರಿ: ಖ್ಯಾತ ಚಿತ್ರ ಕಲಾವಿದ ಪ್ರಕಾಶ್ ಚಿಕ್ಕಪಾಳ್ಯ ಹಾಕಿದ್ದ ಅದ್ದೂರಿ ಸೆಟ್‌ನಲ್ಲಿ ಸಂಗೀತ ಮಾಂತ್ರಿಕ ಅರ್ಜುನ್ ಜನ್ಯ ತಂಡ ಹಾಗೂ ನಿರೂಪಕಿ ಅನುಶ್ರೀ ಅವರ ಜುಗಲ್‌ಬಂದಿ ಜನಮನಸೂರೆಗೊಂಡಿತ್ತು. 'ಬಲೇ ಬಲೇ ಜೈ ಭಜರಂಗಿ' ಎಂದು ಹಾಡುತ್ತಾ ಬಂದ ಅರ್ಜುನ್ ಜನ್ಯ ರಸಮಂಜರಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರೆ, ಖ್ಯಾತ ನಿರೂಪಕಿ ಅನುಶ್ರೀ ಈ ಕಾರ್ಯಕ್ರಮ ನಡೆಸಿಕೊಟ್ಟರು.

ಸಂಗೀತ ಮಾಂತ್ರಿಕನ ಹಾಡಿನ ಮೋಡಿ ಹಾಗೂ ನೃತ್ಯ ವೈಭವಕ್ಕೆ ಯುವ ಜನತೆ ಮತ್ತು ನೆರೆದಿದ್ದ ಸಾವಿರಾರು ಜನರು ಕುಣಿದು ಕುಪ್ಪಳಿಸಿ ಸಂಗೀತದ ಅಲೆಯಲ್ಲಿ ತೇಲಿದರು.

ಕಾರ್ಯಕ್ರಮದಲ್ಲಿ ನವನಗರ ಅರ್ಬನ್ ಕೋ ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಕೆ.ಎನ್.ಬಸಂತ್, ಮೈಮುಲ್ ಅಧ್ಯಕ್ಷ ಚೆಲುವರಾಜ್, ನಿರ್ದೇಶಕರಾದ ಎ.ಟಿ.ಸೋಮಶೇಖರ್, ಕೆ.ಜೆ.ಮಹೇಶ್, ಮಂಡ್ಯ ಮನ್‌ಮುಲ್ ಮಾಜಿ ಅಧ್ಯಕ್ಷ ರಾಮಚಂದ್ರ, ನಿವೃತ್ತ ವಾಣಿಜ್ಯ ತೆರಿಗೆ ಆಯುಕ್ತ ಜಗನಾಥ ಸಾಗರ್, ಎಂಸಿಡಿಸಿಸಿ ಬ್ಯಾಂಕ್ ನೌಕರರ ಸಂಘದ ಅಧ್ಯಕ್ಷ ಮಂಜುಗೌಡ, ಹೆಚ್.ಎನ್.ವಿಜಯ್ ಅಭಿಮಾನಿ ಬಳಗದ ಜಿಲ್ಲಾ ಪತ್ರ ಬರಹಗಾರ ರಾಜೀವ್, ಮೈಸೂರು ನಗರಪಾಲಿಕೆ ಮಾಜಿ ಸದಸ್ಯ ಮಹದೇಶ್, ತಾ. ಒಕ್ಕಲಿಗರ ಸಂಘದ ಗೌರವಾಧ್ಯಕ್ಷ ಮಿರ್ಲೆ ಅಣ್ಣೇಗೌಡ, ಸುಯೋಗ ಆಸ್ಪತ್ರೆಯ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ, ಕೆಪಿಸಿಸಿ ಮಾಜಿ ಸದಸ್ಯ ಎಸ್.ಪಿ.ತಮ್ಮಯ್ಯ, ಜಿಪಂ ಮಾಜಿ ಉಪಾಧ್ಯಕ್ಷ ಅಡಗೂರು ಚನ್ನಬಸಪ್ಪ, ಮಾಜಿ ಸದಸ್ಯ ಎಂ.ಟಿ.ಕುಮಾರ್, ಎಪಿಎಂಸಿ ಮಾಜಿ ಅಧ್ಯಕ್ಷ ಕುಪ್ಪಳ್ಳಿ ಸೋಮು, ಕೇರಳದ ಅಡಿಕೆ ಉದ್ಯಮಿಗಳಾದ ಫೈಸಲ್, ಕುಳ್ಳ ಇಬ್ರಾಹಿಂ, ಕಿಶೋರಿ, ಮಾಣಿಕ್ ಚಂದ್, ಶಿವಮೊಗ್ಗದ ಪ್ರಕಾಶ್, ಕರುಣೇಶ್, ಹರದನಹಳ್ಳಿ ಗ್ರಾಪಂ ಅಧ್ಯಕ್ಷ ಗೋಪಾಲ್, ಮಾಜಿ ಅಧ್ಯಕ್ಷೆ ಮಂಜುಳ ರಮೇಶ್, ಸದಸ್ಯ ದೀಪು ಸೇರಿದಂತೆ ಇನ್ನಿತರರಿದ್ದರು.

ಭವಿಷ್ಯದ ಜನನಾಯಕ ಹೆಚ್.ಎನ್.ವಿಜಯ್: ಜಿಟಿಡಿ ಭವಿಷ್ಯ



ಕಾರ್ಯಕ್ರಮದಲ್ಲಿ ಹೆಚ್.ಎನ್.ವಿಜಯ್ ಅವರು ಕೇಕ್ ಕತ್ತರಿಸುವ ಮೂಲಕ ಹುಟ್ಟುಹಬ್ಬ ಆಚರಿಸಿಕೊಂಡರು.

ಕೆ.ಆರ್.ನಗರ, ಜು.16– ಸಂಕಷ್ಟದಲ್ಲಿರುವವರ ಸಮಸ್ಯೆಗಳಿಗೆ ಸ್ಪಂದಿಸುವ ಗುಣ ಹೊಂದಿರುವ ಜೊತೆಗೆ ಜೀವನ್ಮುಖಿಯಾಗಿ ಬದುಕುತ್ತಿರುವ ಮುಡಾ ಮಾಜಿ ಅಧ್ಯಕ್ಷ ಹೆಚ್.ಎನ್.ವಿಜಯ್ ಅವರು ಭವಿಷ್ಯದ ಜನನಾಯಕ ಎಂದು ಶಾಸಕ ಜಿ.ಟಿ.ದೇವೇಗೌಡ ಭವಿಷ್ಯ ನುಡಿದರು.

ಮುಡಾ ಮಾಜಿ ಅಧ್ಯಕ್ಷ ಹೆಚ್.ಎನ್.ವಿಜಯ್ ಅವರ 51 ಜನ್ಮದಿನೋತ್ಸವದಲ್ಲಿ ಮಾತನಾಡಿದ ಅವರು, ಕಳೆದ 2 ದಶಕಗಳಿಂದ ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಇವರು ಮಾಡುತ್ತಿರುವ ಜನಸೇವೆ ಇತರರಿಗೆ ಅನುಕರಣೀಯ ಎಂದರು.

ತಮ್ಮ ಬಳಿ ಸಹಾಯ ಬೇಡಿ ಬರುವ ಎಲ್ಲರಿಗೂ ಕೊಡುಗೈ ದಾನಿಯಂತೆ ಉದಾರವಾಗಿ ನೀಡುವ ಗುಣ ಬೆಳೆಸಿಕೊಂಡಿರುವ ಮುಡಾ ಮಾಜಿ ಅಧ್ಯಕ್ಷರು ಸಂಕಷ್ಟದಲ್ಲಿದ್ದ ನನ್ನ ಬೆನ್ನಿಗೂ ನಿಂತು ಜೀವನದಲ್ಲಿ ಮರೆಯಲಾಗದ ಸಹಕಾರ ನೀಡಿದ್ದಾರೆ ಎಂದು ಉಪಕಾರ ಸ್ಮರಣೆ ಮಾಡಿದರು.

ಬಂಗಾರ ಮನುಷ್ಯ ಚಲನಚಿತ್ರದಲ್ಲಿ ವರನಟ ಡಾ.ರಾಜಕುಮಾರ್ ರಾಜೀವಪ್ಪನಾಗಿ ಬಾಲಕೃಷ್ಣ ಅವರು ರಾಜೋಟ್ಟಪ್ಪನಾಗಿದ್ದಾರೆ. ಆದರೆ ನಿಜ ಜೀವನದಲ್ಲಿ ನಾನು ಮತ್ತು ಹೆಚ್.ಎನ್.ವಿಜಯ್ ಅವರ ಕುಟುಂಬ ಬಾಂಧವ್ಯ ಆ ಎರಡು ಪಾತ್ರಗಳಿಗೆ ಹೋಲಿಕೆಯಾಗಿದೆ ಎಂದು ಭಾವುಕರಾಗಿ ನುಡಿದರು.

ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಮಾತನಾಡಿ, ಭೂಮಿ ಮೇಲೆ ಜನ್ಮ ತಾಳಿದ ಮನುಷ್ಯ ಭವಿಷ್ಯದಲ್ಲಿ ಏನಾಗುತ್ತಾನೆ ಎಂದು ಆತನಿಗೆ ತಿಳಿದಿರುವುದಿಲ್ಲ. ಆದರಂತೆ ಹೆಚ್.ಎನ್.ವಿಜಯ್ ಅವರು ದೇವರು ಮತ್ತು ತಂದೆ, ತಾಯಿ ಹಾಗೂ ಜನರ ಆರ್ಶೀವಾದಿಂದ ಉತ್ತಮ ಸ್ಥಿತಿಯಲ್ಲಿದ್ದು, ಅವರ ಸೇವಾ ಕಾರ್ಯಗಳು ನಿರಂತರವಾಗಿ ಮುಂದುವರಿದು ಅವರು ರಾಜಕೀಯವಾಗಿ ಪರಂಮೊಚ್ಚ ಸ್ಥಾನಕ್ಕೆ ಏರಲಿ ಎಂದರು.

ಮಾಜಿ ಸಚಿವ ಸಾ.ರಾ.ಮಹೇಶ್, ಶಾಸಕ ಡಿ.ರವಿ ಶಂಕರ್, ಎಂಎಲ್‌ಸಿ ಕೆವಿವೇಕಾನಂದ, ಮಾಜಿ ಎಂಎಲ್‌ಸಿ ಕೆಟಿಶ್ರೀಕಂಠೇಗೌಡ, ಜಿ.ಟಿ.ದೇವೇಗೌಡರ ಪತ್ನಿ ಲಲಿತಾ ದೇವೇಗೌಡ, ಮಕ್ಕಳಾದ ಪೂರ್ಣಿಮಾ, ಯಶೋದ ಆನಂದ್, ಹೆಚ್.ಎನ್. ವಿಜಯ್ ತಾಯಿ ಸೌಭಾಗ್ಯಮ್ಮ, ಪತ್ನಿ ಸವಿತ, ಪುತ್ರ ಸಂದೇಶ್, ಪುತ್ರಿ ಹಾಗೂ ಸಹೋದರ ಹೆಚ್.ಎನ್.ರವಿ, ನಮಿತ ಹುಟ್ಟುಹಬ್ಬ ಸಂಭ್ರಮದಲ್ಲಿ ಭಾಗವಹಿಸಿ ಹೂಗುಚ್ಚ ನೀಡಿ ಶುಭ ಕೋರಿದರು.

ಇದೇ ವೇಳೆ ಹೆಚ್.ಎನ್.ವಿಜಯ್ ದಂಪತಿಗಳಿಗೆ ಅಭಿಮಾನಿಗಳು ಬೆಳ್ಳಿ ಕಿರೀಟ ತೊಡಿಸಿ ತಮ್ಮ ಅಭಿಮಾನ ಮೆರೆದರು. ಬೃಹತ್ ವೇದಿಕೆಯಲ್ಲಿ ಶಾಸಕ ಜಿ.ಟಿ.ದೇವೇಗೌಡ ನೇತೃತ್ವದಲ್ಲಿ ಸಂಗೀತ ಮಾಂತ್ರಿಕ ಅರ್ಜುನ್ ಜನ್ಯಾ ಹಾಗೂ ಅನುಶ್ರೀ ಅವರ ಸಂಗೀತ ಕಾರ್ಯಕ್ರಮದಲ್ಲಿ ಕೇಕ್ ಕತ್ತರಿಸಿ ಹುಟ್ಟುಹಬ್ಬ ಆಚರಣೆ ಮಾಡಲಾಯಿತು.

ಶ್ರೀಕಂಠೇಶ್ವರನ ಹುಂಡಿಯಲ್ಲಿ 1.80 ಕೋಟಿ ಸಂಗ್ರಹ



ಬುಧವಾರ ಕಾಣಿಕೆ ಹುಂಡಿಗಳ ಪರ್ಕಾವಣೆ ನಡೆಸಲಾಯಿತು.

ನಂಜನಗೂಡು, ಜು.16– ನಗರದ ಶ್ರೀಕಂಠೇಶ್ವರ ದೇವಾಲಯದ ಹುಂಡಿಯಲ್ಲಿ 1.80 ಕೋಟಿ ಸಂಗ್ರಹವಾಗಿದೆ ಎಂದು ದೇವಾಲಯದ ಇಓ ಜಗದೀಶ್ ಕುಮಾರ್ ತಿಳಿಸಿದ್ದಾರೆ.

ದೇವಾಲಯದ ದಾಸೋಹ ಭವನದಲ್ಲಿ ಬುಧವಾರ 31 ಹುಂಡಿಗಳ ಪರ್ಕಾವಣೆ ನಡೆಸಲಾಯಿತು. ಈ ವೇಳೆ ಹುಂಡಿಗಳಲ್ಲಿ 1 ಕೋಟಿ 80 ಲಕ್ಷದ 67 ಸಾವಿರದ 108 ರೂ., 74.5 ಗ್ರಾಂ ಚಿನ್ನ, 1.78 ಕೆ.ಜಿ ಬೆಳ್ಳಿ, 78 ವಿದೇಶಿ ಕರೆನ್ಸಿಗಳು ದೊರೆತಿದೆ. ನಗರದ ಬ್ಯಾಂಕ್ ಆಫ್ ಬರೋಡಾ ಬ್ಯಾಂಕ್ ಸಿಬ್ಬಂದಿ, ನೂರಕ್ಕೂ ಹೆಚ್ಚು ಸ್ತ್ರೀಶಕ್ತಿ ಸಂಘದ ಮಹಿಳೆಯರು ಹಾಗೂ ದೇವಾಲಯದ ಸಿಬ್ಬಂದಿ ಎಣಿಕೆ ಕಾರ್ಯಕ್ಕೆ ನೆರವಾದರು.

ಹುಂಡಿಯಲ್ಲಿ 31 ಯುಎಸ್‌ಎ ಡಾಲರ್, 23 ಕತಾರ್ ರಿಯಾಬ್, 8 ಕುವೈತ್ ದಿನಾರ್, 2 ಕೆನಡಾ ಡಾಲರ್, 5 ನೇಪಾಳ ರುಪೀಸ್, ಓಮನ್ 3, ಇಂಡೋನೇಷಿಯಾದ 2, ಆಸ್ಟ್ರೇಲಿಯಾದ 1 ಡಾಲರ್, ಎರಡು ಯೂರೋ ಸೇರಿದಂತೆ 78 ವಿದೇಶಿ ಕರೆನ್ಸಿಗಳು ಹುಂಡಿಯಲ್ಲಿ ದೊರೆತಿದೆ. ಈ ವೇಳೆ ಧಾರ್ಮಿಕ ತಹಸೀಲ್ದಾರ್ ವಿದ್ಯುಲತಾ, ಲೆಕ್ಕಾಧಿಕಾರಿ ಗುರುಮಲ್ಲಯ್ಯ ಉಪಸ್ಥಿತರಿದ್ದರು.

ಬಿ.ನಾಗರಾಜ್‌ಗೆ ಯುವರತ್ನ ಪ್ರಶಸ್ತಿ



ಪಿರಿಯಾಪಟ್ಟಣ ತಾಲೂಕಿನ ಮಂಚದೇವನಹಳ್ಳಿಯ ಸಮಾಜ ಸೇವಕ ಬಿ.ನಾಗರಾಜ್ ಅವರಿಗೆ ಜೀ ಕನ್ನಡ ವಾಹಿನಿಯಿಂದ ಯುವರತ್ನ ಪ್ರಶಸ್ತಿ ಪ್ರದಾನ ಮಾಡಲಾಯಿತು. ಈ ವೇಳೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಮಾಜಿ ಸಿಎಂ ಡಿ.ವಿ.ಸದಾನಂದಗೌಡ, ಚಿತ್ರನಟ ಚಿಕ್ಕಣ್ಣ, ಜೀ ಕನ್ನಡ ಸಂಸ್ಥೆ ಮುಖ್ಯಸಂಪಾದಕ ರವಿ ಸೇರಿದಂತೆ ಹಲವರಿದ್ದರು.

ಕೋಟೆ, ಸರಗೂರು ಭಾಗದಲ್ಲಿ ಕೈಗಾರಿಕೆ ಸ್ಥಾಪಿಸಿ

ಕೈಗಾರಿಕಾ ಸಚಿವ ಎಂಬಿಪಿಗೆ ಮಾಜಿ ಸಚಿವ ಕೋಟೆ ಎಂ.ಶಿವಣ್ಣ ಮನವಿ



ಸಚಿವ ಎಂ.ಬಿ.ಪಾಟೀಲ್ ಅವರನ್ನು ಮಾಜಿ ಸಚಿವ ಕೋಟೆ ಎಂ.ಶಿವಣ್ಣ ಸನ್ಮಾನಿಸಿದರು.

ಹೆಚ್.ಡಿ.ಕೋಟೆ, ಜು.16– ಕೋಟೆ ಮತ್ತು ಸರಗೂರು ತಾಲೂಕುಗಳ ವ್ಯಾಪ್ತಿ ಕೈಗಾರಿಕೆಗಳನ್ನು ಸ್ಥಾಪಿಸುವ ಮೂಲಕ ಈ ಭಾಗದ ಯುವಜನತೆಗೆ ಉದ್ಯೋಗ ಕಲ್ಪಿಸುವಂತೆ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ಅವರಿಗೆ ಮಾಜಿ ಸಚಿವ ಕೋಟೆ ಎಂ.ಶಿವಣ್ಣ ಮನವಿ ಸಲ್ಲಿಸಿದರು.

ಬೆಂಗಳೂರಿನಲ್ಲಿ ಸಚಿವರನ್ನು ಭೇಟಿ ಮಾಡಿ ಸನ್ಮಾನಿಸಿ, ಮನವಿ ಸಲ್ಲಿಸಿ ಮಾತನಾಡಿದ ಕೋಟೆ ಎಂ.ಶಿವಣ್ಣ, ಹೆಚ್.ಡಿ.ಕೋಟೆ ವಿಧಾನಸಭಾ ಕ್ಷೇತ್ರದಲ್ಲಿ ಹೆಚ್.ಡಿ.ಕೋಟೆ ಮತ್ತು ಸರಗೂರು ತಾಲೂಕುಗಳಿದ್ದು, ನಂಜುಂಡಪ್ಪ ವರದಿಯಲ್ಲಿ ಸದರಿ ತಾಲೂಕುಗಳನ್ನು ಹಿಂದುಳಿದ ತಾಲೂಕು ಎಂದು ವರದಿ ಮಾಡಲಾಗಿದೆ. ತಾಲೂಕುಗಳಲ್ಲಿ ಪ.ಜಾತಿ ಮತ್ತು ಪಂಗಡದ ಜನರು ಅಧಿಕ ಸಂಖ್ಯೆಯಲ್ಲಿದ್ದು, ಸಾಕಷ್ಟು ಬಡ ಕುಟುಂಬಗಳ ಯುವಕರು ಉದ್ಯೋಗ ಅರಸಿ ಬೇರೆಡೆ ತೆರಳುತ್ತಿದ್ದಾರೆ. ಅಲ್ಲದೇ ಇನ್ನು ಕೆಲವರು ಕೊಡಗು, ಕೇರಳಕ್ಕೆ ಕೂಲಿ ಕೆಲಸಕ್ಕೆ ಹೋಗುತ್ತಾರೆ. ಹೆಚ್.ಡಿ.ಕೋಟೆ ತಾಲೂಕು ಕೇರಳ ರಾಜ್ಯದ ಗಡಿವರೆಗೂ ಇದ್ದು, ವಿಸ್ತೀರ್ಣದಲ್ಲಿ ತುಂಬಾ ದೊಡ್ಡದಾಗಿದೆ. ಕ್ಷೇತ್ರದಲ್ಲಿ 3 ನೀರಾವರಿ ಅಣೆಕಟ್ಟೆಗಳಿದ್ದರೂ, ತಾಲೂಕಿನ ರೈತರಿಗೆ ಯಾವುದೇ ಪ್ರಯೋಜನವಾಗಿಲ್ಲ. ಈಗಲೂ ಇಲ್ಲಿನ ರೈತರು ಮಳೆ ಆಶ್ರಯದಲ್ಲೇ ವ್ಯವಸಾಯ ಮಾಡಿ ಜೀವನ ನಡೆಸುತ್ತಿದ್ದಾರೆ ಎಂದರು.

ಅಲ್ಲದೇ ಕೋಟೆ, ಸರಗೂರು ತಾಲೂಕುಗಳು ಅರಣ್ಯದಿಂದ ಸುತ್ತುವರೆದಿದ್ದು, ಫಲವತ್ತಾದ ಭೂಮಿ ಹೊಂದಿದ್ದರೂ ವಿದ್ಯಾವಂತ ಯುವಕ, ಯುವತಿಯರು ನಿರುದ್ಯೋಗಿಗಳಾಗಿ ಬೇರೆಡೆಗೆ ಜೀವನೋಪಾಯಕ್ಕೆ ಉದ್ಯೋಗ ಅರಸಿ ಬೇರೆ ಜಿಲ್ಲೆ ಮತ್ತು ಬೇರೆ ರಾಜ್ಯಗಳಿಗೆ ವಲಸೆ ಹೋಗುತ್ತಿದ್ದಾರೆ. ಮೈಸೂರು ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲೂ ಕೈಗಾರಿಕೆಗಳಿವೆ. ಆದರೆ ಹೆಚ್.ಡಿ.ಕೋಟೆ, ಸರಗೂರು ತಾಲೂಕುಗಳಲ್ಲಿ ಕೈಗಾರಿಕೆಗಳಿಲ್ಲ. ಆದ್ದರಿಂದ ಈ ಭಾಗದಲ್ಲಿ ಕೈಗಾರಿಕೆ ಸ್ಥಾಪಿಸಲು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಈ ವೇಳೆ ಜಿಪಂ ಮಾಜಿ ಸದಸ್ಯ ಬಿ.ವಿ.ಬಸವರಾಜ್, ಮುಖಂಡಗಳಾದ ರಮೇಶ್ ಗಿರಿ ಪ್ರಸಾದ್ ಇದ್ದರು.

ಹುಣಸೂರಲ್ಲಿ ಡಯಾಲಿಸಿಸ್ ಕೇಂದ್ರಕ್ಕೆ ಚಾಲನೆ



ಡಯಾಲಿಸಿಸ್ ಕೇಂದ್ರವನ್ನು ಶಾಸಕ ಜಿ.ಡಿ.ಹರೀಶ್‌ಗೌಡ ಉದ್ಘಾಟಿಸಿದರು.

ಹುಣಸೂರು, ಜು.16– ಸಾರ್ವಜನಿಕ ಆಸ್ಪತ್ರೆಗಳಲ್ಲಿ ಡಯಾಲಿಸಿಸ್ ಕೇಂದ್ರಗಳನ್ನು ತೆರೆಯುವುದರಿಂದ ಸಾಮಾನ್ಯ ಜನರಿಗೆ ಆರೋಗ್ಯ ಸೇವೆಗಳು ಸಿಗಲಿದೆ ಎಂದು ಶಾಸಕ ಜಿ.ಡಿ.ಹರೀಶ್‌ಗೌಡ ತಿಳಿಸಿದರು.

ನಗರದ ಸಾರ್ವಜನಿಕ ಆಸ್ಪತ್ರೆಯಲ್ಲಿ 2 ಡಯಾಲಿಸಿಸ್ ಯಂತ್ರಗಳಿಗೆ ಚಾಲನೆ ನೀಡಿ ಮಾತನಾಡಿದ ಅವರು, ಆರೋಗ್ಯ ಸೇವೆಗಳು ಕಡಿಮೆ ಇರುವ ಪ್ರದೇಶಗಳಲ್ಲಿ ಈ ರೀತಿಯ ಸೇವೆಗಳು ಪ್ರಾರಂಭವಾದರೆ ರೋಗಿಗಳಿಗೆ ಅಗತ್ಯ ಚಿಕಿತ್ಸೆ ಒದಗಿಸಲು ಸಹಾಯವಾಗುತ್ತದೆ ಎಂದ ಅವರು ಸಾರ್ವಜನಿಕರು ಇದರ ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಡಯಾಲಿಸಿಸ್ ಚಿಕಿತ್ಸೆ ದುಬಾರಿಯಾಗಬಾರದೆಂಬ ಉದ್ದೇಶದಿಂದ ನಗರದ ಸಾರ್ವಜನಿಕ ಆಸ್ಪತ್ರೆಯಲ್ಲಿ ಡಯಾಲಿಸಿಸ್ ಮಿಷನ್ ಅಳವಡಿಸಲಾಗಿದೆ. ಹೊಸ ಡಯಾಲಿಸಿಸ್ ಯಂತ್ರಗಳು ಅತ್ಯಾಧುನಿಕವಾಗಿದ್ದು, ತರಬೇತಿ ಪಡೆದ ಸಿಬ್ಬಂದಿಗಳೊಂದಿಗೆ ಸಜ್ಜುಗೊಂಡಿವೆ ಎಂದರು. ಸಮಾರಂಭದಲ್ಲಿ ಡಾ.ಉಮೇಶ್, ಡಾ.ಸತೀಶ್, ಡಾ.ಸುರೇಶ್, ನಗರಸಭೆ ಅಧ್ಯಕ್ಷ ಗಣೇಶ್ ಕುಮಾರಸ್ವಾಮಿ, ಸದಸ್ಯರಾದ ಕೃಷ್ಣರಾಜಗುಪ್ತ, ಶ್ರೀನಾಥ್, ಸತೀಶ್, ರಾಣಿ ಪೆರುಮಾಳ್, ಮಾಲೀಕ್ ಪಾಷ, ರಕ್ಷಾ ಸಮಿತಿ ಸದಸ್ಯರಾದ ಅಬ್ದುಲ್ ಜಬಿ, ಪ್ರಭಾಕರ್, ನಾಗರಾಜ್, ರವಿರೆಡ್ಡಿ, ಸಂತೋಷ್, ಮಂಜುನಾಥ್, ನೇತ್ರ ಇತರರಿದ್ದರು.

ಸಮಾಜದ ಅಂಕು ಡೊಂಕು ತಿದ್ದುವ ಕೆಲಸದಿಂದ ಆತ್ಮಸ್ಥೈರ್ಯ ಹೆಚ್ಚಳ

ದಸಂಸ ರಾಜ್ಯ ವಿಭಾಗೀಯ ಸಂಚಾಲಕ ಆಲಗೂಡು ಡಾ.ಚಂದ್ರಶೇಖರ್



ಕಾರ್ಯಕ್ರಮದಲ್ಲಿ ಆಲಗೂಡು ಡಾ.ಚಂದ್ರಶೇಖರ್ ಅವರನ್ನು ಸನ್ಮಾನಿಸಲಾಯಿತು.

ತಿ.ನರಸೀಪುರ, ಜು.16– ಮುಳ್ಳಿನ ಹಾದಿಯಲ್ಲಿಯೂ ಸಮಾಜ ಸೇವೆ ಮಾಡುವ ಮೂಲಕ ಸಮಾಜದ ಅಂಕು ಡೊಂಕುಗಳನ್ನು ತಿದ್ದುವ ಕೆಲಸ ಮಾಡುವುದು ನಮ್ಮ ಆತ್ಮಸ್ಥೈರ್ಯ ಹೆಚ್ಚಿಸುತ್ತದೆ ಎಂದು ದಲಿತ ಸಂಘರ್ಷ ಸಮಿತಿ (ಭೀಮವಾದ) ರಾಜ್ಯ ವಿಭಾಗೀಯ ಸಂಚಾಲಕ ಆಲಗೂಡು ಡಾ.ಚಂದ್ರಶೇಖರ್ ತಿಳಿಸಿದರು.


ಕರ್ನಾಟಕ ಮೀಡಿಯಾ ಕ್ಲಬ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ರಾಜ್ಯ ಮಟ್ಟದ ಸರ್ವ ಶ್ರೇಷ್ಠ 'ಕರ್ನಾಟಕ ಭೂಷಣ' ಪ್ರಶಸ್ತಿ ಲಭಿಸಿದ ಹಿನ್ನೆಲೆಯಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ(ಭೀಮವಾದ) ವತಿಯಿಂದ ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಹಮ್ಮಿಕೊಳ್ಳಲಾಗಿದ್ದ ಅಭಿನಂದನಾ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ಸಮಾಜ ಸೇವೆ ಮಾಡುವ ವೇಳೆ ಹಲವು ತೊಂದರೆ ಎದುರಾಗಬಹುದು. ಅದನ್ನೆಲ್ಲಾ ಮೆಟ್ಟಿನಿಂತು ಜನಸೇವೆಯಲ್ಲಿ ತೊಡಗಿಸಿಕೊಂಡಾಗ ಸಿಗುವ ಆತ್ಮತೃಪ್ತಿ ವರ್ಣನೆಗೆ ನಿಲುಕದ್ದಾಗಿದೆ. ಬಲಿಷ್ಠರು, ಆರ್ಥಿಕವಾಗಿ ಬಲಿಷ್ಠರಾಗಿರುವವರು, ಜನಬಲ ಇರುವವರ ಎದುರು ಸೆಣಸಿ ಅಸಹಾಯಕರಿಗೆ ಸಹಾಯ ಮಾಡಬೇಕಾಗುತ್ತದೆ. ಜಾತ್ಯಾತೀತ, ಪಕ್ಷಾತೀತ ಹಾಗೂ ರಾಜಕೀಯವಾಗಿ ಕೆಲಸ ಮಾಡುವ ವೇಳೆ ಹಲವು ತೊಂದರೆ ಎದುರಾಗುವುದು ಸಹಜ. ಈ ಎಲ್ಲಾ ಸವಾಲುಗಳ ನಡುವೆ ಸಮಾಜದ ಅಂಕುಡೊಂಕು ತಿದ್ದಲು ಏಕೈಕ ಅಸ್ತ್ರವನ್ನು ಅಂಬೇಡ್ಕರ್ ನೀಡಿದ್ದಾರೆ. ಪ್ರಜೆಗಳೇ ಪ್ರಭುಗಳು ಎನ್ನುವಂತೆ ಒಬ್ಬ ಸಾಮಾನ್ಯ ವ್ಯಕ್ತಿ ಎಲ್ಲಾ ಹಕ್ಕುಗಳನ್ನು ಶಿಕ್ಷಣ, ಸಂಘಟನೆ ಮತ್ತು ಹೋರಾಟದ ಮೂಲಕ ಪಡೆದಿದ್ದಾನೆ. ಇದನ್ನು ತಿಳಿದುಕೊಂಡು ಹೋರಾಟದಲ್ಲಿ ಭಾಗಿಯಾದರೆ ಯಶಸ್ಸು ಸಿದ್ಧಿಯಾಗುತ್ತದೆ ಎಂದರು.

ಸಿಪಿಐ ಧನಂಜಯ್ ಮಾತನಾಡಿ, ದಲಿತ ಸಂಘಟನೆಯ ಮುಂಚೂಣಿ ನಾಯಕರಾಗಿರುವ ಡಾ.ಚಂದ್ರಶೇಖರ್ ಅವರಿಗೆ ಕರ್ನಾಟಕ ಭೂಷಣ ಪ್ರಶಸ್ತಿ ದೊರಕಿರುವುದು ಸಂತಸ ತಂದಿದೆ. ಅವರು ಈ ಪ್ರಶಸ್ತಿಗೆ ಅರ್ಹರಾಗಿದ್ದು, ಪ್ರಕೃತಿಯು ಅವರಿಗೆ ಮತ್ತಷ್ಟು ಜನಸೇವೆ ಮಾಡುವ ಶಕ್ತಿಕೊಡಲಿ. ದಲಿತ ಸಂಘಟನೆಯ ಮುಖಾಂತರ ಶೋಷಿತ ಸಮುದಾಯಗಳ ಪರವಾದ ಹೋರಾಟದಲ್ಲಿ ಅವರಿಗೆ ಯಶಸ್ಸು ಸಿಗಲಿ ಎಂದು ಹಾರೈಸಿದರು.

ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯ ಆಡಳಿತಾಧಿಕಾರಿ ಡಾ.ಅಭಿಲಾಷ್ ಮಾತನಾಡಿದರು. ಸಮಿತಿಯ ಜಿಲ್ಲಾ ಸಂಘಟನಾ ಸಂಚಾಲಕ ಕೆಂಪಯ್ಯನಹುಂಡಿ ರಾಜು, ತಾಲೂಕು ಸಂಚಾಲಕ ಮನೋಜ್, ಜಿಲ್ಲಾ ಸಮಿತಿ ಸದಸ್ಯ ಮರಿಸ್ವಾಮಿ, ಶಿವು, ಗೋವಿಂದರಾಜು, ರಾಜಪ್ಪ, ನಿಲಸೋಗೆ ಕುಮಾರ್, ಗವಿಸಿದ್ದಯ್ಯ, ಹೆಮ್ಮಿಗೆ ಪ್ರಸನ್ನ, ಅರ್ಜುನ್, ಪರಶುರಾಮ, ಕೊಳತ್ತೂರು ಪ್ರಭಾಕರ್, ಗಿರೀಶ್, ರಜನಿ, ಶಿವರಾಜ್, ಮಲ್ಲೇಶ್, ಜಯಣ್ಣ ಸೇರಿದಂತೆ ಮತ್ತಿತರರಿದ್ದರು.

ನೂತನ ಎಸ್‌ಐಗೆ ಸನ್ಮಾನ



ಮೈಸೂರಿನ ಜಯಪುರ ಪೊಲೀಸ್ ಠಾಣೆ ನೂತನ ಎಸ್‌ಐ ಕಾಳೇಗೌಡರನ್ನು ಸಮಾಜ ಸೇವಕ ಎಸ್.ಶ್ರೀಕಾಂತ್ ಸನ್ಮಾನಿಸಿದರು.ಈ ವೇಳೆ ಮುಖಂಡರಾದ ಜವರನಾಯಕ, ಸಂತೋಷ್ ಕುಮಾರ್ ಮತ್ತು ಅರುಣ್ ಉಪಸ್ಥಿತರಿದ್ದರು.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ

ನೂರಾರು ಕೋಟಿ ಅನುದಾನದಲ್ಲಿ ತಿ.ನರಸೀಪುರ ಅಭಿವೃದ್ಧಿ

12 ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿಗೆ ಸಂಸದ ಸುನೀಲ್ ಬೋಸ್ ಗುದ್ದಲಿ ಪೂಜೆ



ಸ್ಟೇಡಿಯಂ ಕಾಮಗಾರಿಗೆ ಸಂಸದ ಸುನೀಲ್ ಬೋಸ್ ಭೂಮಿ ಪೂಜೆ ನೆರವೇರಿಸಿದರು.

ತಿ.ನರಸೀಪುರ, ಜು.16– ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ತಿ.ನರಸೀಪುರ ಕ್ಷೇತ್ರವನ್ನು ನೂರಾರು ಕೋಟಿ ರೂ. ಅನುದಾನದೊಂದಿಗೆ ಅಭಿವೃದ್ಧಿಪಡಿಸಲಾಗಿದೆ ಎಂದು ಸಂಸದ ಸುನೀಲ್ ಬೋಸ್ ತಿಳಿಸಿದರು.

ತಿ.ನರಸೀಪುರ ಕ್ಷೇತ್ರ ವ್ಯಾಪ್ತಿಯ ವಿವಿಧ ಗ್ರಾಮಗಳಲ್ಲಿ ಅಂದಾಜು 12 ಕೋಟಿ ರೂ. ವೆಚ್ಚದಲ್ಲಿ ಎಸ್‌ಸಿಪಿ ಹಾಗೂ ಜಲಜೀವನ್ ಮಿಷನ್ ಯೋಜನೆಯಡಿ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ನಮ್ಮ ತಂದೆ, ಸಚಿವ ಮಹದೇವಪ್ಪನವರು ನೂರಾರು ಕೋಟಿ ರೂ. ಅನುದಾನ ತಂದು ಕ್ಷೇತ್ರವನ್ನು ನಿರೀಕ್ಷೆಗೂ ಮೀರಿ ಅಭಿವೃದ್ಧಿಪಡಿಸಿದ್ದಾರೆ. ಇಂದು ಸಹ 12 ಕೋಟಿ ರೂ. ವೆಚ್ಚದ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಲಾಗಿದೆ. ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಅನುದಾನ ದೊಂದಿಗೆ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ತಾವು ಬದ್ದರಾಗಿದ್ದು, ತಂದೆಯೊಂದಿಗೆ ಸೇರಿ ತಿ.ನರಸೀಪುರ ಕ್ಷೇತ್ರ ಹಾಗೂ ಚಾಮರಾಜನಗರ ಜಿಲ್ಲೆಯನ್ನು ಅಭಿವೃದ್ಧಿಪಡಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುತ್ತದೆ ಎಂದರು.

ಕ್ಷೇತ್ರದಲ್ಲಿ ಹಿಂದೆ ಯಾರೂ ಮಾಡದ ಅಭಿವೃದ್ಧಿ ಕಾಮಗಾರಿಯನ್ನು ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮುಖ್ಯಮಂತ್ರಿ ಸಿದ್ದರಾಮಯ್ಯರ ಸಹಕಾರದೊಂದಿಗೆ ಮಾಡಿದ್ದಾರೆ ಎಂದ ಅವರು ಕ್ಷೇತ್ರದ ಜನತೆ ನಮಗೆ ನಿರೀಕ್ಷೆಗೂ ಮೀರಿದ ಸಹಕಾರ ನೀಡಿದ್ದು, ಜನತೆಯ ಆಶಯಕ್ಕೆ ತಕ್ಕಂತೆ ನಾವು ಕೆಲಸ ಮಾಡುತ್ತೇವೆ. ಗ್ರಾಮೀಣ ಜನತೆಯ ಆಶೋತ್ತರಗಳನ್ನು ಈಡೇರಿಸುವ ನಿಟ್ಟಿನಲ್ಲಿ ನಾನು ಮತ್ತು ನಮ್ಮ ತಂದೆ ಅವಿರತವಾಗಿ ಶ್ರಮಿಸುತ್ತಿದ್ದೇವೆ. ಮುಂದೆಯೂ ಕ್ಷೇತ್ರದ ಜನತೆ ಈಗ ನೀಡುತ್ತಿರುವ ಸಹಕಾರ ಮುಂದುವರೆಸುವಂತೆ ಮನವಿ ಮಾಡಿದರು.

ನಾಳೆ (ಗುರುವಾರ) ಸಹ ಬನ್ನೂರು ಹೋಬಳಿ ವಿವಿಧ ಗ್ರಾಮಗಳಲ್ಲಿ 10 ಕೋಟಿ ರೂ. ವೆಚ್ಚದ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಲಾಗುತ್ತಿದೆ ಎಂದರು.

ಈ ವೇಳೆ ಸಂಸದರು ಸೋಸಲೆಯಲ್ಲಿ ಜಲಜೀವನ್ ಮಿಷನ್ ಯೋಜನೆಯಡಿ 3 ಕೋಟಿ ರೂ. ವೆಚ್ಚದ ಕಾಮಗಾರಿಗೆ ಚಾಲನೆ ನೀಡಿದರು. ಬೆನಕನಹಳ್ಳಿ, ಕೈಯ್ಯಂಬಳ್ಳಿ, ಎಂ.ಕೆಬ್ಬೇಹುಂಡಿ, ಕಾರ್ಗಳ್ಳಿ, ದೊಡ್ಡೇಬಾಗಿಲು, ಹೊರಳಹಳ್ಳಿ, ನರೀಪುರ, ಕೊಳತ್ತೂರು, ಚಿದರವಳ್ಳಿ, ಹಲವಾರ, ಕೋಣಗಳ್ಳಿ ಗ್ರಾಮಗಳಲ್ಲಿ ಎಸ್‌ಸಿಪಿ ಯೋಜನೆಯಡಿ ರಸ್ತೆ ಮತ್ತು ಚರಂಡಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ, ಹೊರಳ ಹಳ್ಳಿ ಗ್ರಾಮದ ಮೊರಾರ್ಜಿ ದೇಸಾಯಿ ಶಾಲೆಯಲ್ಲಿ ಸ್ಟೇಡಿಯಂ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿದರು.

> "ಶನಿವಾರ ಮೈಸೂರಿನಲ್ಲಿ ನಡೆಯುವ ಸರ್ಕಾರದ ಸಾಧನಾ ಸಮಾವೇಶದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 2 ಸಾವಿರ ಕೋಟಿ ರೂ. ವೆಚ್ಚದ ವಿವಿಧ ಕ್ಷೇತ್ರಗಳ ಕಾಮಗಾರಿಗೆ ಚಾಲನೆ ನೀಡಲಿದ್ದು, ಸಮಾವೇಶಕ್ಕೆ ತಾಲೂಕಿನಿಂದ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು, ಕಾರ್ಯಕರ್ತರು, ಮುಖಂಡರು ಆಗಮಿಸಿ ಯಶಸ್ವಿಗೊಳಿಸಿ. –ಸುನೀಲ್ ಬೋಸ್, ಸಂಸದ

ಮೈಮುಲ್ ಅಧ್ಯಕ್ಷ ಆರ್.ಚೆಲುವರಾಜು, ತಾಪಂ ಮಾಜಿ ಅಧ್ಯಕ್ಷ ದೊಡ್ಡಬಾಗಿಲು ಎಂ.ಮಲ್ಲಿಕಾರ್ಜುನಸ್ವಾಮಿ, ತಾಪಂ ಮಾಜಿ ಅಧ್ಯಕ್ಷ ಎಂ.ಮಲ್ಲಿಕಾರ್ಜುನಸ್ವಾಮಿ, ಕಾಂಗ್ರೆಸ್ ಯುವ ಮುಖಂಡ ಲಕ್ಷ್ಮಿನಾರಾಯಣ್, ತಾಪಂ ಸಾಮಾಜಿಕ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಕುಕ್ಕೂರು ಗಣೇಶ್, ರಾಮಲಿಂಗಯ್ಯ, ಉಮೇಶ್, ಬ್ಲಾಕ್ ಕಾಂಗ್ರೆಸ್ ಮೀನುಗಾರರ ಘಟಕದ ಅಧ್ಯಕ್ಷ ಕೊಳತ್ತೂರು ಕೆ.ಎನ್.ಕುಮಾರ್, ಚಿದರವಳ್ಳಿ ಚಂದ್ರು, ಗ್ರಾಪಂ ಅಧ್ಯಕ್ಷ ಐಸಾ ಸಿದ್ಧಿಕ್, ಮಾಜಿ ಅಧ್ಯಕ್ಷ ತೇಜು, ಸಂಸದರ ಆಪ್ತ ಕಾರ್ಯದರ್ಶಿ ಬಸವರಾಜು, ಪಾರು ಪತ್ತೆದಾರ್ ಎಂ.ಬಿ.ಸಾಗರ್, ಜೆ.ಅನುಪ್‌ಗೌಡ, ಜೈಶಂಕರ್, ಪಿಂಕ, ತಹಸೀಲ್ದಾರ್ ಸುರೇಶಾಚಾರ್, ಪಿಡಬ್ಲ್ಯೂಡಿ ಅಭಿಯಂತರ ಸತೀಶ್‌ಚಂದ್ರ, ಜೆಜೆಎಂ ಅಭಿಯಂತರ ಶಿವರಾಜ್ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳಿದ್ದರು.

ಮಹದೇವಮ್ಮ ನಿಧನ



ಸರಗೂರು, ಜು.16– ತಾಲೂಕಿನ ಶ್ರೀಚಿಕ್ಕದೇವಮ್ಮನವರ ಬೆಟ್ಟದ ಶಿವಾರ್ಚಕ ಚಿಕ್ಕದೇವಣ್ಣಉಪ್ಪಿ ಅವರ ತಾಯಿ ಮಹದೇವಮ್ಮ (65) ಬುಧವಾರ ನಿಧನರಾದರು. ಮೃತರು ಇಬ್ಬರು ಪುತ್ರಿಯರು, ಓರ್ವ ಪತ್ರ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸಂಜೆ ಕುಂದೂರು ಗ್ರಾಮದಲ್ಲಿರುವ ಮೃತರ ಜಮೀನಿನಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ

ಜಿ.ಶ್ರೀನಿವಾಸ್



ಹುಣಸೂರು, ಜು.16– ತಾಲೂಕಿನ ಚಿಕ್ಕ ಹುಣಸೂರು ಗ್ರಾಮದ ನಿವಾಸಿ, ಜೆಡಿಎಸ್ ಮುಖಂಡರೂ ಆದ ನಗರಸಭೆ ಮಾಜಿ ಅಧ್ಯಕ್ಷ ಜಿ.ಶ್ರೀನಿವಾಸ್(54) ಬುಧವಾರ ನಿಧನರಾದರು. ಮೃತರು ತಂದೆ, ಪತ್ನಿ, ಇಬ್ಬರು ಮಕ್ಕಳು, ಸಹೋದರ, ಸಹೋದರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗುರುವಾರ ಹಳೇ ಚಿಕ್ಕಹುಣಸೂರಿನಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಓದುಗರ ಬಳಗದಿಂದ ಡಾ. ಕೆ.ಬಿ.ಗಣಪತಿ ಅವರಿಗೆ ಶ್ರದ್ಧಾಂಜಲಿ



ಮೈಸೂರಿನ ದೇವರಾಜ ಅರಸ್ ರಸ್ತೆಯಲ್ಲಿ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಯ ಓದುಗರ ಬಳಗದ ವತಿಯಿಂದ ಪತ್ರಿಕೆಯ ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ ಅವರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು.

ಮೈಸೂರು, ಜು.16(ಎಂಟಿವೈ)– ಮೈಸೂರಿನ ದೇವರಾಜ ಅರಸು ರಸ್ತೆಯಲ್ಲಿ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಯ ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ. ಗಣಪತಿ ಅವರಿಗೆ ಪತ್ರಿಕೆಯ ಓದುಗರ ಬಳಗದ ವತಿಯಿಂದ ಶ್ರದ್ಧಾಂಜಲಿ ಅರ್ಪಿಸಿ, ಗೌರವ ಸಮರ್ಪಿಸಲಾಯಿತು.

ದೇವರಾಜ ಅರಸು ರಸ್ತೆ ಹಾಗೂ ನಾರಾಯಣಶಾಸ್ತ್ರಿ ರಸ್ತೆಯ ಜಂಕ್ಷನ್‌ನಲ್ಲಿ ದೇವರಾಜ ಮೊಹಲ್ಲಾ ಪ್ರಮುಖರು, ರಾಜಕೀಯ ಮುಖಂಡರು, ಪತ್ರಿಕೆಯ ಓದುಗರ ಬಳಗ ಹಾಗೂ ಪಿಜಿ ಫೌಂಡೇಷನ್ ವತಿಯಿಂದ ಆಯೋಜಿಸಿದ್ದ ಶ್ರದ್ಧಾಂಜಲಿ ಸಭೆಯಲ್ಲಿ ಕೆಬಿಜಿ ಅವರ ಭಾವಚಿತ್ರವನ್ನು ಹೂವಿನಿಂದ ಅಲಂಕರಿಸಿ, ಸಂಪ್ರದಾಯದಂತೆ ಪೂಜೆ ಮಾಡಿ, ಮೃತರ ಆತ್ಮಕ್ಕೆ ಶಾಂತಿ ಕೋರಲಾಯಿತು. ಬಳಿಕ ಕೆಬಿಜಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು.

ಈ ವೇಳೆ ಪಾಲಿಕೆ ಮಾಜಿ ಸದಸ್ಯ ಪ್ರಶಾಂತ್‌ಗೌಡ ಮಾತನಾಡಿ, ಸಾಂಸ್ಕೃತಿಕ ನಗರಿ ಮೈಸೂರಲ್ಲಿ ಡಾ.ಕೆ.ಬಿ.ಗಣಪತಿ ಅವರು 'ಮೈಸೂರು ಮಿತ್ರ', 'ಸ್ಟಾರ್ ಆಫ್ ಮೈಸೂರ್' ಪತ್ರಿಕೆ ಆರಂಭಿಸಿ ಎಲ್ಲರಿಗೂ ಚಿರಪರಿಚಿತರಾಗಿದ್ದರು. ವಿದ್ಯಮಾನಗಳನ್ನು, ಸಮಾಜದಲ್ಲಿ ನಡೆಯುತ್ತಿರುವ ಆಗು–ಹೋಗುಗಳನ್ನು ಪತ್ರಿಕೆ ಮೂಲಕ ಎಲ್ಲರ ಮನೆಗೆ ತಲುಪಿಸುತ್ತಿದ್ದರು. ಪ್ರತಿದಿನ ಬೆಳಗ್ಗೆ 'ಮೈಸೂರು ಮಿತ್ರ' ಪತ್ರಿಕೆ ಮೂಲಕ ಎಲ್ಲರ ಮಿತ್ರರಾಗಿದ್ದರೆ, ಸಂಜೆ 'ಸ್ಟಾರ್ ಆಫ್ ಮೈಸೂರ್' ಮೂಲಕ ಕತ್ತಲು ಸರಿಸುವ ನಕ್ಷತ್ರದಂತೆ ಕಂಗೊಳಿಸುತ್ತಿದ್ದರು. ಪತ್ರಿಕೆ ಸಂಸ್ಥಾಪಕರಾಗಿದ್ದರೂ, ಮೈಸೂರಿನ ಅಭಿವೃದ್ಧಿಗೆ ಹೆಚ್ಚಿನ ಕಾಳಜಿ ವಹಿಸಿ ವಿಶೇಷ ಅಂಕಣದಲ್ಲಿ ಜನ ಪ್ರತಿನಿಧಿಗಳನ್ನು ಎಚ್ಚರಿಸುವ ಕೆಲಸ ಮಾಡುತ್ತಿದ್ದರು. ಅವರ ಅಗಲಿಕೆ ತುಂಬಲಾರದ ನಷ್ಟವಾಗಿದೆ. ಮೃತರ ಆತ್ಮಕ್ಕೆ ಶಾಂತಿ ಕೋರಿ ಪ್ರಾರ್ಥಿಸುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ಪ್ರದೇಶ ಕುರುಬರ ಸಂಘದ ನಿಕಟಪೂರ್ವ ಅಧ್ಯಕ್ಷ ಬಿ.ಸುಬ್ರಹ್ಮಣ್ಯ, 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಯ ಪ್ರಸರಣ ವಿಭಾಗದ ವ್ಯವಸ್ಥಾಪಕ ಟಿ.ಎಸ್. ಗೋಪಿನಾಥ್, ಜಿಲ್ಲಾ ಒಕ್ಕಲಿಗರ ಸಂಘ ಕಾರ್ಯದರ್ಶಿ ಚೇತನ್, ಮೈಸೂರು ಜಿಲ್ಲಾ ಒಕ್ಕಲಿಗರ ಸಂಘದ ನಿರ್ದೇಶಕ ಮತ್ತು ಮೈಸೂರು ಜಿಲ್ಲಾ ಪತ್ರಿಕಾ ಪ್ರತಿನಿಧಿಗಳ ಸಂಘದ ಪ್ರಧಾನ ಕಾರ್ಯದರ್ಶಿ ಎ.ರವಿ, ಮುಡಾ ಮಾಜಿ ಸದಸ್ಯ ಎಂ.ಎನ್. ನವೀನ್ ಕುಮಾರ್, ಸ್ಥಳೀಯ ಮುಖಂಡರಾದ ಪ್ರವೀಣ್ ಜೈನ್, ರಾಮರಾಜ್, ರಾಮ್‌ಪ್ರಸಾದ್, ಎಂ.ಎಸ್.ಗುರುರಾಜ್ ಶೆಟ್ಟಿ, ಮಹೇಶ್, ಮಂಜುನಾಥ್, ಗುರುಪ್ರಸಾದ್, ಎಸ್.ಎನ್.ರಾಜೇಶ್, ವಿಕ್ರಂ ಅಯ್ಯಂಗಾರ್, ಪ್ರಶಾಂತ್, ಸಂತೋಷ, ನಿತಿನ್ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಆಂಧ್ರ ಪ್ರದೇಶಕ್ಕೆ ಯಾವ ಉದ್ಯಮಿಯೂ ಹೋಗಲ್ಲ

ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ವಿಶ್ವಾಸ



ಬೆಂಗಳೂರು, ಜು.16(ಕೆಎಂಶಿ)–ಆಂಧ್ರ ಪ್ರದೇಶದ ಸಚಿವರು ಕರೆದಾಕ್ಷಣ ಯಾವ ಉದ್ಯಮಿಯೂ ಕರ್ನಾಟಕದಿಂದ ಹೋಗಿ ಬಿಡುವುದಿಲ್ಲ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ಇಂದಿಲ್ಲಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಕೆಪಿಸಿಸಿ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದೇವನಹಳ್ಳಿಯಲ್ಲಿ ಡಿಫೆನ್ಸ್ ಮತ್ತು ಏರೋಸ್ಪೇಸ್ ಪಾರ್ಕ್ ಸ್ಥಾಪನೆಗೆ ಅಗತ್ಯವಿದ್ದ ಭೂಮಿಯನ್ನು ರೈತರ ಹಿತದೃಷ್ಟಿಯಿಂದ ಕೈಬಿಡಬೇಕಾಯಿತು. ಆದರೆ, ಉದ್ಯಮಿಗಳು ಕೇಳಿದ ಕಡೆ ಜಮೀನು ಕೊಡಲಾಗುವುದು ಎಂದರು.

ವೈಮಾಂತರಿಕ್ಷ ವಲಯದಲ್ಲಿ ಕರ್ನಾಟಕ ಶೇ.65ರಷ್ಟು ಪಾಲು ಹೊಂದಿದೆ, ಜಾಗತಿಕ ಮಟ್ಟದಲ್ಲಿ ರಾಜ್ಯ ಮೂರನೇ ಅತ್ಯುತ್ತಮ ಕಾರ್ಯಪರಿಸರವಾಗಿದೆ. ಉದ್ಯಮಗಳಿಗೆ ಭೂಮಿ ಕೊಟ್ಟ ಮಾತ್ರಕ್ಕೆ ಕೈಗಾರಿಕೆಗಳ ಸ್ಥಾಪನೆ ಸಾಧ್ಯವಿಲ್ಲ, ಕಾರ್ಯಪರಿಸರ ಸಹ ಮಹತ್ವದ ಪಾತ್ರ ವಹಿಸುತ್ತದೆ.

ಆಂಧ್ರ ಪ್ರದೇಶದ ಸಚಿವ ನಾರಾ ಲೋಕೇಶ್ ಟ್ವೀಟ್ ನಾನೂ ನೋಡಿದ್ದೇನೆ. ನಾನೂ ಉತ್ತರ ಕೊಟ್ಟಿದ್ದೇನೆ. ನನಗೂ ಸಾಮರ್ಥ್ಯವಿದೆ. ಕರ್ನಾಟಕವೂ ಸಮರ್ಥವಾಗಿದೆ. ಏರೋಸ್ಪೇಸ್ ಮಾತ್ರವಲ್ಲ, ಎಐ, ಡೀಪ್–ಟೆಕ್, ಐಟಿ ಸೇರಿದಂತೆ ಎಲ್ಲಾ ಉದ್ಯಮಗಳಿಗೂ ರಾಜ್ಯದ ಅನೇಕ ಕಡೆ ಭೂಮಿ ಇದೆ. ಒಬ್ಬ ಉದ್ಯಮಿಯೂ ರಾಜ್ಯದಿಂದ ಹೊರಹೋಗಲು ನಾನು ಬಿಡುವುದಿಲ್ಲ ಎಂದರು.

ಏರೋಸ್ಪೇಸ್ ಉದ್ಯಮಿಗಳಿಗೆ ಬರೀ ಭೂಮಿಯಲ್ಲ, ಜೊತೆಗೆ ನೀರು, ವಿದ್ಯುತ್ ಎಲ್ಲ ಕೊಡುತ್ತೇವೆ. ರಾಜ್ಯದಲ್ಲಿ ಕೈಗಾರಿಕಾ ಪ್ರದೇಶಗಳಿಗೆ ನಮ್ಮ ಪಾಲಿನ ನೀರು ಬಳಸಿಕೊಳ್ಳಲು 3,600 ಕೋಟಿ ರೂ. ವೆಚ್ಚದಲ್ಲಿ ಸಮಗ್ರ ಯೋಜನೆ ರೂಪಿಸಲಾಗಿದೆ.

ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಉದ್ಯಮಿಗಳ ಪರ ಮಾತನಾಡುತ್ತಿದ್ದಾರೆ. ದೇವನಹಳ್ಳಿ ರೈತರ ಜಮೀನು ಸ್ವಾಧೀನಕ್ಕೆ ಮುಂದಾಗಿದ್ದರೆ, ರೈತರ ಪರ ಇರುತ್ತಿದ್ದರು. ವಿರೋಧ ಪಕ್ಷಗಳು ಏನಾದರೂ ಮಾಡಿಕೊಳ್ಳಲಿ. ನನಗೆ ರಾಜ್ಯದ ಹಿತಾಸಕ್ತಿ ಮುಖ್ಯ.

ಕೈಗಾರಿಕಾ ಇಲಾಖೆ ಪ್ರಗತಿ ಮತ್ತು ದೇವನಹಳ್ಳಿ ವಿದ್ಯಮಾನ ಕುರಿತು ಪಕ್ಷದ ಪ್ರಧಾನಕಾರ್ಯದರ್ಶಿ ಹಾಗೂ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರಿಗೆ ಮಾಹಿತಿ ನೀಡಿದ್ದು, ತೃಪ್ತಿ ವ್ಯಕ್ತಪಡಿಸಿದ್ದಾರೆ ಎಂದರು.

ಮೈಸೂರು ಮೃಗಾಲಯದ ಬಳಿ ಕಟ್ಟಡ ನಿರ್ಮಿಸಿ ಪಾಳು ಬಿಟ್ಟಿರುವ ಅಧಿಕಾರಿಗಳು!

ಸರ್ಕಾರಿ ಕಟ್ಟಡ ಖಾಲಿ ಇದ್ದರೂ ಖಾಸಗಿ ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸರ್ಕಾರಿ ಕಚೇರಿಗಳು; ಬಿಜೆಪಿ ಮುಖಂಡ ಗೋಕುಲ್ ಗೋವರ್ಧನ್ ಆಕ್ರೋಶ



ಗೋಕುಲ್ ಗೋವರ್ಧನ್



ಪಾಳು ಬೀಳುತ್ತಿರುವ ಕಟ್ಟಡ.

ಮೈಸೂರು, ಜು.16(ಬಿಎಲ್‌ಯು)– ಮೈಸೂರು ಅಭಿವೃದ್ಧಿ ಪ್ರಾಧಿಕಾರದವರು ನಜರ್‌ಬಾದ್‌ನ ಮೃಗಾಲಯದ ಬಳಿ ಎರಡು ಅಂತಸ್ತಿನ ನೂತನ ಕಟ್ಟಡ ನಿರ್ಮಿಸಿ ಪಾಳು ಬಿಟ್ಟಿರುವ ಬಗ್ಗೆ ಬಿಜೆಪಿ ಮುಖಂಡರೂ ಆದ ಟೀಂ ಮೈಸೂರು ಗೋಕುಲ್ ಗೋವರ್ಧನ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಕಟ್ಟಡ ನಿರ್ಮಾಣ ಮಾಡಿ ಮೂರ್ನಾಲ್ಕು ವರ್ಷಗಳೇ ಕಳೆದರೂ ಈ ತನಕ ಮೈಸೂರು ಅಭಿವೃದ್ಧಿ ಪ್ರಾಧಿಕಾರದವರು ಇದನ್ನು ಸದ್ಬಳಕೆ ಮಾಡಿಕೊಂಡಿಲ್ಲ. ಸಾರ್ವಜನಿಕರ ತೆರಿಗೆ ಹಣವನ್ನು ಯಾವ ರೀತಿ ಪೋಲು ಮಾಡಲಾಗುತ್ತಿದೆ ಎಂಬುದಕ್ಕೆ ಇದು ಸ್ಪಷ್ಟ ನಿದರ್ಶನ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಸ್ಥಳದಲ್ಲಿ ಮೊದಲು ಸರ್ಕಾರಿ ಶಾಲೆ ಇತ್ತು. ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇದ್ದ ಕಾರಣ ಶಾಲೆ ಮುಚ್ಚಿ ಅಲ್ಲಿದ್ದ ವಿದ್ಯಾರ್ಥಿಗಳನ್ನು ಸನಿಹದ ಶಾಲೆಗೆ ಸ್ಥಳಾಂತರಿಸಲಾಗಿತ್ತು. ತರುವಾಯ ಸರ್ಕಾರಿ ಶಾಲಾ ಕಟ್ಟಡ ನೆಲಸಮಗೊಳಿಸಿ ಅಲ್ಲಿ ಎರಡು ಅಂತಸ್ತಿನ ಹೊಸ ಕಟ್ಟಡ ನಿರ್ಮಾಣ ಮಾಡಲಾಗಿದೆ ಎಂದು ಹೇಳಿದ್ದಾರೆ.

ಹೊಸ ಕಟ್ಟಡ ನಿರ್ಮಿಸಿ ಮೂರ್ನಾಲ್ಕು ವರ್ಷಗಳು ಕಳೆದರೂ ಇನ್ನು ಕೂಡ ಇದನ್ನು ಸದ್ಬಳಕೆ ಮಾಡಿಕೊಳ್ಳದೆ ಪಾಳು ಬಿಟ್ಟಿದ್ದಾರೆ. ಬಹಳಷ್ಟು ಸರ್ಕಾರಿ ಹಾಗೂ ಅರೆ ಸರ್ಕಾರಿ ಕಚೇರಿಗಳು ಖಾಸಗಿ ಕಟ್ಟಡಗಳಲ್ಲಿ ದುಬಾರಿ ಬಾಡಿಗೆಗೆ ಕಾರ್ಯ ನಿರ್ವಹಿಸುತ್ತಿವೆ. ಇದರಿಂದ ಸರ್ಕಾರಕ್ಕೆ ಆರ್ಥಿಕ ಹೊರೆಯಾಗಿದೆ.

ಖಾಸಗಿ ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸರ್ಕಾರಿ ಕಚೇರಿಗಳನ್ನು ಇಲ್ಲಿಗೆ ಸ್ಥಳಾಂತರ ಮಾಡಬಹುದು. ಇದರಿಂದ ಮೈಸೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಆದಾಯವೂ ಬರುತ್ತದೆ. ಆದರೆ ಅಧಿಕಾರಿಗಳು ಈ ಬಗ್ಗೆ ನಿರ್ಲಕ್ಷ್ಯ ತೋರಿದ್ದಾರೆ ಎಂದು ಕಿಡಿಕಾರಿದ್ದಾರೆ.

ಇಂದು ಕೆಲವೆಡೆ ವಿದ್ಯುತ್ ವ್ಯತ್ಯಯ



ಮೈಸೂರು, ಜು.16– ಜುಲೈ 17 ರಂದು ಬೆಳಿಗ್ಗೆ 10 ರಿಂದ ಸಂಜೆ 5 ಘಂಟೆಯವರೆಗೆ ಉದಯಗಿರಿ ಫೀಡರ್‌ನ ವ್ಯಾಪ್ತಿಯಲ್ಲಿ ಭೂಗತ ಕೇಬಲ್ ಅಳವಡಿಸುವ ಕಾಮಗಾರಿ ನಿಮಿತ್ತ ಮಹದೇವಪುರ ರಸ್ತೆ, ಇಂದಿರಾಗಾಂಧಿ ರಸ್ತೆ, ಎಂ.ಜಿ. ರಸ್ತೆ, ಟಿಪ್ಪು ವೃತ್ತ, ನೆಹರು ಪಾರ್ಕ್, ಕೆ.ಇ.ಬಿ ಕ್ವಾರ್ಟರ್ಸ್ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

'ಎನ್‌ಸಿಸಿ ಅಚೀವರ್ಸ್' ಪ್ರಶಸ್ತಿ ಪ್ರದಾನ



ನವದೆಹಲಿಯಲ್ಲಿ ಎನ್‌ಸಿಸಿ ಅಲ್ಯುಮಿನಿ ಕ್ಲಬ್ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮೈಸೂರಿನ ಹಿರಿಯ ಪತ್ರಿಕಾ ಛಾಯಾಗ್ರಾಹಕ ಅನುರಾಗ್ ಬಸವರಾಜ್ ಅವರಿಗೆ 'ಎನ್‌ಸಿಸಿ ಅಚೀವರ್ಸ್' ಪ್ರಶಸ್ತಿಯನ್ನು ಎನ್‌ಸಿಸಿ ಡಿಜಿ ಲೆಫ್ಟಿನೆಂಟ್ ಜನರಲ್ ಗುರ್ಬಿರ್ಪಾಲ್ ಸಿಂಗ್ ಪ್ರದಾನ ಮಾಡಿದರು. ಚಿತ್ರದಲ್ಲಿ ಎನ್‌ಸಿಸಿ ಅಲ್ಯುಮಿನಿ ಕ್ಲಬ್ ಅಧ್ಯಕ್ಷ ಗಿರೀಶ್ ನಿಶಾನ್, ಆಲ್ ಇಂಡಿಯಾ ರೇಡಿಯೋದ ಡಿಜಿ ಡಾ. ಪ್ರಗ್ಯ ಪಾಲಿವಾಲ್ ಗೌರ್ ಅವರನ್ನು ಕಾಣಬಹುದು.

ಪ್ರಧಾನಿ ಮೋದಿ ವಾರಕ್ಕೆ 100 ಗಂಟೆ ಕೆಲಸ ಮಾಡುವ ಏಕೈಕ ವ್ಯಕ್ತಿ

ಇನ್‌ಫೋಸಿಸ್ ನಾರಾಯಣಮೂರ್ತಿ ಮಾತು ಉಲ್ಲೇಖಿಸಿ ಎಕ್ಸ್‌ನಲ್ಲಿ ತೇಜಸ್ವಿ ಸೂರ್ಯ ಪೋಸ್ಟ್



ತೇಜಸ್ವಿ ಸೂರ್ಯ

ಬೆಂಗಳೂರು, ಜು.16– ಇನ್ಫೋಸಿಸ್ ಸಹ–ಸಂಸ್ಥಾಪಕ ನಾರಾಯಣ ಮೂರ್ತಿ ಅವರು ಈ ಹಿಂದೆ ವಾರಕ್ಕೆ 70 ಗಂಟೆ ಕೆಲಸ ಮಾಡಬೇಕು ಎಂದು ಹೇಳಿದ್ದರು. ಅವರ ಈ ಹೇಳಿಕೆ ಭಾರಿ ಚರ್ಚೆಗೆ ಕಾರಣವಾಗಿತ್ತು. ಈಗ ಅವರ ಮತ್ತೊಂದು ಹೇಳಿಕೆ ವೈರಲ್ ಆಗಿದೆ.

ಬಿಜೆಪಿ ಸಂಸದ ತೇಜಸ್ವಿ ಸೂರ್ಯ ಅವರು ವಿಮಾನದಲ್ಲಿ ಪ್ರಯಾಣಿಸುತ್ತಿದ್ದ ವೇಳೆ ಆಕಸ್ಮಿಕವಾಗಿ ನಾರಾಯಣ ಮೂರ್ತಿ ಅವರನ್ನು ಭೇಟಿ ಮಾಡಿದ್ದು, ಈ ವೇಳೆ ಅವರೊಂದಿಗೆ ಚರ್ಚಿಸಿದ ವಿಷಯಗಳನ್ನು ಎಕ್ಸ್ ನಲ್ಲಿ ಹಂಚಿಕೊಂಡಿದ್ದಾರೆ.

ನಾರಾಯಣ ಮೂರ್ತಿ ಅವರೊಂದಿಗಿನ ಸಂವಾದವನ್ನು ಸ್ಫೂರ್ತಿದಾಯಕ ಸಂಭಾಷಣೆ ಮತ್ತು ಕೃತಕ ಬುದ್ಧಿಮತ್ತೆ ಹಾಗೂ ಉತ್ಪಾದನೆಯಿಂದ ಹಿಡಿದು ಭಾರತದ ನಗರಗಳ ಸ್ಥಿತಿ, ಯುವ ಕೌಶಲ್ಯ ವರ್ಧನೆ, ನೀತಿಶಾಸ್ತ್ರ ಮತ್ತು ಭಾರತದ ಭವಿಷ್ಯ ಮತ್ತು ನಾಯಕತ್ವದ ಕುರಿತು ಎರಡು ಗಂಟೆಗಳ ಮಾಸ್ಟರ್‌ಕ್ಲಾಸ್ ಎಂದು ಬಣ್ಣಿಸಿದ್ದಾರೆ. ಇಂದು ಮುಂಬೈನಿಂದ ಬೆಂಗಳೂರಿಗೆ ಹಿಂತಿರುಗುವಾಗ ದಂತಕಥೆಯಾಗಿರುವ ಎನ್‌ಆರ್‌ಎನ್ ಜೊತೆ ಸ್ಫೂರ್ತಿದಾಯಕ ಸಂಭಾಷಣೆ ನಡೆಸಿದೆ ಎಂದು ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ವಿಮಾನದಲ್ಲಿ ನಾರಾಯಣ ಮೂರ್ತಿ ಅವರೊಂದಿಗೆ ಸಂಭಾಷಣೆ ನಡೆಸುತ್ತಿರುವ ಫೋಟೋವನ್ನು ಹಂಚಿಕೊಂಡಿದ್ದಾರೆ.

ಎನ್‌ಆರ್‌ಎನ್ ಭಾರತದ ತಂತ್ರಜ್ಞಾನ ಭೂ ದೃಶ್ಯವನ್ನು ಪರಿವರ್ತಿಸಿದ ಮತ್ತು ಇನ್ಫೋಸಿಸ್ ಮೂಲಕ ಲಕ್ಷಾಂತರ ಮಧ್ಯಮ ವರ್ಗದ ಕುಟುಂಬಗಳಿಗೆ ಕೆಲಸವನ್ನು ಸೃಷ್ಟಿಸಿದರು ಎಂದು ಬಿಜೆಪಿ ಸಂಸದ ಹೇಳಿದ್ದಾರೆ.

ನಮ್ಮ ಸಂಭಾಷಣೆಯ ಕೊನೆಯಲ್ಲಿ ನಾನು ಅವರ ವಾರಕ್ಕೆ 70 ಗಂಟೆಗಳ ಗುರಿಯನ್ನು ತಲುಪಲು ಶ್ರಮಿಸುತ್ತೇನೆ ಎಂದು ಹಾಸ್ಯಮಯವಾಗಿ ಹೇಳಿದೆ ಎಂದು ತೇಜಸ್ವಿ ಸೂರ್ಯ ಬರೆದಿದ್ದಾರೆ. ಅದಕ್ಕೆ ಅವರು ನಕ್ಕರು ಮತ್ತು 'ನನಗೆ ತಿಳಿದಿರುವಂತೆ ವಾರಕ್ಕೆ 100 ಗಂಟೆ ಕೆಲಸ ಮಾಡುವ ಏಕೈಕ ವ್ಯಕ್ತಿ ಪ್ರಧಾನಿ ಮೋದಿ ಮಾತ್ರ, ಎಂದು ನಾರಾಯಣ ಮೂರ್ತಿ ಹೇಳಿದರು ಎಂದು ಬಿಜೆಪಿ ಸಂಸದ ಬರೆದುಕೊಂಡಿದ್ದಾರೆ.

ನಾಳೆ ರಾಜ್ಯಮಟ್ಟದ ವಿಚಾರ ಸಂಕಿರಣ

ಮೈಸೂರು,ಜು.16– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಡಾ. ಬಾಬು ಜಗಜೀವನರಾಮ್ ಅಧ್ಯಯನ, ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ ವತಿಯಿಂದ ಭಾರತದ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಪ್ರಗತಿಗೆ ಡಾ. ಬಾಬು ಜಗಜೀವನ ರಾಮ್ ಅವರ ಕೊಡುಗೆಗಳು ವಿಷಯದ ಕುರಿತು ಒಂದು ದಿನದ ರಾಜ್ಯ ಮಟ್ಟದ ವಿಚಾರ ಸಂಕಿರಣವನ್ನು ಜುಲೈ 18 ರಂದು ಬೆಳಗ್ಗೆ 11 ಗಂಟೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ಆಯೋಜಿಸಲಾಗಿದೆ. ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ. ಮಹದೇವಪ್ಪ ಕಾರ್ಯಕ್ರಮವನ್ನು ಉದ್ಘಾಟನೆ ಮಾಡುವರು. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಕುಲಪತಿ ಪ್ರೊ. ಶರಣಪ್ಪ ವಿ. ಹಲಸ ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳು ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಸಚಿವ ಕೆ.ಹೆಚ್. ಮುನಿಯಪ್ಪ, ಅಬಕಾರಿ ಸಚಿವ ಆರ್.ಬಿ. ತಿಮ್ಮಾಪುರ, ಶಾಸಕರಾದ ಕೆ. ಹರೀಶ್‌ಗೌಡ, ಡಾ. ರೂಪಕಲಾ ಎಂ. ಶಶಿಧರ್, ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಮಹಾರಾಜ ಕಾಲೇಜಿನ ಪ್ರಾಧ್ಯಾಪಕ ಪ್ರೊ. ಆರ್. ತಿಮ್ಮರಾಯಪ್ಪ ಪ್ರಧಾನ ಭಾಷಣಕಾರರಾಗಿ ಭಾಗವಹಿಸುವರು. ಕರ್ನಾಟಕ ರಾಜ್ಯ ಮುಖ್ಯ ವಿಶ್ವವಿದ್ಯಾನಿಲಯದ ಕುಲಸಚಿವ ಪ್ರೊ. ಎಸ್.ಕೆ. ನವೀನ್ ಕುಮಾರ್ ಉಪಸ್ಥಿತರಿರುವರು.

ಸಿನಿಮಾಗಿಂತ ಕಿರುಚಿತ್ರ ನಿರ್ಮಾಣ ಕ್ಲಿಷ್ಟಕರ

'ಆಪದ್ಬಾಂಧವ' ಕಿರುಚಿತ್ರದ ಪ್ರೀಮಿಯರ್ ಶೋನಲ್ಲಿ ರಾಜಶೇಖರ ಕದಂಬ ಅಭಿಮತ



ಆದಿತ್ಯ ಲೋಕೇಶ್ ಕ್ರಿಯೇಷನ್ಸ್‌ನ 'ಆಪದ್ಬಾಂಧವ' ಕಿರುಚಿತ್ರದ ಪ್ರೀಮಿಯರ್ ಶೋಗೆ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಚಾಲನೆ ನೀಡಿದರು. ಈ ವೇಳೆ ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ. ಚಂದ್ರಶೇಖರ್, ಮಾಜಿ ಮೇಯರ್ ಎಚ್.ಎನ್. ಶ್ರೀಕಂಠಯ್ಯ, ರಂಗಕರ್ಮಿ ರಾಜಶೇಖರ ಕದಂಬ, ವಿದ್ವಾನ್ ಡಾ.ಎಚ್.ವಿ. ನಾಗರಾಜರಾವ್, ಡಾ.ಕೆ. ಲೀಲಾ ಪ್ರಕಾಶ್ ಉಪಸ್ಥಿತರಿದ್ದರು.

ಮೈಸೂರು, ಜು. 16– ಸಿನಿಮಾಗಿಂತ ಕಿರುಚಿತ್ರ ನಿರ್ಮಾಣ ಕ್ಲಿಷ್ಟಕರ ಎಂದು ರಂಗಕರ್ಮಿ ರಾಜಶೇಖರ ಕದಂಬ ಅಭಿಪ್ರಾಯಪಟ್ಟರು.

ನಗರದ ಕೃಷ್ಣಮೂರ್ತಿಪುರಂನ ನಮನ ಕಲಾಮಂಟಪದಲ್ಲಿ ಬುಧವಾರ ಆದಿತ್ಯ ಲೋಕೇಶ್ ಕ್ರಿಯೇಷನ್ಸ್ 'ಆಪತ್ಬಾಂಧವ' ಕಿರುಚಿತ್ರ ಪ್ರೀಮಿಯರ್ ಶೋ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸಿನಿಮಾ ಆದರೆ 70–80 ದೃಶ್ಯಗಳಿರುತ್ತವೆ. ಎರಡೂವರೆ ಗಂಟೆ ಕಥೆ ಹೇಳಬಹುದು. ಆದರೆ ಕಿರುಚಿತ್ರಗಳಲ್ಲಿ ಸೀಮಿತ ಅವಧಿಯಲ್ಲಿ ಕಥೆಗೆ ಸ್ವಲ್ಪವೂ ಚ್ಯುತಿ ಬಾರದ ಹಾಗೆ ಚಿತ್ರ ನಿರ್ಮಿಸಬೇಕಾಗುತ್ತದೆ. ಇದು ಸವಾಲಿನ ಕೆಲಸ ಎಂದರು.

ಆದ್ದರಿಂದ ಕಿರುಚಿತ್ರ ತಯಾರಕರು ಸಾಮಾನ್ಯವಾಗಿ ಸಣ್ಣ ಕಥೆಗಳನ್ನು ಆಯ್ಕೆ ಮಾಡಿಕೊಂಡು ಸಮಾಜಕ್ಕೆ ಸಂದೇಶ ನೀಡುವ ಚಿತ್ರಗಳನ್ನು ನಿರ್ಮಿಸುತ್ತಾರೆ. ಆದಿತ್ಯ ಲೋಕೇಶ್ 'ತಾಯಿ ಗುರಿ' ಇಂತಹ ಚಿತ್ರಗಳಲ್ಲಿ ಒಂದು ಎಂದರು.

ವಿದ್ವಾನ್ ಡಾ.ಎಚ್.ವಿ. ನಾಗರಾಜರಾವ್ ಮಾತನಾಡಿ, ಈ ರೀತಿಯ ಚಿತ್ರಗಳಿಂದ ಕಲಾವಿದರ ಪ್ರತಿಭೆ ಗೊತ್ತಾಗುತ್ತದೆ. ಕಲೆ ಪರಿಚಯವಾಗುತ್ತದೆ. ಆಸಕ್ತರು ಈ ರೀತಿಯ ಅವಕಾಶಗಳನ್ನು ಸದುಪಯೋಗ ಮಾಡಿಕೊಳ್ಳಬೇಕು ಎಂದರು. ಸಾಹಿತಿ ಡಾ.ಕೆ. ಲೀಲಾಪ್ರಕಾಶ್ ಮಾತನಾಡಿ, ಕಷ್ಟ ಪಟ್ಟರೆ ಉತ್ತಮ ಅವಕಾಶಗಳು ಸಿಗುತ್ತವೆ. ಜನರಿಗೆ ಧಾರಾವಾಹಿಗಳನ್ನು ನೋಡಿ ಬೇಜಾರಾಗಿರುತ್ತದೆ. ಅವರನ್ನು ಯುಟ್ಯೂಬ್‌ನತ್ತ ಸೆಳೆಯಲು ಉತ್ತಮ ಕಿರುಚಿತ್ರಗಳನ್ನು ನಿರ್ಮಿಸಬೇಕು ಎಂದು ಸಲಹೆ ಮಾಡಿದರು. ಮಾಜಿ ಮೇಯರ್ ಎಚ್.ಎನ್. ಶ್ರೀಕಂಠಯ್ಯ ಮಾತನಾಡಿ, ಡಿ. ಬನುಮಯ್ಯ ಶಿಕ್ಷಣ ಸಂಸ್ಥೆಯಲ್ಲಿ ಮೂರು ವರ್ಷ ನನ್ನ ವಿದ್ಯಾರ್ಥಿಯಾಗಿದ್ದ ಆದಿತ್ಯ ಲೋಕೇಶ್ ನಂತರ ಅದೇ ಸಂಸ್ಥೆಯಲ್ಲಿ ಗುಮಾಸ್ತರಾಗಿದ್ದರು. ನಿವೃತ್ತಿಯ ನಂತರ ಯೂಟ್ಯೂಬ್ ಚಾನಲ್ ಮೂಲಕ ಗಣ್ಯರನ್ನು ಸಂದರ್ಶಿಸಿ, ಉತ್ತಮ ಕಿರುಚಿತ್ರ ಗಳನ್ನು ನಿರ್ಮಿಸಿ, ಸಮಾಜಕ್ಕೆ ಉತ್ತಮ ಸಂದೇಶ ಕೊಡುತ್ತಿದ್ದಾರೆ ಎಂದು ಶ್ಲಾಘಿಸಿದರು.

ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ. ಚಂದ್ರಶೇಖರ್ ಪ್ರಾಸ್ತಾವಿಕವಾಗಿ ಮಾತನಾಡಿದರು.

ಕಿರುಚಿತ್ರದ ಪ್ರೀಮಿಯರ್ ಶೋಗೆ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಚಾಲನೆ ನೀಡಿದರು. ಎನ್.ಬಿ. ಕಾವೇರಪ್ಪ, ಸೋಮಶೇಖರ್, ಮಂಜುಳಾ ರಾಜ್, ಯೋಗಪ್ರಕಾಶ್, ಮುಕುಂದನ್, ಶಿವಪ್ರಕಾಶ್, ಎಸ್. ನಾಗರಾಜ್, ಡಾ. ಪ್ರಕಾಶ್, ಡಾ. ಶ್ಯಾಮಲಾ, ಮಿಮಿಕ್ರಿ ಕೃಷ್ಣಮೂರ್ತಿ, ಹೆಜ್ಜೆಗೆಜ್ಜೆ ಉದಯ್ ಕುಮಾರ್, ಕೇಶವಪ್ರಕಾಶ್, ಕೃಷ್ಣಮೂರ್ತಿ ಮೊದಲಾದವರು ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ದೇಸಿಂಗು ರಾಜಾ2 (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಮಾದೇವ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಮಾಲಿಕ್ (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಐರಾವತ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಮಾದೇವ (ಕ)	4 ಪ್ರದರ್ಶನಗಳು
ರಾಜಕಮಲ್	
3 ಬಿಹೆಚ್‌ಕೆ (ತ)	4 ಪ್ರದರ್ಶನಗಳು
ಸಂಗಂ	
ಪೆನ್‌ಡ್ರೈವ್ (ಕ)	4 ಪ್ರದರ್ಶನಗಳು
ಲಿಡೋ	
ಐರಾವತ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ವಾಮನ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	28 ಇಯರ್ಸ್ ಲೇಟರ್ (ಇಂ): ಬೆ.10.40ಕ್ಕೆ, ರಾ.7.55ಕ್ಕೆ, ಡಿಎನ್‌ಎ (ತ): ಮ.1.10ಕ್ಕೆ, ಕುಬೇರಾ (ತೆ): ಸಂ.4.05ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ರಾ.10.25ಕ್ಕೆ
ಸ್ಕ್ರೀನ್ 2	ಇಲಿಯೋ (3ಡಿ)(ಇಂ): ಬೆ.11.30ಕ್ಕೆ, ಮ.1.45ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ಸಂ.4ಕ್ಕೆ, ರಾ.7.10ಕ್ಕೆ, ಯುನೈಟೆಡ್ ಕಿಂಗ್‌ಡಮ್ ಆಫ್ ಕೇರಳ (ಮ): ರಾ.10.20ಕ್ಕೆ.
ಸ್ಕ್ರೀನ್ 3	ಮಾದೇವ (ಕ): ಬೆ.10.30ಕ್ಕೆ, ರಾ.7.10ಕ್ಕೆ, ಮಾತೊಂದ ಹೇಳುವೆ (ಕ): ಮ.1.15ಕ್ಕೆ, 28 ಇಯರ್ಸ್ ಲೇಟರ್ (ಇಂ): ಸಂ.4.30ಕ್ಕೆ, ವ್ಯಾಸನಸಮೇತಂ ಬಂಧುಮಿತ್ರ (ಮ): ರಾ.10ಕ್ಕೆ.
ಸ್ಕ್ರೀನ್ 4	ಕುಬೇರಾ (ತೆ): ಬೆ.10.30ಕ್ಕೆ, ಸಂ.6.25ಕ್ಕೆ, ರಾ.10.15ಕ್ಕೆ, ಕುಬೇರಾ (ತ): ಮ.2.20ಕ್ಕೆ.

ಐನಾಕ್ಸ್ ಮೂವೀಸ್

ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಎಡಗೈಯೇ ಅಪಘಾತಕ್ಕೆ ಕಾರಣ (ಕ): ಮ.1.45ಕ್ಕೆ, ಸಂ.4.25ಕ್ಕೆ, ಸಂ.6.50ಕ್ಕೆ, ಮಾದೇವ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಮಾದೇವ (ಕ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.30ಕ್ಕೆ.
ಸ್ಕ್ರೀನ್ 3	ಯುದ್ಧಕಾಂಡ 2 (ಕ): ಸಂ.6.50ಕ್ಕೆ.
ಸ್ಕ್ರೀನ್ 4	ಹೌಸ್‌ಫುಲ್ 5ಎ (ಹಿಂ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.44ಕ್ಕೆ.

ಪಿವಿಆರ್ ಸಿನಿಮಾಸ್

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಏಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆ ಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಶ್ರೀವಿವೇಕ ಪಿಯು ಕಾಲೇಜಲ್ಲಿ ವಿದ್ಯಾರ್ಥಿ ಪರಿಷತ್ ಪದಾಧಿಕಾರಿಗಳ ಪ್ರಮಾಣವಚನ ಸ್ವೀಕಾರ



ಕಾರ್ಯಕ್ರಮದಲ್ಲಿ ಮೈಸೂರು ನಗರ ಸಹಾಯಕ ಪೊಲೀಸ್ ಆಯುಕ್ತ ಸಂದೇಶ್ ಕುಮಾರ್ ಮಾತನಾಡಿದರು.

ಮೈಸೂರು, ಜು. 16– ಮೈಸೂರಿನ ಶ್ರೀ ವಿವೇಕ ವಿದ್ಯಾಲಯ ಪದವಿಪೂರ್ವ ಕಾಲೇಜು ಹಾಗೂ ವಿವೇಕ ಎಕ್ಸೆಲ್ ಅಕಾಡೆಮಿ ಸಂಯುಕ್ತವಾಗಿ ವಿದ್ಯಾರ್ಥಿ ಪರಿಷತ್ ಚುನಾವಣೆಯ ಪ್ರಮಾಣವಚನ ಸ್ವೀಕಾರ ಸಮಾರಂಭ ಆಯೋಜಿಸಲಾಗಿತ್ತು.

ಈ ವೇಳೆ ಮೈಸೂರು ನಗರ ಸಹಾಯಕ ಪೊಲೀಸ್ ಆಯುಕ್ತ ಸಂದೇಶ್ ಕುಮಾರ್ ಮಾತನಾಡಿ, ವಿದ್ಯಾರ್ಥಿಗಳ ಹಿತಾಸಕ್ತಿಗಳ ಚಿಂತನೆ ನಡೆಸಿದರು. ಪರಿಶುದ್ಧ ಪರಿಪೂರ್ಣ ಜೀವನಕ್ಕೆ ವಿದ್ಯಾರ್ಥಿಗಳು ಗಮನಿಸಲೇಬೇಕಾದ 9 ವಿಚಾರಗಳ ಕುರಿತಾಗಿ ತಿಳಿ ಹೇಳಿದರು.

ಗುರಿ, ಸಮಯ ಪ್ರಜ್ಞೆ, ನಿಯಮ ಪಾಲನೆ, ಆಹಾರ ಮತ್ತು ಆರೋಗ್ಯ, ವ್ಯಾಯಾಮ, ಮಾದಕ ವಸ್ತುಗಳ ಎಚ್ಚರಿಕೆ, ಸಾಮಾಜಿಕ ಕಳಕಳಿ, ಸೈಬರ್ ಕ್ರೈಂ ಇವುಗಳ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸುವಂತೆ ವಿದ್ಯಾರ್ಥಿಗಳ ಮನಮುಟ್ಟುವಂತೆ ಅತ್ಯಮೂಲ್ಯ ಸಂದೇಶವನ್ನು ನೀಡಿದರು.


ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಅಧ್ಯಕ್ಷ ಪುಟ್ಟಸಿದ್ದಶೆಟ್ಟಿ, ವಿದ್ಯಾರ್ಥಿಗಳಿಗೆ ಪ್ರಜಾಪ್ರಭುತ್ವದ ಪರಿಕಲ್ಪನೆಯನ್ನು ತಿಳಿ ಹೇಳಿದರು. ಕಾರ್ಯಕ್ರಮದಲ್ಲಿ ನಿರ್ದೇಶಕ ನಾಗೇಶ್ ಎಂ ಎಸ್, ಆಡಳಿತ ಅಧಿಕಾರಿ ಶ್ರೀಮತಿ ಭವಾನಿ ನಾಗೇಶ್, ಪ್ರಾಂಶು ಪಾಲರಾದ ಶ್ರೀಮತಿ ಶಿಲ್ಪ ಕೆಎನ್ ಹಾಗೂ ಸಹ ಉಪನ್ಯಾಸಕರು ಉಪಸ್ಥಿತರಿದ್ದರು.

ಕುಂಚ ಕಾವ್ಯ ಸಾಂಸ್ಕೃತಿಕ ಉದ್ಘಾಟನಾ ಕಾರ್ಯಕ್ರಮ

ಮೈಸೂರು, ಜು.16– ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು (ಕಾವಾ), 2025–26ನೇ ಶೈಕ್ಷಣಿಕ ಸಾಲಿನ ಪಠ್ಯೇತರ ಚಟುವಟಿಕೆ ಆರಂಭಕ್ಕೆ ಜುಲೈ 19 ರಂದು ಬೆಳಿಗ್ಗೆ 11.00 ಗಂಟೆಗೆ ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು (ಕಾವಾ), ಆವರಣದಲ್ಲಿ ಕುಂಚ ಕಾವ್ಯ ಸಂಸ್ಕೃತಿಕ ಸಮಿತಿಯ ಉದ್ಘಾಟನಾ ಸಮಾರಂಭ ಏರ್ಪಡಿಸಲಾಗಿದೆ. ಬೆಂಗಳೂರಿನ ಖ್ಯಾತ ದೃಶ್ಯ ಕಲಾವಿದರು ಹಾಗೂ ರಂಗಭೂಮಿ ನಿರ್ದೇಶಕ ಚಲನಚಿತ್ರ ಪ್ರಕಾಶ್ ಬೆಳವಾಡಿ ಕಾರ್ಯಕ್ರಮ ಉದ್ಘಾಟಿಸುವರು. ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜಿನ ಡೀನ್, ಎ. ದೇವರಾಜು ಅಧ್ಯಕ್ಷತೆ ವಹಿಸುವರು. ತುಮಕೂರಿನ ದೃಶ್ಯ ಕಲಾವಿದರಾದ ಉಮೇಶ್ ಎಂ.ಎಸ್. ಮುಖ್ಯ ಅತಿಥಿಯಾಗಿ ಭಾಗವಹಿಸುವರು.

ಮೈಸೂರು ಬನ್ನಿಮಂಟಪದ ಉದ್ದೇಶಿತ ನೂತನ ಬಸ್‌ನಿಲ್ದಾಣ ಶಂಕುಸ್ಥಾಪನೆಗೆ ಎಂಜಿಪಿ ವಿರೋಧ

ಕಾರ್ಯಕ್ರಮ ಮುಂದೂಡಲು ಸಿಎಂ ಸಿದ್ದರಾಮಯ್ಯರಿಗೆ ಆಗ್ರಹ



ಭಾಮಿ ವಿ.ಶೆಣೈ



ಮೈಸೂರು, ಜು.16(ಎಸ್‌ಪಿಎನ್)–ಮೈಸೂರಿನ ಬನ್ನಿಮಂಟಪದಲ್ಲಿ ಪ್ರಸ್ತಾಪಿತ ನೂತನ ಬಸ್ ನಿಲ್ದಾಣಕ್ಕೆ ಜು.19 ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಶಿಲಾನ್ಯಾಸ ನೆರವೇರಿಸುತ್ತಿರುವುದಕ್ಕೆ ಮೈಸೂರು ಗ್ರಾಹಕ ಪರಿಷತ್ ತೀವ್ರವಾಗಿ ವಿರೋಧಿಸಿದೆ. ಈ ಯೋಜನೆ ವಿರುದ್ಧ 10 ಸಾವಿರಕ್ಕೂ ಅಧಿಕ ಜನರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಇ–ಮೇಲ್(cm.kar@nic.in) ಕಳುಹಿಸಿ ತಮ್ಮ ಪ್ರತಿರೋಧ ವ್ಯಕ್ತಪಡಿಸಬೇಕು ಎಂದು ಮನವಿ ಮಾಡಿದೆ.

ಪ್ರಜಾಪ್ರಭುತ್ವದಲ್ಲಿ ನಂಬಿಕೆಯಿಟ್ಟಿರುವ ಜವಾಬ್ದಾರಿಯುತ ಸರ್ಕಾರ, ಲಕ್ಷಾಂತರ ಜನರಿಗೆ ಅನುಕೂಲವಾಗುವ ಯೋಜನೆಗಳನ್ನು ಅನುಷ್ಠಾನಗೊಳಿಸುವ ಮುನ್ನ ತಜ್ಞರು, ಸಂಘ–ಸಂಸ್ಥೆಗಳಿಂದ ಮಾಹಿತಿ ವಿನಿಮಯ ಮಾಡಿಕೊಂಡು, ಯೋಜನೆ ಬೇಕೇ–ಬೇಡವೇ ಎಂದು ಚರ್ಚಿಸಿ ತೀರ್ಮಾನ ತೆಗೆದುಕೊಳ್ಳುತ್ತಿದೆ. ಆದರೆ, ಪ್ರಸ್ತುತ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ಯಾವುದೇ ಸಲಹೆ ಪಡೆಯದೇ ಏಕಾಏಕಿ ನೂತನ ಬಸ್ ನಿಲ್ದಾಣ(ಶಾಶ್ವತ) ಕಾಮಗಾರಿಗೆ ಶಿಲಾನ್ಯಾಸ ನೆರವೇರಿಸುತ್ತಿರುವುದು ಸರ್ವಾಧಿಕಾರಿಯ ಸಂಕೇತವಾಗಿದೆ ಎಂದು ಆರೋಪಿಸಿದೆ.

ಹೊಸ ಬಸ್‌ನಿಲ್ದಾಣ ಶಂಕುಸ್ಥಾಪನೆಗೆ ಮೈಸೂರು ಗ್ರಾಹಕರ ಪರಿಷತ್ ವಿರೋಧಿಸುವುದಿಲ್ಲ. ಆದರೆ, ಶಿಲಾನ್ಯಾಸಕ್ಕೆ ಆಯ್ಕೆ ಮಾಡಿಕೊಂಡಿರುವ ಜಾಗದ ಕುರಿತು ನಮ್ಮ ವಿರೋಧವಿದೆ. ಸಾಂಸ್ಕೃತಿಕ ನಗರಿ, ಅರಮನೆ ನಗರಿ ಮೈಸೂರು ದಿನದಿಂದ ದಿನಕ್ಕೆ ಬೆಳವಣಿಗೆಯಾಗುತ್ತಿದೆ. ಪ್ರವಾಸೋದ್ಯಮ, ಕೈಗಾರಿಕೆ, ಶೈಕ್ಷಣಿಕ, ಸಾಂಸ್ಕೃತಿಕ ಹಾಗೂ ವೈದ್ಯಕೀಯ ಕ್ಷೇತ್ರದ ಹಬ್ ಆಗಿ ಬೆಳವಣಿಗೆಯಾಗುತ್ತಿರುವುದರಿಂದ ಮೈಸೂರಲ್ಲಿ ಸಂಚಾರ ದಟ್ಟಣೆ ಹೆಚ್ಚಾಗುತ್ತಿದೆ.

ಅಂತೆಯೇ ಮೈಸೂರಿಗೆ ಬರುವ ದೇಶ–ವಿದೇಶಿ ಪ್ರವಾಸಿಗರ ಸಂಖ್ಯೆ ಹೆಚ್ಚಾಗುತ್ತಿದ್ದು, ಮುಂದೆ ಈ ಬಸ್ ನಿಲ್ದಾಣದ ಕಾರ್ಯಾಚರಣೆಗೂ ಜಾಗದ ಸಮಸ್ಯೆ ಉಂಟಾಗಿ ಮತ್ತೆ ಬೇರೆ ಸ್ಥಳದಲ್ಲಿ ಬಸ್ ನಿಲ್ದಾಣ ಸ್ಥಾಪನೆಗೆ ಮುಂದಾದರೆ, ಈಗ ನಿರ್ಮಿಸಿರುವ ನಿಲ್ದಾಣಕ್ಕೆ ವೆಚ್ಚವಾಗುವ ಕೋಟ್ಯಾಂತರ ರೂ. ತೆರಿಗೆದಾರರ ಹಣ ಪೋಲಾಗುವುದಿಲ್ಲವೇ? ಹಾಗಾಗಿ ರಾಜ್ಯ ಸರ್ಕಾರ ತಜ್ಞರ ತಂಡ ರಚಿಸಿ, ಆ ತಂಡ ಶಿಫಾರಸ್ಸು ಮಾಡುವ ಜಾಗದಲ್ಲಿ (ಈಗ ಶಿಲಾನ್ಯಾಸ ನೆರವೇರಿಸುವ ಜಾಗವಾದರೂ ಸರಿ) ಶಾಶ್ವತ ಬಸ್‌ನಿಲ್ದಾಣ ನಿರ್ಮಾಣ ಮಾಡಬೇಕು. ಅಲ್ಲಿಯವರೆಗೆ ತಾತ್ಕಾಲಿಕ ಜಾಗದಲ್ಲಿ ಹೆಚ್ಚುವರಿ ಬಸ್‌ನಿಲ್ದಾಣ ಕಾರ್ಯಾಚರಣೆ ಮಾಡಲು ಸರ್ಕಾರ ಸೂಚಿಸಬೇಕು ಎಂದು ಎಂಜಿಪಿ ಸಂಸ್ಥಾಪಕ ಅಧ್ಯಕ್ಷ ಭಾಮಿ ವಿ.ಶೆಣೈ ಮನವಿ ಮಾಡಿದ್ದಾರೆ.

ನೂತನ ಬಸ್ ನಿಲ್ದಾಣ ಯೋಜನೆಗೆ ಯೋಜಿತ ಮಾಸ್ಟರ್ ಪ್ಲಾನ್ ಕೂಡ ಇಲ್ಲದೆ ತರಾತುರಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಶಿಲಾನ್ಯಾಸ ನೆರವೇರಿಸುತ್ತಿರುವುದು ಸಾಕಷ್ಟು ಅನುಮಾನಕ್ಕೆ ಎಡೆಮಾಡಿಕೊಡುತ್ತಿದ್ದು, ಈ ಕೂಡಲೇ ಜು.19ರಂದು ನೆರವೇರಿಸಲಿರುವ ಶಿಲಾನ್ಯಾಸ ಕಾರ್ಯಕ್ರಮವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಮುಂದೂಡಬೇಕು ಎಂದು ಒತ್ತಾಯಿಸಿ ಇ–ಮೇಲ್ ಕಳುಹಿಸಲಾಗುತ್ತಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀ ಪ್ರೀತಮ್ ಎಂ. ಗೌಡ
ನಿಧನ : 07-07-2025

ಇವರು ದಿನಾಂಕ 07-07-2025ನೇ ಸೋಮವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ ದಿ: 17-07-2025 ಗುರುವಾರ ಬೆಳಗ್ಗೆ 10:30 ಗಂಟೆಗೆ ಉತ್ತರ ಕ್ರಿಯಾದಿ ಕಾರ್ಯವನ್ನು ನಮ್ಮ ಸ್ವಗೃಹ #257 ಸಮುದಾಯ ಭವನ ರೋಡ್ ಮಂಚೇಗೌಡನ ಕೊಪ್ಪಲು ಮೈಸೂರು ಇಲ್ಲಿ ಏರ್ಪಡಿಸಲಾಗಿದೆ. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ

ದುಃಖತಪ್ತರು: ಮೃತರ ತಂದೆ, ತಾಯಿ ಮತ್ತು ಕುಟುಂಬವರ್ಗದವರು ಹಾಗೂ ಬಂಧು–ಮಿತ್ರರು

ಮೊದಲನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 1 ವರ್ಷವಾಯಿತು ನಿನ್ನ ಆತ್ಮಕ್ಕೆ ದೇವರು ಸದ್ಗತಿಯನ್ನುಂಟು ಮಾಡಲಿ ಎಂದು ಪ್ರಾರ್ಥಿಸುತ್ತೇವೆ. ನಿನ್ನ ನೆನಪು ನಮ್ಮಲಿ ಇಂದಿಗೂ ಅಮರವಾಗಿದೆ

ದುಃಖತಪ್ತರು:ತಾಯಿ: ಸಿದ್ದಮ್ಮ ಮತ್ತು ಪತ್ನಿ ಹಾಗೂ ನಾಗೇಗೌಡರ ಕುಟುಂಬವರ್ಗದವರು

ಶ್ರೀ ವಿಜಯ್ ಭಾಸ್ಕರ್ ಎನ್ (ಪ್ರೇಮ್)
ಮರಣ: 17.07.2024

ಎರಡನೇ ವರ್ಷದ ಪುಣ್ಯ ಸ್ಮರಣೆ



ನೀವು ನಮ್ಮನ್ನಗಲಿ ಇಂದಿಗೆ 2 ವರ್ಷ ಕಳೆದರೂ ನಿಮ್ಮ ನೆನಪು ನಮ್ಮೆಲ್ಲರ ಹೃದಯದಲ್ಲಿ ಇಂದಿಗೂ ಅಮರವಾಗಿದೆ

ದುಃಖತಪ್ತರು: ಪತ್ನಿ: ಕವಿತ, ಮಕ್ಕಳು ಹಾಗೂ ಲೇಟ್ ಪರಂಗಪ್ಪ ರಾಜಣ್ಣ ಕುಟುಂಬವರ್ಗ

ಆರ್.ಸುರೇಶ್
ನಿಧನ: 17.07.2023

ತಿದ್ದುಪಡಿ

ದಿನಾಂಕ 16-7-2025 ರಂದು ಮೈಸೂರು ಮಿತ್ರ ಸಂಚಿಕೆಯಲ್ಲಿ ಕಂಪಲಾಪುರ ಗ್ರಾ.ಪಂ. ಕೆರೆಗಳ ಹರಾಜು ಪ್ರಕಟಣೆಯಲ್ಲಿ ಕ್ರ.ಸಂ.2 ರಲ್ಲಿ ಬೆಕ್ಯಾ ಗ್ರಾಮದ ಮಾರನಕಟ್ಟೆ ಎಂಬುದಾಗಿದ್ದು, ಅದನ್ನ ಬಾರಕನಕಟ್ಟೆ ಕೆರೆ ಎಂದು ಓದಿಕೊಳ್ಳಬೇಕಾಗಿ ತಿದ್ದುಪಡಿ ಮಾಡಲಾಗಿದೆ.

CHANGE OF NAME

I NAVEEN KUMAR M S/O Meravegowda R/O # 142, Varuna Hobali, S G S Asharama Post, Gudumadana Halli, Mysore, Karnataka - 570025, have changed the name of my minor daughter PUNARVIKA N aged 04 years and she shall hereafter be known as SHACHIKA N.

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ನನ್ನ ಕಕ್ಷಿದಾರರು ಅದರ ಮಾಲೀಕರಾದ, ಮೈಸೂರು ನಗರ, ಕುವೆಂಪುನಗರ, ಇ ಅಂಡ್ ಎಫ್ ಬ್ಲಾಕ್, ತೊಣಚಿಕೊಪ್ಪಲ್, ಜಯನಗರ, #810 ರ ನಿವಾಸಿಯಾದ (1) ಅಸ್ಮ ಬಾನು ಕೋಂ. ಲೇಟ್.ಎ.ಜಾಕಿರ್ ಹುಸ್ಸೈನ್, (2) ಮೊಹಮ್ಮದ್ ಶಿರಾಜ್ ಜೆ. ಬಿನ್. ಲೇಟ್. ಎ. ಜಾಕಿರ್ ಹುಸ್ಸೈನ್, (3) ಶರಿಯ ಕೌಸರ್ ಬಿನ್ ಲೇಟ್. ಎ. ಜಾಕಿರ್ ಹುಸ್ಸೈನ್, ಇವರುಗಳಿಂದ ಖರೀದಿಸಲು ಉದ್ದೇಶಿಸಿರುತ್ತಾರೆ, ಷೆಡ್ಯೂಲ್ ಸ್ವತ್ತಿನ ಮೇಲೆ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಭಾಗಾಂಶ, ಋಣ, ವ್ಯಾಜ್ಯ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಏಳು (07) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಭಾಗಾಂಶ, ಋಣ, ವ್ಯಾಜ್ಯ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಸಂಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು. ಆನಂತರ ಬರುವ ಮೇಲ್ಕಂಡ ಯಾವುದೇ ರೀತಿಯ ಆಕ್ಷೇಪಣೆಗಳಿಗೆ ನನ್ನ ಕಕ್ಷಿದಾರರು ನಿರ್ಬಂಧಿತರಾಗುವುದಿಲ್ಲ.

ಷೆಡ್ಯೂಲ್: ಮೈಸೂರು ನಗರ, ಚಾಮರಾಜ ಮೊಹಲ್ಲಾ, ಕುವೆಂಪುನಗರ, ಇ ಅಂಡ್ ಎಫ್ ಬ್ಲಾಕ್, ತೊಣಚಿಕೊಪ್ಪಲ್, ಜಯನಗರ ಇಲ್ಲಿರುವ ಪೂರ್ವ–ಪಶ್ಚಿಮ: 16.764034 ಮೀಟರ್, ಉತ್ತರ – ದಕ್ಷಿಣ : 9.144018 ಮೀಟರ್, ಒಟ್ಟು ವಿಸ್ತೀರ್ಣ: 153.2906 ಚದರ ಮೀಟರ್ ಅಳತೆಯ ಆಸ್ತಿ ಸಂಖ್ಯೆ: 810 (ನಮೂನೆ–2 ರ ಪ್ರಕಾರ ಸ್ವತ್ತಿನ ಸಂಖ್ಯೆ: 16-7-539-84) ಮತ್ತು ಇದರಲ್ಲಿ ಕಟ್ಟಿರುವ ಕಟ್ಟಡಕ್ಕೆ ಚಕ್ಕುಬಂದಿ: ಪೂರ್ವಕ್ಕೆ:– ರಸ್ತೆ, ಪಶ್ಚಿಮಕ್ಕೆ:– ಸ್ವತ್ತಿನ ನಂ.789, ಉತ್ತರಕ್ಕೆ:– ಸ್ವತ್ತಿನ ನಂ.811, ದಕ್ಷಿಣಕ್ಕೆ:– ಸ್ವತ್ತಿನ ನಂ.809

Sd/- Prakash Kalappa
KAR-1996-2000, Advocate &
Legal Consultant, #2-3, First Floor,
PRI Complex, 67/7A, New Sayyajirao
Road, Fort Mohalla, Mysore 570004
Cell: 93431 12535
E-mail: mnprakashkalappa@gmail.com

ಮೈಸೂರು :16/07/2025

ಸಾರ್ವಜನಿಕರ ತಿಳುವಳಿಕೆಗಾಗಿ

ನನ್ನ ಕಕ್ಷಿದಾರರಾದ ಶ್ರೀ ಶಿವಮೂರ್ತಿ ಗುರುಬಸವ ದೇವರು ಬಿನ್ ಗುರುಬಸವ ದೇವರು ಮತ್ತು ಶ್ರೀಮತಿ ಲಲಿತ.ಆರ್.ಎಸ್ ಕೋಂ ಶಿವಮೂರ್ತಿ, ವಾಸ ನಂ.41, ಶಿವನಿವಾಸ, ಸದುಲ್ಲಾ ಸ್ಟ್ರೀಟ್, ಟಿ ನಗರ, ತಿಯಾಗರಾಯ ನಗರ, ಚೆನ್ನೈ, ತಮಿಳುನಾಡು–600 017 ರವರುಗಳು ಐಟಂ ನಂ.1 ರಿಂದ 5 ರಲ್ಲಿ ನಮೂದಿಸಿರುವ ಅನುಸೂಚಿ ಸ್ವತ್ತುಗಳನ್ನು ಅದರ ಮಾಲೀಕರಾದ 1) ಶ್ರೀ ಲೋಕೇಶ್ ಬಿನ್ ಚುಂಚಯ್ಯ, 2) ಶ್ರೀಮತಿ ಜಯಮ್ಮ ಕೋಂ ಶ್ರೀ ಲೋಕೇಶ್, 3) ಶ್ರೀ ಸುಹಾಸ್.ಎ.ಎಲ್ ಬಿನ್ ಶ್ರೀ ಲೋಕೇಶ್, 4) ಶ್ರೀಮತಿ ಸ್ನೇಹ ಲೋಕೇಶ್ ಬಿನ್ ಶ್ರೀ ಲೋಕೇಶ್, ಕೋಂ ಶ್ರೀನಾಥ್ ಮುನಿಯಪ್ಪ, ಇವರ ವಾಸ ನಂ.879, 1ನೇ ಕ್ರಾಸ್, 7ನೇ ಮೇನ್, 2ನೇ ಹಂತ ಬೋಗಾದಿ, ಚಾಮರಾಜ ಮೊಹಲ್ಲಾ, ಮೈಸೂರು–570 006, 5) ಶ್ರೀಮತಿ ಸಹನಾ ಲೋಕೇಶ್ ಬಿನ್ ಶ್ರೀ ಲೋಕೇಶ್, ಕೋಂ ಶರತ್, ಇವರ ವಾಸ ನಂ.3367, 20ನೇ ಇ ಮೇನ್ ರೋಡ್, 2ನೇ ಹಂತ, ವಿಜಯನಗರ, ಮೈಸೂರು–570 017, ರವರಿಂದ ಕ್ರಯಕ್ಕೆ ಪಡೆಯಲು ಇಚ್ಛಿಸಿದ್ದು, ಅನುಸೂಚಿ ಸ್ವತ್ತುಗಳ ಸಂಬಂಧವಾಗಿ ಬೇರೆ ಯಾರಿಗಾದರೂ, ಬ್ಯಾಂಕ್, ಸಂಘ ಸಂಸ್ಥೆಗಳಿಗಾಗಲೀ ಅಥವಾ ಹಣಕಾಸು ಸಂಸ್ಥೆಗಳಿಗಾಗಲೀ ಯಾವುದೇ ಹಕ್ಕು, ಆಸಕ್ತಿ, ಸ್ವಾಮ್ಯಗಳು ಇದ್ದಲ್ಲಿ, ಈ ತಿಳುವಳಿಕೆ ಪತ್ರವು ಪ್ರಕಟವಾದ ದಿನಾಂಕದಿಂದ ಹದಿನೈದು ದಿನಗಳ ಒಳಗಾಗಿ ತಮಗಿರುವ ಹಕ್ಕು, ಆಸಕ್ತಿ ಮತ್ತು ಸ್ವಾಮ್ಯಗಳ ಸಂಬಂಧವಾಗಿ ಯಾವುದೇ ರೀತಿಯ ತಕರಾರುಗಳು ಇದ್ದಲ್ಲಿ, ದಾಖಲೇ ಸಹಿತ ನನ್ನ ಕಕ್ಷಿದಾರರಿಗಾಗಲೀ ಅಥವಾ ನನಗಾಗಲೀ ಲಿಖಿತವಾಗಿ ತಿಳಿಸತಕ್ಕದ್ದು. ಒಂದು ವೇಳೆ ಯಾವುದೇ ತಕರಾರು ಬಾರದೇ ಇದ್ದಲ್ಲಿ, ಯಾರಿಂದಲೂ ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ನನ್ನ ಕಕ್ಷಿದಾರರು ಅನುಸೂಚಿ ಸ್ವತ್ತನ್ನು ಕ್ರಯಕ್ಕೆ ಪಡೆಯುವವರಿದ್ದು, ನಂತರ ಉಂಟಾಗತಕ್ಕ ಯಾವುದೇ ತಂಟೆ ತಕರಾರುಗಳು ನನ್ನ ಕಕ್ಷಿದಾರರನ್ನು ಬದ್ಧಪಡಿಸುವುದಿಲ್ಲವೆಂದು ತಿಳಿಯತಕ್ಕದ್ದು.

ಅನುಸೂಚಿ ಸ್ವತ್ತಿನ ವಿವರ

ಐಟಂ ನಂ.1:– ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಮಾದಹಳ್ಳಿ ಗ್ರಾಮಕ್ಕೆ ಸೇರಿದ ಹಳೇ ಸರ್ವೆ ನಂ.122/1 (ಹೊಸ ಸರ್ವೆ ನಂ.122/6) ರಲ್ಲಿರುವ 1–03 (ಒಂದು ಎಕರೆ ಮೂರು ಗುಂಟೆ) ಜಮೀನು, ಇದಕ್ಕೆ ಚಕ್ಕುಬಂದಿ: ಪೂರ್ವ: ಲೋಕೇಶ್ ರವರಿಗೆ ಸೇರಿದ ಸರ್ವೆ ನಂ.94/1 ರ ಜಮೀನು, ಪಶ್ಚಿಮ : ಲೋಕೇಶ್ ರವರಿಗೆ ಸೇರಿದ ಸರ್ವೆ ನಂ.122/7 ರ ಜಮೀನು, ಉತ್ತರ: ಮಹಾಲಿಂಗಪ್ಪ ರವರಿಗೆ ಸೇರಿದ ಸರ್ವೆ ನಂ.122/9 ರ ಜಮೀನು, ದಕ್ಷಿಣ : ಲೋಕೇಶ್ ರವರಿಗೆ ಸೇರಿದ ಸರ್ವೆ ನಂ.175/2 ರ ಜಮೀನು.

ಐಟಂ ನಂ.2:– ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಮಾದಹಳ್ಳಿ ಗ್ರಾಮಕ್ಕೆ ಸೇರಿದ ಹಳೇ ಸರ್ವೆ ನಂ.122/1 (ಹೊಸ ಸರ್ವೆ ನಂ.122/7) ರಲ್ಲಿರುವ 1–04 (ಒಂದು ಎಕರೆ ನಾಲ್ಕು ಗುಂಟೆ) ಜಮೀನು, ಇದಕ್ಕೆ ಚಕ್ಕುಬಂದಿ: ಪೂರ್ವ: ಲೋಕೇಶ್ ರವರಿಗೆ ಸೇರಿದ ಸರ್ವೆ ನಂ.122/6 ರ ಜಮೀನು, ಪಶ್ಚಿಮ : ಪುಟ್ಟಮ್ಮ ರವರಿಗೆ ಸೇರಿದ ಸರ್ವೆ ನಂ.122/1 ರ ಜಮೀನು, ಉತ್ತರ : ಅನಿಲ್ ಕುಮಾರ್ ರವರಿಗೆ ಸೇರಿದ ಸರ್ವೆ ನಂ.122/5 ರ ಜಮೀನು, ದಕ್ಷಿಣ : ಲೋಕೇಶ್ ರವರಿಗೆ ಸೇರಿದ ಸರ್ವೆ ನಂ.175/3 ರ ಜಮೀನು,

ಐಟಂ ನಂ.3:– ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಮಾದಹಳ್ಳಿ ಗ್ರಾಮಕ್ಕೆ ಸೇರಿದ ಹಳೇ ಸರ್ವೆ ನಂ.122/5 (ಹೊಸ ಸರ್ವೆ ನಂ.122/10) ರಲ್ಲಿರುವ 0–31 (ಮೂವತ್ತೊಂದು ಗುಂಟೆ) ಜಮೀನಿನ ಪೈಕಿ 0–05.08 (ಐದುವರೆ ಗುಂಟೆ) ಜಮೀನು, ಇದಕ್ಕೆ ಚಕ್ಕುಬಂದಿ: ಪೂರ್ವ: ಜಿ.ಎನ್.ಅನಿಲ್ ಕುಮಾರ್ ರವರಿಗೆ ಸೇರಿದ ಸರ್ವೆ ನಂ.122/5 ರ ಜಮೀನು, ಪಶ್ಚಿಮ : ಮಂಜುನಾಥ್ ರವರಿಗೆ ಸೇರಿದ ಸರ್ವೆ ನಂ.122/3 ರ ಜಮೀನು, ಉತ್ತರ : ರಸ್ತೆ, ದಕ್ಷಿಣ : ಲೋಕೇಶ್ ರವರಿಗೆ ಸೇರಿದ ಸರ್ವೆ ನಂ.122/7 ರ ಜಮೀನು,

ಐಟಂ ನಂ.4:– ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಮಾದಹಳ್ಳಿ ಗ್ರಾಮಕ್ಕೆ ಸೇರಿದ ಹಳೇ ಸರ್ವೆ ನಂ.175 (ಹೊಸ ಸರ್ವೆ ನಂ.175/2) ರಲ್ಲಿರುವ 1–15 (ಒಂದು ಎಕರೆ ಹದಿನೈದು ಗುಂಟೆ) ಜಮೀನು, ಇದಕ್ಕೆ ಚಕ್ಕುಬಂದಿ: ಪೂರ್ವ: ಸುರೇಶ್ ಮತ್ತು ಲೋಕೇಶ್ ರವರಿಗೆ ಸೇರಿದ ಜಮೀನು, ಪಶ್ಚಿಮ : ಲೋಕೇಶ್ ರವರಿಗೆ ಸೇರಿದ ಸರ್ವೆ ನಂ.175/3 ರ ಜಮೀನು,ಉತ್ತರ : ಲೋಕೇಶ್ ರವರಿಗೆ ಸೇರಿದ ಸರ್ವೆ ನಂ.122/6 ರ ಜಮೀನು, ದಕ್ಷಿಣ : ಅರಣ್ಯ ಜಮೀನು.

ಐಟಂ ನಂ.5:– ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಮಾದಹಳ್ಳಿ ಗ್ರಾಮಕ್ಕೆ ಸೇರಿದ ಹಳೇ ಸರ್ವೆ ನಂ.175 (ಹೊಸ ಸರ್ವೆ ನಂ.175/3) ರಲ್ಲಿರುವ 1–15 (ಒಂದು ಎಕರೆ ಹದಿನೈದು ಗುಂಟೆ) ಜಮೀನು, ಇದಕ್ಕೆ ಚಕ್ಕುಬಂದಿ:–

ಪೂರ್ವ: ಲೋಕೇಶ್ ರವರಿಗೆ ಸೇರಿದ ಸರ್ವೆ ನಂ.175/2 ರ ಜಮೀನು, ಪಶ್ಚಿಮ : ಎನ್.ಬಿ.ಭರತ್ ರವರಿಗೆ ಸೇರಿದ ಸರ್ವೆ ನಂ.175/4 ರ ಜಮೀನು, ಉತ್ತರ : ಲೋಕೇಶ್ ರವರಿಗೆ ಸೇರಿದ ಸರ್ವೆ ನಂ.122/7 ರ ಜಮೀನು, ದಕ್ಷಿಣ : ಅರಣ್ಯ ಜಮೀನು.

ಸಹಿ/– ಜಯಕುಮಾರ್ ಎಸ್, BA, LL.B., ವಕೀಲರು, Enr. No.KAR/171/14
#42, ಶ್ರೀವನ ಲೇಔಟ್, ರಿಂಗ್ ರಸ್ತೆ ಹತ್ತಿರ, ಬೋಗಾದಿ, ಮೈಸೂರು,
ದೂರವಾಣಿ :9901264007

ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,

ಮೆಗಾ ಡೈರಿ ಸಂಕೀರ್ಣ, ಬನ್ನೂರು ರಸ್ತೆ, ಆಲನಹಳ್ಳಿ ಅಂಚೆ, ಮೈಸೂರು – 570028.
ದೂರವಾಣಿ ಸಂಖ್ಯೆ:0821-2474475, ಫ್ಯಾಕ್ಸ್ ನಂ.0821-2474476,
ಇ–ಮೇಲ್ : purmymul@gmail.com

ಟೆಂಡರ್ ಪ್ರಕಟಣೆ (ಇ–ಟೆಂಡರ್ ಮುಖಾಂತರ ಮಾತ್ರ)

ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟಕ್ಕೆ ಅವಶ್ಯವಿರುವ ಈ ಕೆಳಕಂಡ ಸಾಮಾಗ್ರಿಗಳನ್ನು ಖರೀದಿಸಲು ಅರ್ಹ ಟೆಂಡರ್‌ದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಮುಖೇನ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ದಾಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್ ಫಾರಂ ಅಡಿ https://kppp.karnataka.gov.in ಅಪ್‌ಲೋಡ್ ಮಾಡಬಹುದಾಗಿರುತ್ತದೆ.

ಕ್ರ. ಸಂ	ಟೆಂಡರ್ ಪ್ರಕಟಣೆ ಮತ್ತು ದಿನಾಂಕ	ಸೇವೆಯ ವಿವರ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ
1	KMF/2024-25/ IND1538	ಒಕ್ಕೂಟಕ್ಕೆ ಅಗತ್ಯವಿರುವ ವಾಟರ್ ಸಾಫ್ಟನರ್ ಮತ್ತು ಆರ್.ಒ.ಮೆಂಬರೇನ್ ಅನ್ನು ಖರೀದಿಸಿ ಅಳವಡಿಸಲು ಹಾಗೂ ವಾರ್ಷಿಕ ದರ ಗುತ್ತಿಗೆ ಆಧಾರದ ಮೇಲೆ ಗೋಡೆ ಜಾಹಿರಾತು ಮಾಡಿಸುವ ಬಗ್ಗೆ.	27.07.2025 ಸಂಜೆ 5.00 ಗಂಟೆಯವರೆಗೆ
2	KMF/2024-25/ IND1535	ನಂದಿನಿ ಕ್ಷೀರಕೇಂದ್ರ/ಫ್ರಾಂಚೈಸಿ ಮಳಿಗೆಗಳಿಗೆ ಬ್ರಾಂಡಿಂಗ್ ಕೆಲಸವನ್ನು ಮಾಡಿಸುವ ಸಂಬಂಧ.	
3	KMF/2024-25/ SE3729	ಮೈಸೂರು ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ನಂದಿನಿ ಹಾಲು ಹಾಗೂ ಹಾಲಿನ ಉತ್ಪನ್ನಗಳ ಹೋರ್ಡಿಂಗ್ ಮತ್ತು ಕ್ಯಾಂಟಿಲಿವರ್‌ಗಳನ್ನು ಅಳವಡಿಸುವ ಬಗ್ಗೆ.	
4	KMF/2024-25/ IND1539	ಒಕ್ಕೂಟದ ಉಪಹಾರ ಗೃಹಕ್ಕೆ ಅಗತ್ಯವಿರುವ ದಿನಸಿ ಸಾಮಾಗ್ರಿಗಳನ್ನು ವಾರ್ಷಿಕ ದರ ಗುತ್ತಿಗೆ ಆಧಾರದ ಮೇಲೆ ಖರೀದಿಸುವ ಬಗ್ಗೆ.	

ಹೆಚ್ಚಿನ ಮಾಹಿತಿಗಾಗಿ ಖರೀದಿ ವಿಭಾಗವನ್ನು (6366430821,9482231739) ಸಂಪರ್ಕಿಸಬಹುದಾಗಿದೆ.

ಸಹಿ/–, ವ್ಯವಸ್ಥಾಪಕ ನಿರ್ದೇಶಕರು
ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟ ನಿ.,

ಗೋವಿಂದನಹಳ್ಳಿ ಗ್ರಾಮ ಪಂಚಾಯಿತಿ ಕಾರ್ಯಾಲಯ

ಕಸಬಾ ಹೋಬಳಿ, ಹುಣಸೂರು ತಾಲ್ಲೂಕು

ಹರಾಜು ಪ್ರಕಟಣೆ

ದಿನಾಂಕ:–05.08.2025ನೇ ಮಂಗಳವಾರ ಅಪರಾಹ್ನ 12.30 ಗಂಟೆಗೆ ಸರಿಯಾಗಿ ಗೋವಿಂದನಹಳ್ಳಿ ಗ್ರಾಮಪಂಚಾಯಿತಿ ವ್ಯಾಪ್ತಿಗೆ ಸೇರಿದ ಈ ಕೆಳಕಂಡ ಗ್ರಾಮದ ಕೆರೆಯ ಮೀನು ಪಾಶುವಾರು ಹಕ್ಕಿನ ಟೆಂಡರ್/ ಬಹಿರಂಗ ಹರಾಜನ್ನು ಗ್ರಾಮ ಪಂಚಾಯಿತಿ ಕಾರ್ಯಾಲಯದ ಆವರಣದ ಹತ್ತಿರ ನಡೆಸಲಾಗುವುದು. ಆಸಕ್ತಿಯುಳ್ಳವರು ದಿನಾಂಕ: 05.08.2025ರ ಬೆಳಗ್ಗೆ 11.30 ಘಂಟೆ ಒಳಗಾಗಿ ಠೇವಣಿ ಮೊತ್ತ ಪಾವತಿಸಿ ಹರಾಜಿನಲ್ಲಿ ಭಾಗವಹಿಸಬಹುದು ಎಂದು ಈ ಮೂಲಕ ಕೋರಲಾಗಿದೆ.

ಕ್ರ ಸಂ	ಗ್ರಾಮದ ಹೆಸರು	ಕೆರೆಯ ಹೆಸರು	ಠೇವಣಿ ಮೊತ್ತ ರೂ.	ಅವಧಿ
01	ಚಿಕ್ಕಹುಣಸೂರು	ಚಿಕ್ಕಹುಣಸೂರು ಕೆರೆ	10000/–	5 ವರ್ಷಗಳು ಮೇ 2030 ರವರೆಗೆ

ಹೆಚ್ಚಿನ ಮಾಹಿತಿಗಾಗಿ ಗ್ರಾಮ ಪಂಚಾಯಿತಿ ಸಂಪರ್ಕಿಸಬಹುದಾಗಿರುತ್ತದೆ.

ಸಹಿ/– ಅಧ್ಯಕ್ಷರು, ಗೋವಿಂದನಹಳ್ಳಿ ಗ್ರಾಮ ಪಂಚಾಯಿತಿ, ಮೈಸೂರು ತಾಲ್ಲೂಕು

ಸಹಿ/– ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಗೋವಿಂದನಹಳ್ಳಿ ಗ್ರಾಮ ಪಂಚಾಯಿತಿ, ಮೈಸೂರು

ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು

ಸಂಖ್ಯೆಮೈಅಪ್ರಾ/ವಿತ.–4/25–26 ದಿನಾಂಕ : 15.07.2025

"ಪತ್ರಿಕಾ ಪ್ರಕಟಣೆ"

ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೆ, ಶ್ರೀ ಕೆ.ಆರ್.ನಾರಾಯಣರಾವ್ ರವರಿಗೆ ಹೆಬ್ಬಾಳು 2ನೇ ಹಂತ ಬಡಾವಣೆಯಲ್ಲಿ ನಿವೇಶನ ಸಂಖ್ಯೆ: 2255, ಅಳತೆ **9.00 x 12.00** ಮೀಟರ್ ನಿವೇಶನವು ಪ್ರಾಧಿಕಾರದಿಂದ ದಿನಾಂಕ:27.09.1991 ರಂದು ಮಂಜೂರಾಗಿರುತ್ತದೆ. ನಂತರ ದಿನಾಂಕ: 31.07.1996ರಂದು ಸ್ವಾಧೀನ ಪತ್ರವನ್ನು ನೀಡಲಾಗಿರುತ್ತದೆ. ಮೂಲ ಮಂಜೂರಾತಿದಾರರಾದ ಶ್ರೀ ಕೆ.ಆರ್.ನಾರಾಯಣರಾವ್ ರವರು ದಿನಾಂಕ: 29.01.2023 ರಂದು ಮರಣ ಹೊಂದಿರುತ್ತಾರೆ. ಸದರಿಯವರ ಪತ್ನಿ ಶ್ರೀಮತಿ ವಿನೋದಾ ಎನ್.ರಾವ್ ಮತ್ತು ಅವರ ಮಕ್ಕಳಾದ ಶ್ರೀ ಶಶಿಧರ್ ಎನ್.ರಾವ್ ಮತ್ತು ಶ್ರೀ ಶೇಖರ್ ಎನ್.ರಾವ್ ರವರು ಮೈಸೂರು ಮಹಾನಗರ ಪಾಲಿಕೆಯಿಂದ ನೀಡಿರುವ ಮರಣ ಪ್ರಮಾಣ ದಿನಾಂಕ: 09.02.2023 ಹಾಗೂ ಉಪ ತಹಶೀಲ್ದಾರ್, ಕಸಬಾ ಹೋಬಳಿ, ಮೈಸೂರು ತಾಲ್ಲೂಕು ಮತ್ತು ಜಿಲ್ಲೆ ರವರು ನೀಡಿರುವ ವಂಶವೃಕ್ಷದ **RD5018882784600**, ದಿನಾಂಕ: 30.05.2023ರ ಪ್ರತಿ ಸಲ್ಲಿಸಿರುತ್ತಾರೆ ಹಾಗೂ ಅಗತ್ಯ ದಾಖಲಾತಿಗಳನ್ನು ಸಲ್ಲಿಸಿ ಪೌತಿ ವರ್ಗಾವಣೆ ಕೋರಿರುತ್ತಾರೆ.

ಅರ್ಜಿದಾರರಾದ ಶ್ರೀಮತಿ ವಿನೋದಾ ಎನ್.ರಾವ್ ಹಾಗೂ ಮಕ್ಕಳಾದ ಶ್ರೀ ಶಶಿಧರ್ ಎನ್.ರಾವ್ ಮತ್ತು ಶ್ರೀ ಶೇಖರ್ ಎನ್.ರಾವ್ ರವರು ಪೌತಿ ವರ್ಗಾವಣೆ ಅರ್ಜಿ ಸಲ್ಲಿಸಿರುವುದರಿಂದ ಸದರಿಯವರ ಹೆಸರಿಗೆ ವರ್ಗಾವಣೆ ಮಾಡುವ ಸಂಬಂಧ ಯಾರಿಂದಾದರೂ ಆಕ್ಷೇಪಣೆಗಳಿದ್ದಲ್ಲಿ ಈ ಪ್ರಕಟಣೆ ಹೊರಡಿಸಿದ 30 ದಿವಸಗಳೊಳಗೆ ಲಿಖಿತವಾಗಿ ಆಯುಕ್ತರು, ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು ರವರಿಗೆ ಆಕ್ಷೇಪಣೆ/ತಕರಾರು ಸಲ್ಲಿಸುವುದು. ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ಅರ್ಜಿದಾರರ ಮನವಿ ಬಗ್ಗೆ ನಿಯಮಾನುಸಾರ ಮುಂದಿನ ಕ್ರಮಕೈಗೊಳ್ಳಲಾಗುವುದು.

ಸಹಿ/– ವಿಶೇಷ ತಹಶೀಲ್ದಾರರು, ವಲಯ ಕಛೇರಿ, ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು